ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	257
ಮಾನ್ಯ ಸದಸ್ಯರ ಹೆಸರು	ಶ್ರೀ ಅಭಯ್ ಪಾಟೀಲ್
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ	10-07-2018

	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ವಿವಿಧ ಪದವಿಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳ ವಿತರಣೆಯಲ್ಲಿ ಹಾಗೂ ಫಲಿತಾಂಶಗಳನ್ನು ಪ್ರಕಟಿಸುವಲ್ಲಿ ಆಗುತ್ತಿರುವ ವಿಳಂಬದಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಹಾಗಿದ್ದಲ್ಲಿ, ಈ ವಿಳಂಬವನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು?	ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಸಾಮ್ಯತೆ ಇಲ್ಲದಿರುವುದರಿಂದ ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಮತ್ತು ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ದಾಖಲಾತಿ, ಪರೀಕ್ಷಾ ವೇಳಾ ಪಟ್ಟಿ ಮತ್ತು ಫಲಿತಾಂಶಗಳ ಪ್ರಕಟಣೆಯಲ್ಲಿ ಏಕರೂಪತೆಯನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರದ ಆದೇಶ ಸಂ. ಇಡಿ 292 ಯುಎನ್ಇ 2016, ದಿನಾಂಕ: 28-07-2016ರಲ್ಲಿ ವೇಳಾಪಟ್ಟಿಗಳನ್ನು ನಿಗದಿಪಡಿಸಿ ಆದೇಶಿಸಿದೆ (ಅನುಬಂಧ-ಅ). ಮುಂದುವರಿದು, ಮೇಲ್ಕಂಡ ಆದೇಶದಂತೆ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ವಿಶ್ವವಿದ್ಯಾಲಯಗಳ ಅಧಿಕಾರಿಗಳಿಗೆ ಸರ್ಕಾರದಿಂದ ಕಾಲ ಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗಿದೆ (ಅನುಬಂಧ (ಆ) – (ಇ)). ವಿಶ್ವವಿದ್ಯಾಲಯಗಳ ಅಂತರ್ಜಾಲ ತಾಣದಲ್ಲಿ ಫಲಿತಾಂಶಗಳನ್ನು ಪ್ರಕಟಿಸಿದ ನಂತರ ಅಂಕಪಟ್ಟಿಗಳನ್ನು ಸಂಬಂಧಿಸಿದ ಕಾಲೇಜುಗಳಿಗೆ/ ಸಂಸ್ಥೆಗಳಿಗೆ ಸಕಾಲದಲ್ಲಿ ಕಳುಹಿಸಲಾಗುತ್ತಿದ್ದು, ಫಲಿತಾಂಶ ಪ್ರಕಟಣೆ ಮತ್ತು ಅಂಕಪಟ್ಟಿಗಳ ವಿತರಣೆಯಲ್ಲಿ ಉಂಟಾಗುವ ತೊಂದರೆಯನ್ನು ಬಗೆಹರಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: ಇಡಿ 236 ಯುಎನ್ಇ 2018

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು.

ಅನುಬಂಧ – ೨

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಕುರಿತು.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಇಡಿ 534 ಯುಆರ್‌ಸಿ 2013, ದಿನಾಂಕ 06-01-2014.

ಪ್ರಸ್ತಾವನೆ:-

ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಏಕರೂಪತೆ ಇಲ್ಲದಿರುವುದರಿಂದ, ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ವ್ಯಾಸಂಗ ಮುಂದುವರೆಸಲು/ ಉದ್ಯೋಗಕ್ಕೆ ಅರ್ಜಿ ಸಲ್ಲಿಸುವಲ್ಲಿ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಸರ್ಕಾರ ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ 2014-15ನೇ ಶೈಕ್ಷಣಿಕ ವರ್ಷದಿಂದ ಏಕರೂಪ ವೇಳಾಪಟ್ಟಿಯನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕ್ರಮವಹಿಸಲು ಆದೇಶಿಸಲಾಗಿತ್ತು. 2016-17ನೇ ಶೈಕ್ಷಣಿಕ ಸಾಲಿಗೂ ಸಹ ಇದೇ ತರಹ ಏಕರೂಪ ವೇಳಾಪಟ್ಟಿಯನ್ನು ಅಳವಡಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ತೀರ್ಮಾನಿಸಲಾಗಿದೆ.

ಪ್ರಸ್ತುತ, ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿರುತ್ತದೆ. ಅದರಂತೆ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 292 ಯುಎನ್‌ಇ 2016, ಬೆಂಗಳೂರು, ದಿನಾಂಕ: 28ನೇ ಜುಲೈ 2016

ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಈ ಕೆಳಗೆ ಸಿದ್ಧಪಡಿಸಿರುವ ಏಕರೂಪ ವೇಳಾಪಟ್ಟಿಯನ್ನು 2016-17ನೇ ಶೈಕ್ಷಣಿಕ ವರ್ಷ ಹಾಗೂ ತದನಂತರದ ಶೈಕ್ಷಣಿಕ ವರ್ಷಗಳಲ್ಲಿಯೂ ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕ್ರಮವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಮುಂದುವರೆದು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿ ವರ್ಷವು ಕಡ್ಡಾಯವಾಗಿ ಸ್ನಾತಕ ಪದವಿಗಳ ಫಲಿತಾಂಶವನ್ನು ಮೇ 31ರ ಒಳಗಾಗಿ ಹಾಗೂ ಸ್ನಾತಕೋತ್ತರ ಪದವಿಗಳ ಫಲಿತಾಂಶವನ್ನು ಜೂನ್ 30ರ ಒಳಗಾಗಿ ಪ್ರಕಟಿಸಬೇಕು. ಈ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ ಆಯಾ ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.

Common Calendar of Events for Under Graduate courses in the Universities

Sl No.	Academic Activity	Range of dates
1.	Re-opening of colleges and Commencement of I Semester Admission	1st June
2.	Commencement of I, III, & V Semester Classes	Between 15th & 30th June
3.	Last date for admission to 1st semester without penal fee	16th July
4.	Last date for admission to 1st Semester with penal fee	30th July
5.	End of I, III, & V Semester Classes	Between 8th & 22nd Oct.
6.	Commencement of Vacation for Teachers	23rd Oct.
7.	Commencement of I, III, & V Sem. Theory Examination	Between 15th Oct. & 2nd Nov.
8.	Commencement of Valuation	Between 25th Oct. & 12th Nov.
9.	Commencement of II, IV & VI Semester Classes	Between 21st Nov. & 1st Dec.
10.	End of the II, IV & VI Semester classes	Between 20th & 31st March
11.	Commencement of Vacation for teachers	1st April
12.	Commencement II, IV & VI Semester Examinations	Between 27th March & 10th April
13.	Commencement of Valuation	Between 10th & 17th April
14.	Announcement of Results	Between 15th & 31st May
15.	Re-opening of Colleges for the next academic year	1st June

Common Calendar of Events for Post Graduate courses in the Universities

Sl No.	Academic Activity	Range of dates
1.	Re-opening of PG Depts./colleges	11th July
2.	Commencement of III Semester Classes.	Between 18th & 30th July
3.	Commencement of I Semester Classes	Between 1st & 10th Aug
4.	End of III Semester Classes	Between 19th &30th Nov
5.	End of I Semester Clases	Between 26th Nov & 3rd Dec
6.	Vacation for Teachers	4th to 30th Dec
7.	Commencement of III Semester Examination	Between 28th Nov - 7th Dec
8.	Commencement of I Semester Examination	Between 5th &10th Dec
9.	Commencement of Valuation of both I & III Semesters	Between 8th &15th Dec
10.	Re-opening of Classes for II & IV Semesters	Between 2nd & 9th Jan
11.	End of II & IV Semesters	Between 29th April & 6th May
12.	Commencement of Theory Examinations	8th May
13.	Commencement of Vacation for Teachers	10th May
14.	Commencement of Valuation	22nd May
15.	Announcement of Results	30th June
16.	Re-opening of PG Depts/Colleges	3rd July
17.	Commencement of III Sem. Classes during the next Academic Year	10th July

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್. ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಹೊರಡಿಸಲಾಗಿದೆ
ದಿನಾಂಕ: 20/7/16
ಶಿಕ್ಷಣ ಇಲಾಖೆ
ಸ್ವೀಕೃತಿ ಮತ್ತು ರವಾನೆ ಶಾಖೆ

ಇವರಿಗೆ:-

1. ಆಯುಕ್ತರು/ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು 02 copy
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿ/ಕುಲಸಚಿವರುಗಳಿಗೆ. 17 copy

ಪ್ರತಿ:-

1. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಅರಮನೆ ರಸ್ತೆ, ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.

***

ಅನುಬಂಧ - ಅ

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 150 ಯುಎನ್ಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 01.04.2017.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು - 560 001.

ಇವರಿಗೆ:

1) ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-560056.
2) ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570005.
3) ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-580033.
4) ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ-577451.
5) ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ-585106.
6) ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು-574199.
7) ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572101.
8) ಕುಲಸಚಿವರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ - 583276.
9) ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
10) ಕುಲಸಚಿವರು, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.
11) ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.
12) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ.
13) ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-570006.
14) ಕುಲಸಚಿವರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586101.
15) ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯ, ಚಾಮರಾಜಪೇಟೆ, ಬೆಂಗಳೂರು.
16) ಕುಲಸಚಿವರು, ರಾಜ್ಯ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
17) ಕುಲಸಚಿವರು, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮೈಸೂರು.

ಮಾನ್ಯರೆ,

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 534 ಯುಆರ್‌ಸಿ 2013, ದಿ: 06.01.2014
2. ಸರ್ಕಾರದ ಆದೇಶ ಸಂಖ್ಯೆ: ಇಡಿ 292 ಯುಎನ್ಇ 2016, ದಿ: 28.07.2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳ ಕಡೆಗೆ ಗಮನ ಸೆಳೆಯಲಾಗಿದೆ. ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಏಕರೂಪ ವೇಳಾಪಟ್ಟಿಯನ್ನು 2016-17ನೇ ಶೈಕ್ಷಣಿಕ ವರ್ಷ ಹಾಗೂ ತದನಂತರದ ವರ್ಷದಲ್ಲಿ ಅಳವಡಿಸಿಕೊಳ್ಳುವಂತೆ ಉಲ್ಲೇಖಿತ (2)ರ ಆದೇಶದಲ್ಲಿ ಸೂಚಿಸಿದ್ದಾಗ್ಯೂ ಬಹುತೇಕ ವಿಶ್ವವಿದ್ಯಾಲಯಗಳು ಏಕರೂಪ ವೇಳಾಪಟ್ಟಿಯನ್ನು ಅಳವಡಿಸಿಕೊಂಡಿಲ್ಲದಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಉಲ್ಲೇಖಿತ (2)ರ ಆದೇಶದಲ್ಲಿ ತಿಳಿಸಿದಂತೆ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಏಕರೂಪ ವೇಳಾಪಟ್ಟಿಯನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕಡ್ಡಾಯವಾಗಿ ಕ್ರಮ ವಹಿಸಲು ಈ ಮೂಲಕ ಮತ್ತೊಮ್ಮೆ ತಿಳಿಸಲಾಗಿದ್ದು ಸದರಿ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ ಆಯಾ ವಿಶ್ವವಿದ್ಯಾಲಯಗಳ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕಾಯ್ದೆಯನ್ವಯ ಕ್ರಮವಹಿಸಲು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್.ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).

ಅನುಬಂಧ - ಇ

ಕರ್ನಾಟಕ ಸರ್ಕಾರ

[illegible] 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22-05-2017.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು - 560 001.

ಇವರಿಗೆ:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು - 560 001.
2. ಕುಲಪತಿಗಳು/ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
3. ಕುಲಪತಿಗಳು/ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-570 005.
4. ಕುಲಪತಿಗಳು/ಕುಲಸಚಿವರು,ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580 003.
5. ಕುಲಪತಿಗಳು/ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ-577 451.
6. ಕುಲಪತಿಗಳು/ಕುಲಸಚಿವರು,ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ-585 106.
7. ಕುಲಪತಿಗಳು/ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು-574 199.
8. ಕುಲಪತಿಗಳು/ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು-572 101
9. ಕುಲಪತಿಗಳು/ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ-583 276.
10. ಕುಲಪತಿಗಳು/ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು-570 006.
11. ಕುಲಪತಿಗಳು/ಕುಲಸಚಿವರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ-586 101.
12. ಕುಲಪತಿಗಳು/ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ - 590 018.
13. ಕುಲಪತಿಗಳು/ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ - 583 105.
14. ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ - 577 002.
15. ಕುಲಪತಿಗಳು/ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ - 591 156.
16. ಕುಲಪತಿಗಳು/ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು - 560 018.
17. ಕುಲಪತಿಗಳು/ಕುಲಸಚಿವರು, ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು 570 004.
18. ಕುಲಪತಿಗಳು/ಕುಲಸಚಿವರು,ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು - 581 197.

ಮಾನ್ಯರೆ,

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಬಗ್ಗೆ.

******

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಕುರಿತಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ದಿನಾಂಕ: 26-05-2017ರ ಅಪರಾಹ್ನ 2.30ಗಂಟೆಗೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಹಾಗೂ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿ/ ಕುಲಸಚಿವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಲಿದ್ದು, ಸದರಿ ಸಂವಾದದಲ್ಲಿ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ [illegible] ಈ ಮೂಲಕ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

([illegible])
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಕರ್ನಾಟಕ ವಿಧಾನ ಸಭಾ ಮಾನ್ಯ ಸದಸ್ಯರಾದ ಶ್ರೀ ಅಭಯ್ ಪಾಟೀಲ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 257ಕ್ಕೆ ಪೂರಕ ಟಿಪ್ಪಣಿ

******

- ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಗಳಲ್ಲಿ ಏಕರೂಪತೆ ಇಲ್ಲದಿರುವುದರಿಂದ, ವಿದ್ಯಾರ್ಥಿಗಳು ಮುಂದಿನ ವ್ಯಾಸಂಗಕ್ಕೆ ಹಾಗೂ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ, ಈ ಬಗ್ಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ರಾಜ್ಯದ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ದಾಖಲಾತಿ, ಪರೀಕ್ಷಾ ವೇಳಾಪಟ್ಟಿ ಮತ್ತು ಫಲಿತಾಂಶ ಪ್ರಕಟಣೆಗಳಲ್ಲಿ ಏಕರೂಪತೆಯನ್ನು ನಿಗದಿಪಡಿಸಿ, ಸರ್ಕಾರದ ಆದೇಶ ಸಂ: ಇಡಿ 292 ಯುಎನ್ಇ 2016, ದಿನಾಂಕ: 28-07-2016ರಲ್ಲಿ ಆದೇಶಿಸಲಾಗಿದೆ.
- ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿ ವರ್ಷ ಕಡ್ಡಾಯವಾಗಿ ಸ್ನಾತಕ ಪದವಿಗಳ ಫಲಿತಾಂಶವನ್ನು ಮೇ 31ರೊಳಗಾಗಿ ಹಾಗೂ ಸ್ನಾತಕೋತ್ತರ ಪದವಿಗಳ ಫಲಿತಾಂಶವನ್ನು ಜೂನ್ 30ರೊಳಗಾಗಿ ಪ್ರಕಟಿಸುವಂತೆ ಹಾಗೂ ಈ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ, ಆಯಾ ವಿಶ್ವವಿದ್ಯಾಲಯಗಳ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದೆಂದು ದಿನಾಂಕ: 28-07-2016ರ ಆದೇಶದಲ್ಲಿ, ಸರ್ಕಾರದ ಪತ್ರ ಸಂ. ಇಡಿ 150 ಯುಎನ್ಇ 2017, ದಿನಾಂಕ: 01-04-2017ರಲ್ಲಿ ನಿರ್ದೇಶನವನ್ನು ನೀಡಲಾಗಿದೆ.
- ಕರ್ನಾಟಕ ವಿಧಾನ ಸಭೆಯ ಸಾರ್ವತ್ರಿಕ ಚುನಾವಣೆಯ ಹಿನ್ನಲೆಯಲ್ಲಿ, ವಿಶ್ವವಿದ್ಯಾಲಯಗಳ ಸ್ನಾತಕ/ ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆಗಳನ್ನು ದಿನಾಂಕ: 10-05-2018ರ ಮೊದಲು ಅಥವಾ ದಿನಾಂಕ: 16-05-2018ರ ನಂತರದ ಅವಧಿಯಲ್ಲಿ ನಿಗದಿತ ಪರೀಕ್ಷೆಗಳನ್ನು ನಡೆಸುವಂತೆ ವಿಶ್ವವಿದ್ಯಾಲಯಗಳ, ಕಾಲೇಜು ಶಿಕ್ಷಣ/ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರದ ಪತ್ರ ಸಂ. ಇಡಿ 119 ಯುಎನ್ಇ 2018, ದಿನಾಂಕ: 02-04-2018ರಲ್ಲಿ ನಿರ್ದೇಶನ ನೀಡಲಾಗಿತ್ತು.
- ದಿನಾಂಕ: 28-07-2016ರ ಆದೇಶದನ್ವಯ ಏಕರೂಪ ವೇಳಾಪಟ್ಟಿಯನ್ನು ಅನುಸರಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ವಿಡಿಯೋ ಸಂವಾದದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
- ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳನ್ನು ಪ್ರಕಟಿಸಿದ ನಂತರ ಸಕಾಲದಲ್ಲೇ ಅಂಕಪಟ್ಟಿಗಳನ್ನು ಮುದ್ರಿಸಿ ಸಂಬಂಧಪಟ್ಟ ಕಾಲೇಜು/ವಿಭಾಗ/ಸಂಸ್ಥೆಗಳಿಗೆ ವಿಶ್ವವಿದ್ಯಾಲಯಗಳಿಂದ ಕಳುಹಿಸಿಕೊಡಲಾಗುತ್ತಿದೆ.
- ಫಲಿತಾಂಶ ಪ್ರಕಟಣೆಯ ನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಕಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ.
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ಸಿಬಿಸಿಎಸ್ ಪದ್ಧತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಮುದ್ರಿಸಿ ಆಗಸ್ಟ್ ತಿಂಗಳ ಅಂತ್ಯದವರೆಗೆ ಕಳುಹಿಸಿಕೊಡಲಾಗುತ್ತದೆ.
- ಮೂಲ ಅಂಕಪಟ್ಟಿಗಳನ್ನು ವಿತರಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಅವಶ್ಯಕತೆಗನು ಗುಣವಾಗಿ ತಾತ್ಕಾಲಿಕ ಅಂಕಪಟ್ಟಿಗಳನ್ನು ವಿತರಿಸಲಾಗುತ್ತದೆ.
- ಕುವೆಂಪು ವಿಶ್ವವಿದ್ಯಾಲಯದಲ್ಲಿ ಪದವಿ ಪರೀಕ್ಷೆಗಳು ಮುಗಿದ 7ರಿಂದ 10 ದಿನಗಳೊಳಗೆ ಫಲಿತಾಂಶ ಪ್ರಕಟಿಸಿ, 30 ದಿನಗಳ ಒಳಗೆ ಆಯಾ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 129
ಸದಸ್ಯರ ಹೆಸರು	: ಶ್ರೀ ಎಸ್.ಟಿ. ಸೋಮಶೇಖರ್(ಯಶವಂತಪುರ)
ಉತ್ತರಿಸುವ ದಿನಾಂಕ	: 10.07.2018
ಉತ್ತರಿಸುವ ಸಚಿವರು	: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ)	ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೆಂಗೇರಿ ಹಾಗೂ ತಾವರೆಕೆರೆ ಹೋಬಳಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಹೌದು
ಆ)	ಈ ಪ್ರದೇಶದಲ್ಲಿ ಸರ್ಕಾರಿ ಕಾಲೇಜು ಇಲ್ಲದೇ ಇರುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ.
ಇ)	ಪ್ರಸಕ್ತ ಸಾಲಿನಲ್ಲಿ ಈ ಕಾಲೇಜನ್ನು ಪ್ರಾರಂಭಿಸಲಾಗುವುದೇ ?	ಹೆಚ್ಚುವರಿ ಹುದ್ದೆಗಳನ್ನು ಸ್ಥಳಾಂತರಿಸಿ, ಇರುವ ಪ್ರೌಢ ಶಾಲೆಗಳನ್ನು ಪದವಿಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಇಡಿ 176 ಡಿಜಿಡಬ್ಲ್ಯೂ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಸ ಪ್ರಶ್ನೆ ಸಂಖ್ಯೆ : 249

ಮಾನ್ಯ ಸದಸ್ಯರ ಹೆಸರು : ಶ್ರೀ ಶ್ರೀಮಂತ್ ಬಾಳಾಸಹೇಬ್ ಪಾಟೀಲ್ (ಕಾಗವಾಡ)

ಉತ್ತರಿಸುವ ದಿನಾಂಕ : 10-07-2018

ಉತ್ತರಿಸುವ ಸಚಿವರು : ಉನ್ನತ ಶಿಕ್ಷಣ ಮಂತ್ರಿಗಳು

	ಪ್ರಶ್ನೆ	ಉತ್ತರ
ಅ)	ಕಾಗವಾಡ ವಿಧಾನ ಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ ಎಷ್ಟು;	ಬೆಳಗಾವಿ ಜಿಲ್ಲೆ ಕಾಗವಾಡ ವಿಧಾನ ಸಭಾ ಕ್ಷೇತ್ರದ ಅಥಣಿಯಲ್ಲಿ ಒಂದು ಸರ್ಕಾರಿ ಪಾಲಿಟೆಕ್ನಿಕ್ ಇದ್ದು, ಯಾವುದೇ ಖಾಸಗಿ ಪಾಲಿಟೆಕ್ನಿಕ್ ಇರುವುದಿಲ್ಲ.
ಆ)	ಕಾಗವಾಡ ಮತ ಕ್ಷೇತ್ರವು ಗಡಿ ಪ್ರದೇಶದ ತಾಲ್ಲೂಕಾಗಿದ್ದು ಇಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪಾಲಿಟೆಕ್ನಿಕ್ ಕಾಲೇಜು ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾಗವಾಡ ಮತ ಕ್ಷೇತ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಯಾವುದೇ ಮನವಿ ಸ್ವೀಕೃತವಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;	ಉದ್ಭವಿಸುವುದಿಲ್ಲ.

ಇಡಿ 121 ಟಿಜಿಎಲ್ 2018

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 583
2) ಸದಸ್ಯರ ಹೆಸರು : ಶ್ರೀ ದತ್ತಾತ್ರೇಯ ಸಿ.ಪಾಟೀಲ ರೇವೂರ (ಅಪ್ಪುಗೌಡ)
3) ಉತ್ತರಿಸಬೇಕಾದ ದಿನಾಂಕ : 10.07.2018.
4) ಉತ್ತರಿಸುವವರು : ಮುಖ್ಯ ಮಂತ್ರಿ

ಕ್ರಮ ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ:	ಕಲಬುರಗಿ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣ ಕಾಮಗಾರಿಯು ಬಹುತೇಕ ಮುಕ್ತಾಯದ ಹಂತದಲ್ಲಿದ್ದು, ವಿವರಗಳು ಈ ಕೆಳಗಿನಂತಿವೆ. 1. ರನ್-ವೇ, ಐಸೋಲೇಷನ್ ಬೇ, ಏಪ್ರನ್ ವರ್ಕ್ ಕಾಮಗಾರಿಗಳು ಪೂರ್ಣಗೊಂಡಿದೆ. 2. ಪೆರಿಫೆರಲ್ ರಸ್ತೆ ಕಾಮಗಾರಿ ಮತ್ತು ಆವರಣ ಗೋಡೆ ಪೂರ್ಣಗೊಳ್ಳುವ ಹಂತದಲ್ಲಿದೆ. 3. ಎಟಿಸಿ ಜೊತೆಗೆ ತಾಂತ್ರಿಕ ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿದೆ. 4. ಪ್ರಯಾಣಿಕರ ಟರ್ಮಿನಲ್ ಕಟ್ಟಡವು ಪೂರ್ಣಗೊಳ್ಳುವ ಹಂತದಲ್ಲಿದೆ. 5. ಏರ್‌ಫೀಲ್ಡ್ ಲೈಟಿಂಗ್ ವ್ಯವಸ್ಥೆ ಅಳವಡಿಸುವುದು, ಸ್ವಯಂ ಚಾಲಿತ ಹವಾಮಾನ ಸೂಚಕ, ಸಂಕೀರ್ಣ ವ್ಯವಸ್ಥೆ ಮತ್ತು ವೈಫೈ , ವಿಮಾನ ಮಾಹಿತಿ ಪ್ರದರ್ಶನ / ಸೂಚನೆ ವ್ಯವಸ್ಥೆ, ಕ್ಷ-ಕಿರಣ ಯಂತ್ರ, ಇತ್ಯಾದಿ ಉಪಕರಣಗಳನ್ನು ಅಳವಡಿಸುವ ಕೆಲಸಗಳು ಪ್ರಗತಿಯಲ್ಲಿದೆ.
ಆ)	ಈ ಕಾಮಗಾರಿಯು ಪೂರ್ಣಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವು ಬಹುತೇಕ ಮುಕ್ತಾಯದ ಹಂತದಲ್ಲಿದೆ.
ಇ)	ವಿಮಾನ ನಿಲ್ದಾಣ ಕಾಮಗಾರಿಯು ಯಾವ ವರ್ಷದಲ್ಲಿ ಪ್ರಾರಂಭವಾಗಿರುತ್ತದೆ.	ಕಲಬುರಗಿ ವಿಮಾನ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ದಿನಾಂಕ 23/03/2007ರಲ್ಲಿ ಮಂಜೂರು ನೀಡಿ ಸದರಿ ಯೋಜನೆಗೆ ಗುಲ್ಬರ್ಗಾ ಏರ್‌ಪೋರ್ಟ್ ಡೆವಲಪರ್ಸ್ ಪ್ರೈ.ಲಿ., ಇವರೊಂದಿಗೆ ದಿನಾಂಕ 20/05/2010 ರಂದು ಪೂರಕ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಒಪ್ಪಂದದಂತೆ 24 ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ ಅಭಿವೃದ್ಧಿದಾರರು ಗುತ್ತಿಗೆ ನಿಬಂಧನೆಯನ್ನು ಅನುಸರಿಸಲು ವಿಫಲರಾದ್ದರಿಂದ ಯೋಜನಾ ಅಭಿವೃದ್ಧಿ ಒಪ್ಪಂದವನ್ನು ದಿನಾಂಕ:28.01.2015 ರಂದು ರದ್ದುಪಡಿಸಿ ಬಾಕಿ ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ಮೂರು ಹಂತಗಳಲ್ಲಿ ರಚಿಸಿ ಪೂರ್ಣಗೊಳಿಸಲು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ದಿನಾಂಕ 25/06/2015 ರಂದು ವಹಿಸಿಕೊಡಲಾಗಿದೆ.

ಈ)	ಉದ್ದೇಶಿತ ಕಾಮಗಾರಿಯು ಸರ್ಕಾರದ ಸೂಚನೆಗಳಂತೆ ಎಷ್ಟು ವರ್ಷಗಳಲ್ಲಿ ಪೂರ್ಣಗೊಳ್ಳಬೇಕಾಗಿದೆ.	ಪ್ರಸ್ತುತ ಉದ್ದೇಶಿತ ಕಾಮಗಾರಿಯು ಪ್ರಗತಿಯಲ್ಲಿದ್ದು, ನವಂಬರ್ 2018ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಉ)	ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು.	

ಸಂಖ್ಯೆ: ಮೂಅಇ 66 ರಾಅವಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	252
ಸದಸ್ಯರ ಹೆಸರು	:	ಶ್ರೀ ಟಿ. ವೆಂಕಟರಮಣಯ್ಯ (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ಮತಕ್ಷೇತ್ರದಲ್ಲಿ ಕೃಷಿ ರೈತರಿಗೆ ಪಂಪ್‌ಸೆಟ್ ವಿದ್ಯುತ್ ಸರಬರಾಜಿಗೆ ಟಿ.ಸಿ. ದುರಸ್ತಿ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೊಡ್ಡಬಳ್ಳಾಪುರ ಮತಕ್ಷೇತ್ರವೂ ಸೇರಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ, ಕೆ.ಇ.ಆರ್.ಸಿ ನಿಯಮಾನುಸಾರ ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಯೊಳಗೆ ಮತ್ತು ನಗರ ಪ್ರದೇಶಗಳಲ್ಲಿ 24 ಗಂಟೆಯೊಳಗೆ ವಿಫಲವಾಗಿರುವ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ ಹಾಗೂ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ಬದಲಾಯಿಸುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನ ಜೂನ್ 2018ರ ಅಂತ್ಯಕ್ಕೆ 13 ಪರಿವರ್ತಕಗಳು ವಿಫಲಗೊಂಡಿದ್ದು, ಅವುಗಳನ್ನು ಈಗಾಗಲೇ ಬದಲಾಯಿಸಲಾಗಿದೆ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಈಗಾಗಲೇ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದರ ಗುತ್ತಿಗೆ ಆಧಾರದ ಮೇಲೆ ತೆರೆದಿರುವ ಪರಿವರ್ತಕ ದುರಸ್ಥಿ ಕೇಂದ್ರದಲ್ಲಿ ಪರಿವರ್ತಕಗಳನ್ನು ದುರಸ್ಥಿಗೊಳಿಸಿ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ. ಇದಲ್ಲದೆ ಸಂಬಂಧಪಟ್ಟ ಉಗ್ರಾಣ ಹಾಗೂ ಪರಿವರ್ತಕ ಬ್ಯಾಂಕ್‌ಗಳಲ್ಲಿರುವ ದುರಸ್ತಿಗೊಂಡ ಪರಿವರ್ತಕಗಳನ್ನು ಉಪಯೋಗಿಸಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ವಿಫಲವಾದ ವಿದ್ಯುತ್ ಪರಿವರ್ತಕಗಳನ್ನು ದುರಸ್ಥಿಗೊಳಿಸಲು ಈಗಾಗಲೇ ತಾಲ್ಲೂಕುವಾರು 38 ಪರಿವರ್ತಕ ದುರಸ್ಥಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೇ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಉಗ್ರಾಣ ಹಾಗೂ ಪರಿವರ್ತಕಗಳ ಬ್ಯಾಂಕ್‌ನಲ್ಲಿ ಸಾಕಷ್ಟು ಪರಿವರ್ತಕಗಳ ದಾಸ್ತಾನು ಇರಿಸಲಾಗಿದೆ.

ಸಂಖ್ಯೆ: ಇಎನ್ 61 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	191
ಸದಸ್ಯರ ಹೆಸರು	ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ(ಆಳಂದ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಆಳಂದ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು;	ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ -1154 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ-379
ಆ) ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು;	ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ-262 ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ-45
ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?	2018-19ನೇ ಸಾಲಿನಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಸಂಪೂರ್ಣವಾಗಿ ಮುಗಿಯುವವರೆಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 228 ಪಿಬಿಎಸ್ 2018 ದಿನಾಂಕ:14-06-2018ರಲ್ಲಿ 2018-19ನೇ ಸಾಲಿಗೆ ಒಟ್ಟು 25600 ಹುದ್ದೆಗಳನ್ನು ಅತಿಥಿ ಶಿಕ್ಷಕರಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 12500 ಹುದ್ದೆಗಳಿಗೆ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 3100 ಹುದ್ದೆಗಳು ಸೇರಿದಂತೆ ಒಟ್ಟು 15600 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 10000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8)ಹುದ್ದೆಗಳ ನೇರ ನೇಮಕಾತಿ ಹುದ್ದೆಗಳಿಗೆ ಆಯ್ಕೆಗೊಂಡ ಶಿಕ್ಷಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅತಿಥಿ ಶಿಕ್ಷಕರ ನೇಮಕಾತಿ ತಂತಾನೆ ರದ್ದಾಗುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಅನುಮತಿ ನೀಡಲಾಗಿದೆ.

ಇಡಿ 236 ಪಿಎಂಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 128
ಸದಸ್ಯರ ಹೆಸರು : ಶ್ರೀ ಎಚ್.ಹಾಲಪ್ಪ (ಸಾಗರ)
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದಾಗಿ ವಿದ್ಯುತ್ ಕಂಬಗಳು ಬಿದ್ದು ಹಾಳಾಗಿರುವುದರಿಂದ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಮತ್ತು ಹೊಸ ಕಂಬಗಳನ್ನು ಪೂರೈಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣವೇನು;	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದಾಗಿ 2018-19ನೇ ಸಾಲಿನ ಜೂನ್ 2018ರ ಅಂತ್ಯಕ್ಕೆ ಸಾಗರ ತಾಲ್ಲೂಕಿನಲ್ಲಿ 157 ಕಂಬಗಳು ಮತ್ತು ಹೊಸನಗರ ತಾಲ್ಲೂಕಿನಲ್ಲಿ 465 ಕಂಬಗಳೂ ಸೇರಿದಂತೆ ಒಟ್ಟು 622 ವಿದ್ಯುತ್ ಕಂಬಗಳು ಬಿದ್ದು ಹಾಳಾಗಿದ್ದು, ಈ ಎಲ್ಲಾ ಕಂಬಗಳನ್ನು ಹೊಸ ವಿದ್ಯುತ್ ಕಂಬಗಳಿಂದ ಬದಲಾಯಿಸಲಾಗಿರುತ್ತದೆ. ತುರ್ತು ಕಾಮಗಾರಿಗಳನ್ನು ವಿಳಂಬವಿಲ್ಲದೆ ನಿರ್ವಹಿಸಿ ಸಕಾಲದಲ್ಲಿ ವಿದ್ಯುತ್ ಸರಬರಾಜನ್ನು ಪುನರ್ ಕಲ್ಪಿಸಲಾಗಿದೆ.
ಆ)	ಹೊಸ ವಿದ್ಯುತ್ ಕಂಬಗಳನ್ನು ನಿಗಮದಿಂದ ಪೂರೈಸಲು ಇರುವ ತೊಂದರೆಯೇನು;	ಸಾಗರ ವಿಭಾಗದ ವ್ಯಾಪ್ತಿಯಲ್ಲಿನ ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ, ಹೊಸ ಕಂಬಗಳನ್ನು ಪೂರೈಕೆ ಮಾಡುವಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಅಗತ್ಯಕ್ಕೆ ತಕ್ಕಂತೆ ಕಂಬಗಳನ್ನು ಪೂರೈಸಿ ತುರ್ತು ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಉಗ್ರಾಣದಲ್ಲಿ ಹಾಲಿ ಒಟ್ಟು 1350 ವಿದ್ಯುತ್ ಕಂಬಗಳ ದಾಸ್ತಾನು ಇರುತ್ತವೆ.
ಇ)	ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?	

ಸಂಖ್ಯೆ: ಇಎನ್ 57 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 655

ಸದಸ್ಯರ ಹೆಸರು : ಶ್ರೀ ಎಂ.ಶ್ರೀನಿವಾಸ್

ಉತ್ತರಿಸುವ ದಿನಾಂಕ : 10.7.2018

ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಮಂಡ್ಯ ತಾಲ್ಲೂಕು ಬಸರಾಳುವಿನಲ್ಲಿ ಪದವಿ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ; ಬಸರಾಳುವಿನಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು ? (ವಿವರ ನೀಡುವುದು)	ಬಸರಾಳು ಹೋಬಳಿ ವ್ಯಾಪ್ತಿಗೆ 76 ಹಳ್ಳಿಗಳು ಸೇರಿದ್ದು, ಪ್ರಸ್ತಾಪಿತ ಸ್ಥಳದಿಂದ 20 ಕಿ.ಮೀ ಅಂತರದಲ್ಲಿ 02 ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು 02 ಅನುದಾನರಹಿತ ಪದವಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಕಾಲೇಜು ಪ್ರಾರಂಭಿಸಲು ಆದೇಶವಾದಲ್ಲಿ ಪದವಿ ಕಾಲೇಜಿಗೆ ವಿದ್ಯಾರ್ಥಿಗಳು ಲಭ್ಯವಾಗಲಿದ್ದು, ಬಸರಾಳು ಸರ್ಕಾರಿ ಪ್ರೌಢಶಾಲೆಯ ಕಟ್ಟಡದಲ್ಲಿ ಖಾಲಿ ಇರುವ ಕೊಠಡಿಗಳಲ್ಲಿ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ಗ್ರಾಮದಲ್ಲಿ ನೀರಾವರಿ ಇಲಾಖೆಯ ಕಛೇರಿಯು ಸ್ಥಗಿತವಾಗಿದ್ದು, ಖಾಲಿ ಇರುವ ಕಟ್ಟಡ ಮತ್ತು ನಿವೇಶನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹಸ್ತಾಂತರಿಸಿಕೊಂಡು ಖಾಯಂ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರ ಅನುದಾನದ ಲಭ್ಯತೆಯ ಆಧಾರದ ಮೇಲೆ ಹೊಸ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಲಾಗುವುದು.

(ಜಿ.ಟಿ.ದೇವೇಗೌಡರು)
ಉನ್ನತ ಶಿಕ್ಷಣ ಸಚಿವರು

ಇಡಿ 88 ಹೆಚ್‌ಪಿಯು 2018

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 133
ಸದಸ್ಯರ ಹೆಸರು : ಶ್ರೀ ಆರ್. ನರೇಂದ್ರ (ಹನೂರು)
ಉತ್ತರಿಸಬೇಕಾದ ದಿನಾಂಕ : 10-07-2018 .
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮಲೆಮಹಾದೇಶ್ವರ ಬೆಟ್ಟದ ಸುತ್ತಮುತ್ತ ಇರುವಂತಹ ಶಾಲೆಗಳ ಶಿಕ್ಷಕರಿಗೆ ಗಿರಿ ಭತ್ಯೆ ನೀಡಲಾಗುತ್ತಿದೆಯೇ;	ಇಲ್ಲ
ಆ.	ನೀಡದಿದ್ದಲ್ಲಿ, ಈ ಭತ್ಯೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 94 ಎಸ್‌ಆರ್‌ಪಿ(1) 71 ದಿನಾಂಕ:22-06-1971ರಲ್ಲಿ ಶ್ರೀ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ ಗಿರಿತಾಣ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಆದರೆ, ಸುತ್ತಮುತ್ತಲಿನಲ್ಲಿ ಇರುವಂತಹ ರಾಜ್ಯ ಸರ್ಕಾರಿ ನೌಕರರಿಗೆ ಈ ಅವಕಾಶ ಕಲ್ಪಿಸಿರುವುದಿಲ್ಲ.

ಇಡಿ 39 ಪಿಎಂಎ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 221

ಸದಸ್ಯರ ಹೆಸರು : ಶ್ರೀ ಟಿ.ಡಿ.ರಾಜೇಗೌಡ (ಶೃಂಗೇರಿ)

ಉತ್ತರಿಸಬೇಕಾದ ದಿನಾಂಕ : 10-07-2018

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ-ಕೊಪ್ಪ-ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಮಳೆಗಾಲದಲ್ಲಿ ಸತತವಾಗಿ ಸುರಿಯುವ ಮಳೆಯಿಂದಾಗಿ ಸಾರ್ವಜನಿಕರಿಗೆ ವಿಪರೀತ ವಿದ್ಯುತ್ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಯಲುಸೀಮೆ ಹಾಗೂ ಅರೆ ಮಲೆನಾಡು ಪ್ರದೇಶಗಳಿಗೆ ಹೋಲಿಸಿದಲ್ಲಿ, ಮಳೆಗಾಲದ ಅವಧಿಯಲ್ಲಿ ವಿಪರೀತ ಗಾಳಿ ಮಳೆಯಿಂದಾಗಿ ಪ್ರತಿ ವರ್ಷವು ಮಲೆನಾಡು ಪ್ರದೇಶವಾದ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿನ ವಿದ್ಯುತ್ ಸಮಸ್ಯೆ ಉಂಟಾಗುತ್ತಿದೆ. ಅದರಲ್ಲಿಯೂ ಭಾರೀ ಮಳೆ ಗಾಳಿಗೆ ಮರಗಳು ವಿದ್ಯುತ್ ಮಾರ್ಗದ ಮೇಲೆ ಬಿದ್ದು, ವಾಹಕ (ತಂತಿ) ತುಂಡಾಗುವುದು ಮಾತ್ರವಲ್ಲದೇ ಕಂಬಗಳು ಸಹ ಬೀಳುತ್ತಿರುವುದು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಸಮರ್ಪಕವಾಗಿ ವಿದ್ಯುತ್ ಸೌಲಭ್ಯವನ್ನು ನೀಡಲು ಯಾವುದಾದರೂ ಯೋಜನೆ ಸರ್ಕಾರದ ಮುಂದಿದೆಯೇ?	ಪ್ರಸಕ್ತ ಸಾಲಿನ ಜೂನ್ 2018ರ ಅಂತ್ಯಕ್ಕೆ ಶೃಂಗೇರಿ-ಕೊಪ್ಪ-ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಒಟ್ಟು 721 ವಿದ್ಯುತ್ ಕಂಬಗಳು ಮತ್ತು 72.1 ಕಿ.ಮೀ. ಉದ್ದದ ವಿದ್ಯುತ್ ತಂತಿಗಳು ಮಳೆಯಿಂದಾಗಿ ಹಾಳಾಗಿದ್ದು, ಅವುಗಳ ಪೈಕಿ 682 ವಿದ್ಯುತ್ ಕಂಬಗಳನ್ನು ಮತ್ತು 68.2 ಕಿ.ಮೀ. ಉದ್ದದ ವಿದ್ಯುತ್ ತಂತಿಗಳನ್ನು ಬದಲಾಯಿಸಲಾಗಿರುತ್ತದೆ. ಬಾಕಿ ಉಳಿದಿರುವ ವಿದ್ಯುತ್ ಕಂಬಗಳನ್ನು ಮತ್ತು ತಂತಿಗಳನ್ನು ಬದಲಾಯಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಮಳೆಗಾಲದ ಪೂರ್ವ ಅವಧಿಯದಲ್ಲಿ ವಿದ್ಯುತ್ ಮಾರ್ಗಗಳ ತಪಾಸಣೆ ನಡೆಸಿ ವಿದ್ಯುತ್ ಅಪಘಾತ ತಪ್ಪಿಸಲು ಹಾಗೂ ನಿರಂತರ ವಿದ್ಯುತ್ ಸರಬರಾಜಿನ ವ್ಯವಸ್ಥೆಗಾಗಿ ಈ ಕೆಳಗಿನ ನಿರ್ವಹಣಾ ಕಾರ್ಯಗಳನ್ನು ನಡೆಸಲಾಗುತ್ತದೆ. • ವಿದ್ಯುತ್ ಲೈನ್‌ಗಳ ಪಕ್ಕದಲ್ಲಿರುವ ಮರದ ಕೊಂಬೆಗಳನ್ನು ಕಡಿಯುವುದು. • ಜೋತು ಬಿದ್ದಿರುವ ವಾಹಕಗಳನ್ನು ಬಿಗಿಗೊಳಿಸಿ ಸರಿಪಡಿಸುವುದು. • ಕಂಬಗಳ ಮಧ್ಯೆ ಹೆಚ್ಚು ಅಂತರವಿದ್ದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವುದು. • ಶಿಥಿಲಗೊಂಡ ಮರದ/ಕಬ್ಬಿಣದ ಕಂಬಗಳನ್ನು ಗುರುತಿಸಿ, ಉತ್ತಮ ಕಂಬಗಳಿಂದ ಬದಲಾಯಿಸುವುದು. • ವಾಲಿರುವ ಕಂಬಗಳನ್ನು ಸರಿಪಡಿಸುವುದು. ಅಲ್ಲದೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಗಾಲದಲ್ಲಿ, ಉಂಟಾಗುವ ವಿದ್ಯುತ್ ವ್ಯತ್ಯಯವನ್ನು ಸರಿಪಡಿಸಲು ಈಗಾಗಲೇ ಲಭ್ಯವಿರುವ ಮಾನವ ಸಂಪನ್ಮೂಲ ಸೇವೆಯ ಜೊತೆಗೆ ಹೆಚ್ಚುವರಿಯಾಗಿ 192 ಮಾನ್ಸೂನ್ ಗ್ಯಾಂಗ್‌ಮ್ಯಾನ್‌ಗಳನ್ನೂ ಸೇವೆಗೆ ನಿಯೋಜಿಸಲಾಗಿರುತ್ತದೆ.

ಸಂಖ್ಯೆ: ಇಎನ್ 58 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 227

ಸದಸ್ಯರ ಹೆಸರು : ಡಾ: ಉಮೇಶ್ ಜಿ. ಜಾಧವ್

ಉತ್ತರಿಸುವ ದಿನಾಂಕ : 10.7.2018

ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಂಚೋಳಿ ತಾಲ್ಲೂಕಿನಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜು ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳು ಕಲಬುರಗಿ ನಗರಕ್ಕೆ ಅಥವಾ ಇನ್ನಿತರೆ ಸ್ಥಳಗಳಿಗೆ ತೆರಳಿ ವಿದ್ಯಾಭ್ಯಾಸ ಮಾಡಲು ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;</td><td>ಬಂದಿದೆ</td></tr>
<tr><td>ಆ)</td><td>ಹಾಗಿದ್ದಲ್ಲಿ, ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಲಾಗುವುದೇ? (ವಿವರ ನೀಡುವುದು)</td><td>ಕಲಬುರ್ಗಿಯಲ್ಲಿ ಪ್ರಸ್ತುತ 4 ಸರ್ಕಾರಿ ಪಾಲಿಟೆಕ್ನಿಕ್, 2 ಅನುದಾನಿ ಹಾಗೂ 10 ಖಾಸಗಿ ಪಾಲಿಟೆಕ್ನಿಕ್‌ಗಳಿವೆ.
<table><tr><th>ಕ್ರ. ಸಂ.</th><th>ಪಾಲಿಟೆಕ್ನಿಕ್‌ಗಳ ವಿವರ</th></tr><tr><td></td><td>ಸರ್ಕಾರಿ</td></tr><tr><td>1</td><td>ಸರ್ಕಾರಿ ಪಾಲಿಟೆಕ್ನಿಕ್,ಗುಲ್ಬರ್ಗಾ</td></tr><tr><td>2</td><td>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ</td></tr><tr><td>3</td><td>ಸರ್ಕಾರಿ ಪಾಲಿಟೆಕ್ನಿಕ್, ಅಫ್ಜಲ್‌ಪುರ</td></tr><tr><td>4</td><td>ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ</td></tr><tr><td></td><td>ಅನುದಾನಿತ</td></tr><tr><td>5</td><td>ಎನ್ ವಿ ಎಸ್ ಪಾಲಿಟೆಕ್ನಿಕ್,</td></tr><tr><td>6</td><td>ಕೆ ಸಿ ಟಿ ಪಾಲಿಟೆಕ್ನಿಕ್</td></tr></table>
ಕಲಬುರ್ಗಿಯಲ್ಲಿ ಪ್ರಸ್ತುತ 4 ಸರ್ಕಾರಿ ಪಾಲಿಟೆಕ್ನಿಕ್‌ಗಳಿದ್ದು ಅವುಗಳಲ್ಲಿ ಕಾಳಗಿಯಲ್ಲಿರುವ ಪಾಲಿಟೆಕ್ನಿಕ್‌ಗೂ ಚಿಂಚೋಳಿಗೂ 39. ಕಿ.ಮೀ ಅಂತರವಿದ್ದು, ಸದರಿ ಪಾಲಿಟೆಕ್ನಿಕ್‌ಗಳಲ್ಲಿ 2018–19 ನೇ ಸಾಲಿ 2ನೇ ಹಂತದ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗ ಸಂಖ್ಯೆಇಂತಿದೆ.</td></tr>
</table>

ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ				
ಕ್ರಮ ಸಂಖ್ಯೆ	ಕೋರ್ಸ್	ನಿಗಧಿಯಾದ ಪ್ರವೇಶಾತಿ	ಪ್ರವೇಶ ಪಡೆದವರ ಸಂಖ್ಯೆ (ಎಸ್‌ಎನ್ ಕ್ಯೂ ಸೇರಿ)	ಖಾಲಿ
1	ಸಿವಿಲ್ ಇಂಜಿನಿಯರಿಂಗ್	60	48+3	12
2	ಕಂಪ್ಯೂಟರ್ ಸೈನ್ಸ್	60	12+0	48
3	ಇ & ಸಿ ಇಂಜಿ.	60	23+2	37
4	ಮೆಕ್ಯಾನಿಕಲ್‌ಇಂಜಿ.	60	37+3	23
	ಒಟ್ಟು	**240**	**120+8**	**120**

ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿಯಲ್ಲಿ 2018–19 ನೇ ಸಾಲಿನ ಶೇ.50 ಮಾತ್ರ ಪ್ರವೇಶಾತಿಯಾಗಿದ್ದು, ಶೇ.50ರಷ್ಟು ಸೀಟುಗಳು ಖಾ ಇರುತ್ತವೆ. ಆದುದರಿಂದ ಸಧ್ಯಕ್ಕೆ ಹೊಸ ಸರ್ಕಾರಿ ಪಾಲಿಟೆಕ್ನಿ ಅವಶ್ಯಕವಿರುವುದಿಲ್ಲ.

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 86 ಹೆಚ್‌ಪಿಯು 2018

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	222
ಸದಸ್ಯರ ಹೆಸರು	:	ಶ್ರೀ ಬಸವರಾಜ್ ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು		ಮುಖ್ಯಮಂತ್ರಿಯವರು

*****

	ಪ್ರಶ್ನೆ	ಉತ್ತರ
ಅ)	ಕಲಬುರ್ಗಿ ಗ್ರಾಮೀಣ ಮತಕ್ಷೇತ್ರ ವ್ಯಾಪ್ತಿಯಲ್ಲಿನ ವಿದ್ಯುತ್ ಕಂಬ ಹಾಗೂ ತಂತಿಗಳು ತುಂಬಾ ಹಳೆಯದಾಗಿ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲಬುರ್ಗಿ ಗ್ರಾಮೀಣ ಮತಕ್ಷೇತ್ರವೂ ಸೇರಿದಂತೆ, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬ ಹಾಗೂ ಹಳೆಯದಾದ ತಂತಿಗಳನ್ನು ಗುರುತಿಸಿ, ಸದರಿ ಕಂಬ ಹಾಗೂ ತಂತಿಗಳನ್ನು ಬದಲಾಯಿಸಲಾಗುತ್ತಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಇದರಿಂದ ಜನ ಜಾನುವಾರುಗಳಿಗೆ ಅಪಾಯ ಉಂಟಾಗುವ ಸಂಭವವಿದ್ದು, ಶೀಘ್ರವಾಗಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರ ಯಾವ ಯೋಜನೆಗಳನ್ನು ಹಾಕಿಕೊಂಡಿದೆ?	ಕಲಬುರ್ಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಗುಲ್ಬರ್ಗ ವಿದ್ಯಚ್ಛಕ್ತಿ ಸರಬರಾಜು ಕಂಪನಿಯು, ವ್ಯವಸ್ಥೆ ಸುಧಾರಣಾ ಕಾಮಗಾರಿಗಳ ಅಡಿಯಲ್ಲಿ ಹಾಗೂ ದೀನದಯಾಳ್ ಉಪಾಧ್ಯಾಯ ಯೋಜನೆಯಡಿಯಲ್ಲಿ, ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳನ್ನು ಹೊಸದಾದ ಕಂಬಗಳಿಂದ, ಹಳೆಯದಾದ ತಂತಿಗಳನ್ನು ತೆಗೆದು ಹೊಸದಾದ ತಂತಿಗಳನ್ನು (ರೀಕಂಡಕ್ಟರಿಂಗ್) ಅಳವಡಿಸುವ ಮೂಲಕ ಬದಲಾಯಿಸುತ್ತಿದೆ. ಅದಲ್ಲದೇ, ಮಧ್ಯಂತರ ಕಂಬಗಳನ್ನು ಅಳವಡಿಸುವ ಮೂಲಕ ವಿದ್ಯುತ್ ಜಾಲವನ್ನು ಬಲಪಡಿಸಲಾಗುತ್ತಿದೆ. ಕಲಬುರ್ಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಗು.ವಿ.ಸ ಕಂಪನಿಯ ಬಂಡವಾಳ ವೆಚ್ಚದ ವ್ಯವಸ್ಥೆ ಸುಧಾರಣಾ ಕಾಮಗಾರಿಗಳ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳು ಮತ್ತು ದೀನದಯಾಳ್ ಉಪಾಧ್ಯಾಯ ಯೋಜನೆಯಡಿಯಲ್ಲಿ 2017-18 ಮತ್ತು 2018-19 ಸಾಲಿನ ಜೂನ್ ಅಂತ್ಯದವರೆಗೆ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಈ ರೀತಿಯಾಗಿ ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬ ಹಾಗೂ ಹಳೆಯದಾದ ತಂತಿಗಳನ್ನು ಗುರುತಿಸಿ, ಬದಲಾಯಿಸುವುದರಿಂದ ಜನ, ಜಾನುವಾರುಗಳಿಗೆ ಅಪಾಯ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಸಂಖ್ಯೆ: ಇಎನ್ 59 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಬಸವರಾಜ್ ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 222 ಕ್ಕೆ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಕಲಬುರ್ಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ, ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ಬಂಡವಾಳ ವೆಚ್ಚದ ವ್ಯವಸ್ಥೆ ಸುಧಾರಣಾ ಕಾಮಗಾರಿಗಳ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

ರೂ. ಕೋಟಿಗಳಲ್ಲಿ

ವರ್ಷ	ಹಾನಿಯಾದ ಕಂಬಗಳ ಬದಲಾವಣೆ	11 ಕೆ.ವಿ ರಿಕಂಡಕ್ಟರಿಂಗ್ ಕಾಮಗಾರಿಗಳು	ಎಲ್.ಟಿ ರಿಕಂಡಕ್ಟರಿಂಗ್ ಕಾಮಗಾರಿಗಳು	ಮಧ್ಯಂತರ ಕಂಬಗಳ ಅಳವಡಿಕೆ
	ಸಂಖ್ಯೆ	ಕಿ.ಮೀ	ಕಿ.ಮೀ	ಸಂಖ್ಯೆ
2015–16	438	128.57	325	366
2016–17	0	0	292	333
2017–18	1016	2.85	2.14	533
2018–19 (ಜೂನ್ ಅಂತ್ಯಕ್ಕೆ)	250	0.98	1.03	130

2017–18ನೇ ಸಾಲಿನಿಂದ ದೀನದಯಾಳ್ ಉಪಾಧ್ಯಾಯ ಯೋಜನೆಯು ಪ್ರಾರಂಭಗೊಂಡಿದ್ದು, ಕಲಬುರ್ಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

ವರ್ಷ	ಎಲ್.ಟಿ ಕಂಡಕ್ಟರ್ (ಕಿ.ಮೀ)	ಹೆಚ್.ಟಿ ಕಂಡಕ್ಟರ್ (ಕಿ.ಮೀ)	ಅಳವಡಿಸಲಾದ ವಿದ್ಯುತ್ ಕಂಬಗಳ ಸಂಖ್ಯೆ
2017–18	2.02	4.08	72
2018–19 (ಜೂನ್ ಅಂತ್ಯಕ್ಕೆ)	28.00	56.00	1260

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	682
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಈ ಕೆಳಕಂಡ 07 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಯಕ್ಕುಂಡಿ, ಬೈಲವಾಡ ಹಾಗೂ ಬೈಲಹೊಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಮೂಲಭೂತ ಸೌಕರ್ಯ ಒದಗಿಸಲಾಗಿರುತ್ತದೆ. (see table below) ಉಳಿದಂತೆ ದೇವಲಾಪುರ, ಗೋವಿನಕೊಪ್ಪ, ದೊಡ್ಡವಾಡ ಹಾಗೂ ವಕ್ಕುಂದ ಈ ನಾಲ್ಕು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಪ್ರಸ್ತುತ, ಸ್ಥಳೀಯವಾಗಿ ಲಭ್ಯವಿರುವ ಪ್ರೌಢಶಾಲಾ ವಿಭಾಗದ ಮೂಲಭೂತ ಸೌಲಭ್ಯಗಳನ್ನು ಬಳಸಿಕೊಳ್ಳಲಾಗುತ್ತಿದೆ.
(ಆ)	ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರವು ಕ್ರಮಕೈಗೊಳ್ಳುವುದೇ ?	2018-19ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಹಂಚಿಕೆಯಾಗಿರುವ ಅನುದಾನದ ಲಭ್ಯತೆಯನ್ನಾಧರಿಸಿ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಕ್ರ ಸಂ	ಸ.ಪ.ಪೂ ಕಾಲೇಜು	ಹಾಲಿ ಹೊಂದಿರುವ ಮೂಲಭೂತ ಸೌಕರ್ಯ
1	ಯಕ್ಕುಂಡಿ	06 ಕೊಠಡಿ, 04 ಶೌಚಾಲಯ
2	ಬೈಲವಾಡ	05 ಕೊಠಡಿ , 04 ಶೌಚಾಲಯ
3	ಬೈಲಹೊಂಗಲ	06 ಕೊಠಡಿ, 08 ಶೌಚಾಲಯ (ಹಾಗೂ ಲಭ್ಯವಿರುವ ಪ್ರೌಢಶಾಲಾ ವಿಭಾಗದ ಹೆಚ್ಚುವರಿ ಕೊಠಡಿಗಳು)
4	ದೇವಲಾಪುರ	03 ಕೊಠಡಿ, 02 ಶೌಚಾಲಯ
5	ಗೋವಿನಕೊಪ್ಪ	06 ಕೊಠಡಿ, 04 ಶೌಚಾಲಯ
6	ದೊಡ್ಡವಾಡ	06 ಕೊಠಡಿ, 02 ಶೌಚಾಲಯ
7	ವಕ್ಕುಂದ	05 ಕೊಠಡಿ, 04 ಶೌಚಾಲಯ

ಇಡಿ 187 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	556
ಸದಸ್ಯರ ಹೆಸರು	:	ಶ್ರೀ ನರಸಿಂಹನಾಯಕ್ (ರಾಜುಗೌಡ) (ಸುರಪುರ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೋಂದಣಿ ಸಂಖ್ಯೆ (ಆರ್.ಆರ್.ನಂಬರ್) ಪಡೆಯಬೇಕಾದರೆ ಸರ್ವೀಸ್ ಲೈನ್ ಚಾರ್ಜ್ ಎಂದು 10,000/- ರೂಪಾಯಿಗಳನ್ನು ರೈತರು ಪಾವತಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸ ಅಥವಾ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳೆಂಬ ಯಾವುದೇ ಭೇದವಿಲ್ಲದೇ ನೋಂದಣಿಗೊಳ್ಳುವ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ವಿವಿಧ ಪರ್ಯಾಯ ಮಾರ್ಗಗಳನ್ನು ತಿಳಿಸಿ ದಿನಾಂಕ 14-07-2014 ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆ ಹಾಗೂ ಕೆ.ಇ.ಆರ್.ಸಿ ನಿಯಮಾವಳಿಗಳನ್ವಯ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ನೋಂದಾಯಿಸುವವರು ಅರ್ಜಿ ಶುಲ್ಕ, ಠೇವಣಿ ಶುಲ್ಕ ಹಾಗೂ ರೂ.10,000/- ಮೂಲಸೌಕರ್ಯ ರಚನಾ ಶುಲ್ಕವನ್ನು ಪಾವತಿಸಿದ ನಂತರ ಆರ್.ಆರ್.ಸಂಖ್ಯೆ ನೀಡಿ ಅಧಿಕೃತ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.
	...	ನೀರಾವರಿ ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯ ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು, ವಿದ್ಯುತ್ ಸರಬರಾಜು ಕಂಪನಿಗಳಿಗೆ ಪ್ರತಿ ನೀರಾವರಿ ಪಂಪ್‌ಸೆಟ್‌ಗೆ ಸರಾಸರಿ ರೂ.1 ಲಕ್ಷಕ್ಕೂ ಹೆಚ್ಚು ವೆಚ್ಚವಾಗುತ್ತಿದ್ದು, ಈ ಮೊತ್ತವನ್ನು ಭರಿಸಲು ರೈತರಿಗೆ ಕಷ್ಟವಾಗಬಹುದೆಂಬ ಪರಿಗಣನೆಯೊಂದಿಗೆ, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ನೋಂದಾಯಿಸುವ ಎಲ್ಲಾ ರೈತರುಗಳಿಂದ ರೂ. 10,000/- ಗಳ ಮೂಲಸೌಕರ್ಯ ರಚನಾ ಶುಲ್ಕವನ್ನು ಮಾತ್ರ ಪಡೆಯಲಾಗುತ್ತಿದೆ. ಉಳಿದ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳೇ ಭರಿಸುತ್ತಿವೆ.
ಆ)	ಹಾಗಿದ್ದಲ್ಲಿ, ಸದರಿ ಸರ್ವೀಸ್ ಲೈನ್ ಚಾರ್ಜನ್ನು ತೆಗೆದುಹಾಕಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಪ್ರಸ್ತುತ ರೂ.10,000/- ಮೂಲಸೌಕರ್ಯ ರಚನೆ ಶುಲ್ಕವನ್ನು ತೆಗೆದು ಹಾಕುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಇ)	ರೈತರಿಂದ ಸರ್ವೀಸ್‌ಲೈನ್ ಚಾರ್ಜ್ ಪಾವತಿಸಿಕೊಳ್ಳಲು ಅನುಸರಿಸುತ್ತಿರುವ ಮಾನದಂಡ ಯಾವುದು?	ಹೊಸ ಅಥವಾ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳೆಂಬ ಯಾವುದೇ ಭೇದವಿಲ್ಲದೇ ನೋಂದಣಿಗೊಳ್ಳುವ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮೂಲ ಉದ್ದೇಶದಿಂದ ದಿನಾಂಕ 14-07-2014 ಮತ್ತು 23-07-2014 ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ದಿನಾಂಕ 14-07-2014 ರ ಸುತ್ತೋಲೆಯನ್ವಯ ವಿದ್ಯುತ್ ಸಂಪರ್ಕ ಕೋರಿ ನೋಂದಣಿಗೊಳ್ಳುವ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ ರೈತರು ರೂ.10,000/- ಗಳ ಮೂಲಸೌಕರ್ಯ ರಚನಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

ಇಎನ್ 60 ಪಿಪಿಎಮ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 241
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ
ಉತ್ತರಿಸುವ ದಿನಾಂಕ : 10.7.2018
ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಕ್ರ, ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಮಂಜೂರಾತಿ ದೊರೆತಿದ್ದು ಯಾವಾಗ;	ದಿನಾಂಕ: 16-11-2012ರಂದು ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಹೆಚ್‌ಪಿಟಿ 2012ಕ್ಕೆ ಆದೇಶವನ್ನು ಹೊರಡಿಸಿದೆ.
ಆ)	ಸದರಿ ಇಂಜಿನಿಯರಿಂಗ್ ಕಾಲೇಜು ಕಟ್ಟಡ ಕಟ್ಟಲು ಮಂಜೂರಾಗಿರುವ ಅನುದಾನ ಎಷ್ಟು;	ಸರ್ಕಾರದ ಆದೇಶ ಸಂಖ್ಯೆ:ಇಡಿ 73 ಹೆಚ್‌ಪಿಟಿ 2012 ದಿನಾಂಕ:25-09-2014ರನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಟ್ಟಡ, ಇತರೇ ಮೂಲಭೂತ ಸೌಕರ್ಯಗಳನ್ನು ಹಾಗೂ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಒದಗಿಸಲು ವಿ.ಟಿ,ಯು. ಗೆ ಹಸ್ತಾಂತರಿಸಲಾಗಿದೆ. ಅನುದಾನ ನಿಗಧಿಯಾಗಿರುವುದಿಲ್ಲ
ಇ)	ಕಾಲೇಜು ಕಟ್ಟಡ ಕಾಮಗಾರಿ ಇದುವರೆಗೂ ಪ್ರಾರಂಭವಾಗದಿರಲು ಕಾರಣಗಳೇನು;	ವಿ.ಟಿ.ಯು ಬೆಳಗಾವಿಯ ರೂ. 440.00 ಕೋಟಿಗಳನ್ನು ಆದಾಯ ತೆರಿಗೆ ಇಲಾಖೆಯು ತನ್ನ ವಶಕ್ಕೆ ಪಡೆದ ಕಾರಣ ಕಟ್ಟಡ ನಿರ್ಮಾಣ ಪ್ರಾರಂಭವಾಗಿರುವುದಿಲ್ಲ.
ಈ)	ಸದರಿ ಇಂಜಿನಿಯರಿಂಗ್ ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು?	ಎ.ಐ.ಸಿ.ಟಿ.ಇ ನವದೆಹಲಿಯ 2018-19 ನೇ ಸಾಲಿನ ಮಾರ್ಗಸೂಚಿ Chapter-1(1.1)e ರನ್ವಯ" Applicants are advised to apply only if the Building for the first year is complete as per the Infrastructure requirements in all respects at the time of submitting the application on the AICTE web-portal" ಕಟ್ಟಡಕಾಮಗಾರಿಯು ಪೂರ್ಣಗೊಂಡ ನಂತರ ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಐಸಿಟಿಇ ಗೆ ಸದರಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಎ.ಐ.ಸಿ.ಟಿ.ಇ ನವದೆಹಲಿಯ 2018-19 ನೇ ಸಾಲಿನ ಮಾರ್ಗಸೂಚಿ ಅನ್ವಯ ಕಟ್ಟಡ ಕಾಮಗಾರಿಯು ಪೂರ್ಣಗೊಂಡು, ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಐಸಿಟಿಇ ಅನುಮೋದನೆ ದೊರೆತ ನಂತರ ಕಾಲೇಜನ್ನು ಪ್ರಾರಂಭಿಸಲಾಗುವುದು. ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 87 ಹೆಚ್‌ಪಿಯು 2018

[illegible]

[illegible]

[illegible]

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
[illegible]
[illegible]
[illegible]
(ಭೂಸ್ವಾಧೀನ)

ಪ್ರತಿ :

1. [illegible], ಕರ್ನಾಟಕ [illegible] 100 ಪ್ರತಿ [illegible]
2. [illegible]

104

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	256
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ	:	10.07.2018

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಜವಳಿ ಇಲಾಖೆಯಿಂದ ಸಾರ್ವಜನಿಕರಿಗೆ ದೊರೆಯುತ್ತಿರುವ ಸೌಲಭ್ಯಗಳು ಯಾವುವು; (ವಿವರ ನೀಡುವುದು)	ಜವಳಿ ಇಲಾಖೆಯಿಂದ ಸಾರ್ವಜನಿಕರಿಗೆ ದೊರೆಯುತ್ತಿರುವ ಸೌಲಭ್ಯಗಳು ಈ ಕೆಳಗಿನಂತಿವೆ.

ಕ್ರ ಸ	ಯೋಜನೆಗಳ ವಿವರ	ಕ್ರ. ಸ.	ಯೋಜನೆಗಳ ವಿವರ
	ಕೈಮಗ್ಗ ನೇಕಾರರಿಗೆ		
1	ಮಹಾತ್ಮಾ ಗಾಂಧಿ ಬುನಕರ ಬೀಮಾ ಯೋಜನೆ	9	ನೇಕಾರರ ವಿಶೇಷ ಪ್ಯಾಕೇಜ್ (KHDC)
2	ನೇಕಾರ ಕಲ್ಯಾಣ ಯೋಜನೆ	10	ಕಚ್ಚಾ ಮಾಲು ಖರೀದಿಗಾಗಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ
3	ಶಿಕ್ಷಾ ಸಹಯೋಗ ಯೋಜನೆ	11	ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ
4	ಮಿತವ್ಯಯ ನಿಧಿ ಯೋಜನೆ	12	ವಸತಿ ಕಾರ್ಯಾಗಾರ ಯೋಜನೆ
5	ನೇಕಾರರ ಅಧ್ಯಯನ ಪ್ರವಾಸ	13	ಉಣ್ಣೆ ವಲಯ ಯೋಜನೆ
6	ಶೇ.20ರಷ್ಟು ರಿಬೇಟ್ ಯೋಜನೆ	14	ಕೈಮಗ್ಗ ವಿಕಾಸ ಯೋಜನೆ
7	ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆ	15	ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ
8	ಶೇ.1 ಮತ್ತು 3ರ ಬಡ್ಡಿ ದರದಲ್ಲಿ ಸಾಲ		

ಕ್ರ. ಸಂ.	ಯೋಜನೆಗಳ ವಿವರ	ಕ್ರ. ಸಂ.	ಯೋಜನೆಗಳ ವಿವರ
	ವಿದ್ಯುತ್ ಮಗ್ಗ ನೇಕಾರರಿಗೆ		
1	ಗುಂಪು ವಿಮಾ ಯೋಜನೆ	8	ಶಿಕ್ಷಾ ಸಹಯೋಗ ಯೋಜನೆ
2	ನಾಟಿಂಗ್ ಮಿಷಿನ್ ಅಳವಡಿಕೆಗೆ ಸಹಾಯಧನ	9	ನೂತನ ಜವಳಿ ನೀತಿಯಡಿ ತರಬೇತಿ
3	ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ	10	ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಕೆಗೆ ಸಹಾಯಧನ
4	02 ವಿದ್ಯುತ್ ಮಗ್ಗ ಪೂರೈಸುವ ಯೋಜನೆ	11	ವಿದ್ಯುತ್‌ಮಗ್ಗಳಿಗೆ ಶೇರು ಬಂಡವಾಳ ಸಹಾಯ
5	ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ	12	ಗ್ರಾಮೀಣ ಪ್ರದೇಶದ ವಿದ್ಯುತ್ ಮಗ್ಗಗಳಿಗೆ ಸೌರಶಕ್ತಿ ಉಪಕರಣ ಗಳಿಗೆ ಶೇ.50 ರಷ್ಟು ಸಹಾಯಧನ.
6	ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಎಕ್ಸ್‌ಪ್ರೆಸ್ ಫೀಡರ್ ಸಹಾಯಧನ	13	ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣಕ್ಕಾಗಿ ಸಹಾಯಧನ
7	ವಸತಿ ವ ಕಾರ್ಯಾಗಾರ		
	<u>ನೂತನ ಜವಳಿ ನೀತಿ 2013-18 ರ ಯೋಜನೆಗಳು.</u>		
1	ಬಡ್ಡಿ ಸಹಾಯಧನ	6	ವಿದ್ಯುತ್ ಸಹಾಯಧನ
2	ಪ್ರವೇಶ ತೆರಿಗೆ ಮರುಪಾವತಿ	7	ಉತ್ಕೃಷ್ಟತೆಯ ಕೇಂದ್ರ
3	ಮುದ್ರಾಂಕ ಸುಂಕ ಮರುಪಾವತಿ	8	ವಿಶೇಷ ಉತ್ತೇಜನಗಳು.
4	ಬ್ರೌನ್ ಫೀಲ್ಡ್ ಸಮೂಹ ಅಭಿವೃದ್ಧಿ	9	ಸಾಮರ್ಥ್ಯ ನಿರ್ಮಾಣ ಬೆಂಬಲ
5	ಸಾಲ ಸಂಪರ್ಕ ಬಂಡವಾಳ ಸಹಾಯಧನ	10	ಹಿಂದುಳಿದ ಪ್ರದೇಶಗಳಲ್ಲಿ ನಿರ್ದಿಷ್ಟ ಜವಳಿ ವಲಯಗಳು

....2

11	ಅಸ್ತಿತ್ವದಲ್ಲಿರುವ ಮೆಗಾ/ಅಲ್ಟ್ರಾ ಮೆಗಾ / ಸೂಪರ್ ಮೆಗಾ ಘಟಕ ಗಳಿಗೆ (ವಿಸ್ತರಣೆ/ ವೈವಿಧ್ಯತೆ/ ಆಧು ನೀಕರಣ/ ತಾಂತ್ರಿಕ ಉನ್ನತೀಕರಣ)	15	ಅಸ್ತಿತ್ವದಲ್ಲಿರುವ ಘಟಕಗಳಿಗೆ (ವಿಸ್ತರಣೆ/ ವೈವಿಧ್ಯತೆ/ ಆಧುನೀಕರಣ/ ತಾಂತ್ರಿಕ ಉನ್ನತೀಕರಣ).
12	ಸಾಮಾನ್ಯ ಎಫ್ಲ್ಯುಯೆಂಟ್ ಟ್ರೀಟ್ಮೆಂಟ್ ಸ್ಥಾವರ ಮತ್ತು ಅಪಾಯಕಾರಿ ತ್ಯಾಜ್ಯ ವಿಲೇವಾರಿ ಸೌಲಭ್ಯ	16	ಅಸ್ತಿತ್ವದಲ್ಲಿರುವ ಘಟಕಗಳ ಪರಿಸರ ಅನುಸರಣೆ ಮತ್ತು ಸಂಪನ್ಮೂಲ ಸಂರಕ್ಷಣೆಗಾಗಿ ನೆರವು
13	ಇಎಸ್ಐ & ಇಪಿಎಫ್ ಮರುಪಾವತಿ.	17	ಮೆಗಾ/ ಅಲ್ಟ್ರಾ ಮೆಗಾ/ ಸೂಪರ್ ಮೆಗಾ ಯೋಜನೆಗಳು
14	ಗ್ರೀನ್‌ಫೀಲ್ಡ್ ಜವಳಿ ಪಾರ್ಕುಗಳಿಗಾಗಿ ಸಾಮಾನ್ಯ ಮೂಲಭೂತ ಸೌಕರ್ಯ		
	<u>ಸಹಕಾರಿ ನೂಲಿನ ಗಿರಣಿಗಳಿಗೆ:</u>		
1	ಸಹಕಾರಿ ನೂಲಿನ ಗಿರಣಿಗಳಿಗೆ ವಿದ್ಯುತ್ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ ರೂ. 2 ರಂತೆ ಮರುಪಾವತಿ.	2	ಸಹಕಾರಿ ನೂಲಿನ ಗಿರಣಿಯವರು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾದಿಂದ ಖರೀದಿಸುವ ಹತ್ತಿಯ ಮೇಲೆ ಶೇ. 5 ರಷ್ಟು ಸಹಾಯಧನ.

ಆ	ಬೆಳಗಾವಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2015ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ವಿವಿಧ ಸೌಲಭ್ಯಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಬೆಳಗಾವಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2015ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ವಿವಿಧ ಸೌಲಭ್ಯಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ 16407 ಇದ್ದು. ವಿವರವನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.
ಇ	ಇಲಾಖೆಯಿಂದ ವಸತಿ ಸೌಲಭ್ಯವನ್ನು ಒದಗಿಸಲಾಗಿದೆಯೇ;	ಹೌದು
ಈ	ಹಾಗಿದ್ದಲ್ಲಿ, ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿ ಸೌಲಭ್ಯ ಒದಗಿಸಲಾಗಿದೆ?	ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ 2017-18ನೇ ಸಾಲಿಗೆ ವಸತಿ ಕಾರ್ಯಗಾರ ಯೋಜನೆಯಡಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ **32** ಫಲಾನುಭವಿಗಳಿಗೆ ವಸತಿ ಸೌಲಭ್ಯ ಒದಗಿಸಲಾಗಿದೆ.

ಸಂಖ್ಯೆ: ವಾಕೈ 61 ಜಕೈಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ) ರವರ ಪ್ರಶ್ನೆ ಸಂಖ್ಯೆ 256 (ಅ)ಕ್ಕೆ ಅನುಬಂಧ									
ಕ್ರ ಸಂ.	ಯೋಜನೆ	2015-16		2016-17		2017-18		ಒಟ್ಟು	
		ಸಾಧನೆ		ಸಾಧನೆ		ಸಾಧನೆ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಸಾಮಾನ್ಯ ವಿದ್ಯುತ್ ಮಗ್ಗ	85	190.50	41	52.5	25	37.5	151	280.50
2	ವಿಶೇಷ ಘಟಕ ಯೋಜನೆ	14	44.1	40	126.0	3	6.8	57	176.85
3	ಗಿರಿಜನ ಉಪ ಯೋಜನೆ	2	6.3	7	22.05	3	8.1	12	36.45
4	ವಸತಿ-ವ-ಕಾರ್ಯಾಗಾರ ಯೋಜನೆ	0	0	0	0	32	0	32	0.00
5	ಎಲೆಕ್ಟ್ರಾನಿಕ್ ಜಕಾರ್ಡ್ -ಸಾಮಾನ್ಯ	25	56.25	20	45.0	145	326.25	190	427.50
6	ಎಲೆಕ್ಟ್ರಾನಿಕ್ ಜಕಾರ್ಡ್ -ವಿಘಯೋ	0	0	2	8.1	0	0.00	2	8.10
7	ಎಲೆಕ್ಟ್ರಾನಿಕ್ ಜಕಾರ್ಡ್ -ಗಿಉಯೋ	0	0	1	4.05	0	0.00	1	4.05
8	ಗುಂಪು ವಿಮಾ ಯೋಜನೆ	4091	0	3907	0.00	3020	0	11018	0.00
9	ಗುಂಪು ವಿಮಾ ಯೋಜನೆಯಡಿ ಶಿಕ್ಷಾ ಸಹಯೋಗ ಯೋಜನೆ	800	9.6	196	2.35	368	0	1364	11.95
10	ಗುಂಪು ವಿಮಾ ಯೋಜನೆಯಡಿ ಮರಣ ಪರಿಹಾರ ನಿಧಿ	21	13.8	6	3.6	15	9.90	42	27.30
11	3% ಬಡ್ಡಿ ಸಾಲ ಯೋಜನೆ	878	48.34	451	0	0	0	1329	48.34
12	ಸಾಲಮನ್ನಾ ಬಡ್ಡಿಮನ್ನಾ ಯೊಜನೆ	0	0	0	0	1465	0.00	1465	0.00
13	ನೂತನ ಜವಳಿ ನೀತಿ ಯೋಜನೆ ತರಬೇತಿ	100	6.00	140	8.40	50	4.75	290	19.15
14	ನೂತನ ಜವಳಿ ನೀತಿ ಪ್ರೋತ್ಸಾಹಧನ	33	39.22	10	15.90	8	23.66	51	78.79
15	ಇನ್-ಸಿಟ್ಯೂ ಯೋಜನೆ	0	0.00	188	105.00	212	21.20	400	126.20
16	ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ-ವಿಶೇಷ ಘಟಕ ಯೋಜನೆಯಡಿ ಜವಳಿ ಆಧಾರಿತ ಸಣ್ಣ ಮತ್ತು ಅತೀ ಸಣ್ಣ (ಎಸ್.ಎಮ್.ಇ) ಘಟಕ ಸ್ಥಾಪನೆಗೆ ಸಹಾಯಧನ	0	0.00	0	0.00	3	112.9813	3	112.9813
	ಒಟ್ಟು	6049	414.11	5009	392.95	5349	551.09	16407	1358.15848
17	ವಿದ್ಯುತ್ ಮಗ್ಗ ರಿಯಾಯತಿ	01-20 ಹೆಚ್.ಪಿ ವರೆಗೆ		01-20 ಹೆಚ್.ಪಿ ವರೆಗೆ		01-20 ಹೆಚ್.ಪಿ ವರೆಗೆ		01-20 ಹೆಚ್.ಪಿ ವರೆಗೆ	
		ಘಟಕ	ಮಗ್ಗ	ಘಟಕ	ಮಗ್ಗ	ಘಟಕ	ಮಗ್ಗ	ಘಟಕ	ಮಗ್ಗ
		2563	8743	2634	9112	121	369	5318	18224

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 26

ಸದಸ್ಯರ ಹೆಸರು : ಶ್ರೀ ಅಮೀನಪ್ಪಗೌಡ ಎಸ್ ಪಾಟೀಲ್(ನಡಹಳ್ಳಿ) (ಮುದ್ದೇಬಿಹಾಳ)

ಉತ್ತರಿಸಬೇಕಾದ ದಿನಾಂಕ : 10.07.2018

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ವಿಜಯಪುರ ಜಿಲ್ಲೆ. ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು: (ಅವು ಯಾವುವು)	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪ್ರೌಢ ಶಾಲೆಗಳ ಸಂಖ್ಯೆ: 1 ಸರ್ಕಾರಿ ಪ್ರೌಢ ಶಾಲೆ 17 2 ಅನುದಾನಿತ ಪ್ರೌಢ ಶಾಲೆ 20 3 ಅನುದಾನ ರಹಿತ ಪ್ರೌಢ ಶಾಲೆ 21 (ಶಾಲಾ ವಿವರವನ್ನು ಅನುಬಂಧ 01 ರಿಂದ 03 ರಲ್ಲಿರಿಸಿದೆ.)
ಆ	ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು:	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪ್ರೌಢ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ: 1 ಸರ್ಕಾರಿ ಪ್ರೌಢ ಶಾಲೆ 2838 2 ಅನುದಾನಿತ ಪ್ರೌಢ ಶಾಲೆ 3592 3 ಅನುದಾನ ರಹಿತ ಪ್ರೌಢ ಶಾಲೆ 2847
ಇ	ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶೈಕ್ಷಣಿಕ ಸುಧಾರಣಾ ಹಿತದೃಷ್ಟಿಯಿಂದ ಇನ್ನೂ ಹೆಚ್ಚಿನ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೆ;	2018-19ನೇ ಸಾಲಿನಲ್ಲಿ ಮುದ್ದೇಬಿಹಾಳ ಮತಕ್ಷೇತ್ರ ವ್ಯಾಪ್ತಿಯಲ್ಲಿನ 1)ಹೆಚ್.ಪಿ.ಎಸ್. ಢವಳಗಿ 2) ಹೆಚ್.ಪಿ.ಎಸ್. ಯರಝರಿ ಈ ಎರಡು ಪ್ರೌಢ ಶಾಲೆಗಳನ್ನು ಆರ್.ಎಂ.ಎಸ್.ಎ ಅಡಿಯಲ್ಲಿ ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.
ಈ	ಹೊಸದಾಗಿ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು;	ಜನವಸತಿ ಪ್ರದೇಶದ 5 ರಿಂದ 7 ಕಿ.ಮೀ ವ್ಯಾಪ್ತಿಯಲ್ಲಿ ಪ್ರೌಢ ಶಾಲೆಗಳಿಲ್ಲದಿದ್ದಲ್ಲಿ ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಅವಕಾಶವಿದೆ.
ಉ	ಸದರಿ ಮಾನದಂಡಗಳ ಪ್ರಕಾರ ಮುದ್ದೇಬಿಹಾಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳು ಮಂಜೂರು ಆಗಿವೆಯೆ; ಇಲ್ಲದಿದ್ದಲ್ಲಿ, ಕಾರಣಗಳೇನು?	ಪರಿಶೀಲನೆಯಲ್ಲಿದೆ.

ಸಂಖ್ಯೆ:ಇಡಿ 159 ಎಲ್‌ಬಿಪಿ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಸರಕಾರಿ ಪ್ರೌಢ ಶಾಲೆಗಳ ಹೆಸರು ಹಾಗೂ ಮಕ್ಕಳ ಸಂಖ್ಯೆ.

ಅನಂ	ಶಾಲೆಯ ಹೆಸರು	ಮಕ್ಕಳ ಸಂಖ್ಯೆ
01	ಸರಕಾರಿ ಪ್ರೌಢ ಶಾಲೆ ಕೂಳೂರ	160
02	ಸರಕಾರಿ ಪ್ರೌಢ ಶಾಲೆ ಬಳಬಟ್ಟಿ	208
03	ಸರಕಾರಿ ಪ್ರೌಢ ಶಾಲೆ ಮುದ್ದೇಬಿಹಾಳ	203
04	ಸರಕಾರಿ ಉರ್ದು ಪ್ರೌಢ ಶಾಲೆ ಮುದ್ದೇಬಿಹಾಳ	112
05	ಸರಕಾರಿ ಉರ್ದು ಪ್ರೌಢ ಶಾಲೆ ನಾಲತವಾಡ	84
06	ಸರಕಾರಿ ಪ್ರೌಢ ಶಾಲೆ ಯಲಗೂರ	101
07	ಸರಕಾರಿ ಪ್ರೌಢ ಶಾಲೆ ಆಲೂರ	148
08	ಸರಕಾರಿ ಪ್ರೌಢ ಶಾಲೆ ರಕ್ಕಸಗಿ	422
09	ಸರಕಾರಿ ಪ್ರೌಢ ಶಾಲೆ ತಂಗಡಗಿ	174
10	ಸರಕಾರಿ ಪ್ರೌಢ ಶಾಲೆ ಮಿಣಜಗಿ	186
11	ಸರಕಾರಿ ಪ್ರೌಢ ಶಾಲೆ ಅಂಗಡಳ್ಳಿ	124
12	ಸರಕಾರಿ ಪ್ರೌಢ ಶಾಲೆ ಮಡಿಕೇಶ್ವರ	147
13	ಸರಕಾರಿ ಪ್ರೌಢ ಶಾಲೆ ಮೂಕಿಹಾಳ	174
14	ಸರಕಾರಿ ಪ್ರೌಢ ಶಾಲೆ ಇಂಗಳಗೇರಿ	138
15	ಸರಕಾರಿ ಪ್ರೌಢ ಶಾಲೆ ರೂಡಗಿ ಆರ್ ಎಂ ಎಸ್ ಎ	181
16	ಸರಕಾರಿ ಪ್ರೌಢ ಶಾಲೆ ಮದಿನಾಳ ಆರ್ ಎಂ ಎಸ್ ಎ	41
17	ಆದರ್ಶ ವಿದ್ಯಾಲಯ ಬಿದರಕುಂದಿ	235
	ಒಟ್ಟು	2838

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,ವಿಜಯಪುರ

ಅನುಬಂಧ-2

ಖಾಸಗಿ ಅನುದಾನಿತ ಪ್ರೌಢ ಶಾಲೆಗಳ ಹೆಸರು ಹಾಗೂ ಮಕ್ಕಳ ಸಂಖ್ಯೆ.

ನಂ	ಶಾಲೆಯ ಹೆಸರು	ಮಕ್ಕಳ ಸಂಖ್ಯೆ
01	ಪಿ ಬಿ ಪ್ರೌಢ ಶಾಲೆ ಬಸರಕೋಡ	226
02	ಎಸ್ ಬಿ ಪ ಪೂ ಕಾಲೇಜು ಹಿರೂರ	300
03	ಕೆ ಜಿ ವಿ ಎಸ್ ಪ್ರೌಢ ಶಾಲೆ ಕೊಣ್ಣೂರ	156
04	ಅಂಜುಮನ್ ಪ್ರೌಢ ಶಾಲೆ ಮುದ್ದೇಬಿಹಾಳ	106
05	ಎಂ ಬಿ ಪಿ ಪ್ರೌಢ ಶಾಲೆ ಢವಳಗಿ	312
06	ವಿ ವಿ ವಿ ಎಸ್ ಪ್ರೌಢ ಶಾಲೆ ಜಂಗಮುರಾಳ	130
07	ಎಸ್ ಆರ್ ಪ್ರೌಢ ಶಾಲೆ ಸರೂರ	85
08	ಎಸ್ ಆರ್ ಪ್ರೌಢ ಶಾಲೆ ಮುದ್ದೇಬಿಹಾಳ	132
09	ಟಿ ಎಸ್ ಎಸ್ ಪ್ರೌಢ ಶಾಲೆ ಮುದ್ದೇಬಿಹಾಳ	120
10	ವಿ ಬಿ ಸಿ ಪ್ರೌಢ ಶಾಲೆ ಮುದ್ದೇಬಿಹಾಳ	509
11	ವಿ ವಿ ಎ ಬಾಲಕಿಯರ ಪ್ರೌಢ ಶಾಲೆ ಮುದ್ದೇಬಿಹಾಳ	207
12	ಎಸ್ ಎಸ್ ಎಂ ಪ್ರೌಢ ಶಾಲೆ ಮುದ್ದೇಬಿಹಾಳ	115
13	ಎಸ್ ಪಿ ಪ್ರೌಢ ಶಾಲೆ ನಾಲತವಾಡ	176
14	ಎಸ್ ಸಿ ಪ್ರೌಢ ಶಾಲೆ ತಂಗಡಗಿ	89
15	ಎಸ್ ವಿ ಎಂ ಪ್ರೌಢ ಶಾಲೆ ಕಂದಗನೂರ	162
16	ಬಸವೇಶ್ವರ ಪ್ರೌಢ ಶಾಲೆ ಕುಂಟೋಜಿ	139
17	ಎಚ್ ಎಸ್ ಪ್ರೌಢ ಶಾಲೆ ನಾಲತವಾಡ	151
18	ರಾಮಲಿಂಗೇಶ್ವರ ಎಚ್ ಎಸ್ ತುಂಬಗಿ	163
19	ವರಮಾರುತೇಶ್ವರ ಪ್ರೌಢ ಶಾಲೆ ಕೊಡಗಾನೂರ	178
20	ಬಸವೇಶ್ವರ ಪ್ರೌಢ ಶಾಲೆ ಕೊಡಗಾನೂರ	136
	ಒಟ್ಟು	3592

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ.ವಿಜಯಪುರ

ಅನುಬಂಧ-3

ಖಾಸಗಿ ಅನುದಾನ ರಹಿತ ಪ್ರೌಢ ಶಾಲೆಗಳ ಹೆಸರು ಹಾಗೂ ಮಕ್ಕಳ ಸಂಖ್ಯೆ.

ಅನಂ	ಶಾಲೆಯ ಹೆಸರು	ಮಕ್ಕಳ ಸಂಖ್ಯೆ
01	ಸ್ವಾಮಿವಿವೇಕಾನಂದ ಎಚ್ ಎಸ್ ತಂಗಡಗಿ ರೋಡ ಶಿರೋಳ	76
02	ಚಿನ್ಮಿ ಇಂಗ್ಲೀಷ ಮಿಡಿಯಂ ಎಚ್ ಎಸ್ ಮುದ್ದೇಬಿಹಾಳ	72
03	ಜವಾಹರಲಾಲ ನೆಹರು ಎಚ್ ಎಸ್ ಮುದ್ದೇಬಿಹಾಳ	50
04	ಶಾರದಾ ವಿ ಎಂ ಎಚ್ ಎಸ್ ಮುದ್ದೇಬಿಹಾಳ	184
05	ಸಂತ ಕನಕದಾಸ ಎಚ್ ಎಸ್ ಮುದ್ದೇಬಿಹಾಳ	244
06	ಎಂ ಜಿ ಎಂ ಕೆ ವಿ ವಿ ಎ ಎಚ್ ಎಸ್ ಮುದ್ದೇಬಿಹಾಳ	250
07	ಜ್ಞಾನಭಾರತಿ ವಿ ಎಚ್ ಎಸ್ ಮುದ್ದೇಬಿಹಾಳ	125
08	ಆಕ್ಸಫರ್ಡ ಇಂಗ್ಲೀಷ ಮಾಧ್ಯಮ ಪ್ರೌಢ ಶಾಲೆ ಮುದ್ದೇಬಿಹಾಳ	53
09	ವಿರೇಶ್ವರ ಇಂಗ್ಲೀಷ ಮಾಧ್ಯಮ ಎಚ್ ಎಸ್ ನಾಲತವಾಡ	01
10	ಕುವೆಂಪು ಎಚ್ ಎಸ್ ಎನ್ ಜಿ ಎನ್ ಬಳಗಾನೂರ ಕ್ರಾಸ್	87
11	ಘನಮಠೇಶ್ವರ ಕನ್ನಡ ಎಚ್ ಎಸ್ ಮಿಣಜಗಿ	21
12	ಘನಮಠೇಶ್ವರ ಇಂಗ್ಲೀಷ ಎಚ್ ಎಸ್ ಮಿಣಜಗಿ	71
13	ಶ್ರೀ ಕನಕಾ ಎಚ್ ಎಸ್ ಮಿಣಜಗಿ ಕ್ರಾಸ್	108
14	ಸಿ ವಿ ದೇಸಾಯಿ ಎಚ್ ಎಸ್ ಚವನಭಾವಿ	74
15	ರೇವಣಸಿದ್ದೇಶ್ವರ ಎಚ್ ಎಸ್ ಚವನಭಾವಿ	77
16	ಎಸ್ ಡಿ ಕೆ ಎಚ್ ಎಸ್ ನಾಗರಬೆಟ್ಟ	533
17	ಎ ಬಿ ಆರ್ ಎಚ್ ಎಸ್ ನಾಗರಬೆಟ್ಟ	93
18	ಆಕ್ಸಫರ್ಡ ಎಚ್ ಎಸ್ ನಾಗರಬೆಟ್ಟ	584
19	ಪಾಟೀಲ ಕನ್ನಡ ಎಚ್ ಎಸ್ ನಾಗರಬೆಟ್ಟ	120
20	ಎಚ್ ಡಿ ಕೆ ಇಂಗ್ಲೀಷ ಎಚ್ ಎಸ್ ನಾಗರಬೆಟ್ಟ	19
21	ಶಿವಕುಮಾರ ಎಚ್ ಎಸ್ ಬಿದರಕುಂದಿ	81
	ಒಟ್ಟು	2847

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,ವಿಜಯಪುರ

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 253
2) ಸದಸ್ಯರ ಹೆಸರು : ಶ್ರೀ. ಟಿ.ವೆಂಕಟರಮಣಯ್ಯ
3) ಉತ್ತರಿಸಬೇಕಾದ ದಿನಾಂಕ : 10.07.2018
4) ಉತ್ತರಿಸುವವರು : ಮುಖ್ಯ ಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ದೊಡ್ಡಬಳ್ಳಾಪುರ ಮತ ಕ್ಷೇತ್ರದ 'ಡಿ' ಕ್ರಾಸ್ ಹತ್ತಿರ ರೈಲ್ವೆ ಎಲ್.ಸಿ.32 ಮೇಲು ಸೇತುವೆ ನಿರ್ಮಾಣಕ್ಕೆ ಸಾರ್ವಜನಿಕರ ಭೂಮಿ ವಶಪಡಿಸಿಕೊಂಡು ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಪ್ರಸ್ತುತ ಯೋಜನೆ ವೆಚ್ಚವು ರೂ.29 .26 ಕೋಟಿಗಳಿಂದ ರೂ.47.29 ಕೋಟಿಗೆ ಪರಿಷ್ಕೃತಗೊಂಡಿದ್ದು ಭೂಸ್ವಾಧೀನ ವೆಚ್ಚವು ರೂ.98.84 ಲಕ್ಷಗಳಿಂದ ರೂ.472.00 ಲಕ್ಷಗಳಿಗೆ ಹೆಚ್ಚವರಿಯಾಗಿರುತ್ತದೆ. ಈ ಬಗ್ಗೆ ವೆಚ್ಚ ಹೆಚ್ಚಳ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಒಟ್ಟಾರೆ ಯೋಜನೆಯಲ್ಲಿ ಹೆಚ್ಚುವರಿಯಾದ ಪರಿಷ್ಕೃತ ಮೊತ್ತಕ್ಕೆ ಆರ್ಥಿಕ ಇಲಾಖೆಯ ಸಹಮತಿ ಪಡೆದು ಸಚಿವ ಸಂಪುಟದ ಅನುಮೋದನೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ

ಸಂಖ್ಯೆ: ಮೂಅಇ 90 ರಾರಾಹೆ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿ

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 253
2)	ಸದಸ್ಯರ ಹೆಸರು	: ಶ್ರೀ. ಟಿ.ವೆಂಕಟರಮಣಯ್ಯ
3)	ಉತ್ತರಿಸಬೇಕಾದ ದಿನಾಂಕ	: 10.07.2018
4)	ಉತ್ತರಿಸುವವರು	: ಮುಖ್ಯ ಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ದೊಡ್ಡಬಳ್ಳಾಪುರ ಮತ ಕ್ಷೇತ್ರದ 'ಡಿ' ಕ್ರಾಸ್ ಹತ್ತಿರ ರೈಲ್ವೆ ಎಲ್.ಸಿ.32 ಮೇಲು ಸೇತುವೆ ನಿರ್ಮಾಣಕ್ಕೆ ಸಾರ್ವಜನಿಕರ ಭೂಮಿ ವಶಪಡಿಸಿಕೊಂಡು ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಪ್ರಸ್ತುತ ಯೋಜನೆ ವೆಚ್ಚವು ರೂ.29 .26 ಕೋಟಿಗಳಿಂದ ರೂ.47.29 ಕೋಟಿಗೆ ಪರಿಷ್ಕೃತಗೊಂಡಿದ್ದು ಭೂಸ್ವಾಧೀನ ವೆಚ್ಚವು ರೂ.98.84 ಲಕ್ಷಗಳಿಂದ ರೂ.472.00 ಲಕ್ಷಗಳಿಗೆ ಹೆಚ್ಚವರಿಯಾಗಿರುತ್ತದೆ. ಈ ಬಗ್ಗೆ ವೆಚ್ಚ ಹೆಚ್ಚಳ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಒಟ್ಟಾರೆ ಯೋಜನೆಯಲ್ಲಿ ಹೆಚ್ಚುವರಿಯಾದ ಪರಿಷ್ಕೃತ ಮೊತ್ತಕ್ಕೆ ಆರ್ಥಿಕ ಇಲಾಖೆಯ ಸಹಮತಿ ಪಡೆದು ಸಚಿವ ಸಂಪುಟದ ಅನುಮೋದನೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ

ಸಂಖ್ಯೆ: ಮೂಅಇ 90 ರಾರಾಹೆ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯ ಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 268
2. ಸದಸ್ಯರ ಹೆಸರು : ಶ್ರೀ ಎನ್.ಎ. ಹ್ಯಾರಿಸ್ (ಶಾಂತಿನಗರ)
3. ಉತ್ತರಿಸುವ ದಿನಾಂಕ : 10-07-2018
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು

	ಪ್ರಶ್ನೆ	ಉತ್ತರ
ಅ)	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ವರ್ಗದ ಹುದ್ದೆಗಳನ್ನು ಭರ್ತಿಗೊಳಿಸುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು;	ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುಂಬಲಾಗುತ್ತದೆ. ಇದಲ್ಲದೆಯೇ, ಮುಂಬಡ್ತಿ ಮೂಲಕ ತುಂಬಬಹುದಾದ ಹುದ್ದೆಗಳನ್ನೂ ಸಹ ಕಾಲಕಾಲಕ್ಕೆ ನಿಯಮಾನುಸಾರ ಭರ್ತಿ ಮಾಡಲಾಗುತ್ತಿದೆ.
ಆ)	ಗಣನೀಯ ಪ್ರಮಾಣದಲ್ಲಿ ಖಾಲಿ ಇರುವ ಹುದ್ದೆಗಳಿಂದಾಗಿ ಇಲಾಖೆಗಳ ಕಾರ್ಯ ನಿರ್ವಹಣೆಗೆ ತೊಡಕು ಎದುರಾಗುತ್ತಿರುವುದನ್ನು ಗಮನಿಸಿ ಸಕಾಲದಲ್ಲಿಯೇ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದೇ;	
ಇ)	ರಾಜ್ಯದಲ್ಲಿ ನಿರುದ್ಯೋಗಿ ವಿದ್ಯಾವಂತರು ಉದ್ಯೋಗ ದೊರಕದೆ ಸಂಕಷ್ಟದಲ್ಲಿರುವುದಲ್ಲದೆ, ಅರ್ಹತಾ ಮಾನದಂಡಗಳನ್ವಯ ಅವರ ವಯೋಮಿತಿಯನ್ನು ಕೂಡ ಮೀರಿರುವ ಕಾರಣ ನೇಮಕಾತಿಗಳಲ್ಲಿ ವಯೋಮಿತಿಯನ್ನು ಹೆಚ್ಚಿಸುವ ಮೂಲಕ ನಿರುದ್ಯೋಗಿಗಳಿಗೆ ಅನುಕೂಲ ಮಾಡಿಕೊಡುವ ಕುರಿತಾದ ಸರ್ಕಾರದ ನಿಲುವುಗಳೇನು?	ವಯೋಮಿತಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ ಸಿಆಸುಇ 90 ರಾಸವಿ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	286
ಸದಸ್ಯರ ಹೆಸರು	ಶ್ರೀ ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	10–07–2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ರಾಯಚೂರು ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಒಟ್ಟು ಮಂಜೂರಾದ ಶಾಲಾ ಶಿಕ್ಷಕರ ಹುದ್ದೆ ಎಷ್ಟು;	ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು–1254 ಮಂಜೂರಾದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು–186
ಆ) ಈಗಾಗಲೇ ಎಷ್ಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ;	ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು–992 ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು–171
ಇ) ಖಾಲಿ ಇರುವ ಶಿಕ್ಷಕರ ಹುದ್ದೆ ಎಷ್ಟು;	ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು–262 ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು–15
ಈ) ಗ್ರಾಮೀಣ ಮತ ಕ್ಷೇತ್ರದಲ್ಲಿ ಕೊರತೆ ಇರುವ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?	2018–19ನೇ ಸಾಲಿನಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಸಂಪೂರ್ಣವಾಗಿ ಮುಗಿಯುವವರೆಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 228 ಪಿಬಿಎಸ್ 2018 ದಿನಾಂಕ:14–06–2018ರಲ್ಲಿ 2018–19ನೇ ಸಾಲಿಗೆ ಒಟ್ಟು 25600 ಹುದ್ದೆಗಳನ್ನು ಅತಿಥಿ ಶಿಕ್ಷಕರಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 12500 ಹುದ್ದೆಗಳಿಗೆ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 3100 ಹುದ್ದೆಗಳು ಸೇರಿದಂತೆ ಒಟ್ಟು 15600 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 10000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8)ಹುದ್ದೆಗಳ ನೇರ ನೇಮಕಾತಿ ಹುದ್ದೆಗಳಿಗೆ ಆಯ್ಕೆಗೊಂಡ ಶಿಕ್ಷಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅತಿಥಿ ಶಿಕ್ಷಕರ ನೇಮಕಾತಿ ತಂತಾನೆ ರದ್ದಾಗುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಅನುಮತಿ ನೀಡಲಾಗಿದೆ.

ಇಡಿ 238 ಪಿಎಂಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **680**
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ : **10-07-2018**
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ.	ಬೈಲಹೊಂಗಲ ತಾಲ್ಲೂಕಿನಲ್ಲಿ 07 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 05 ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 20 ಕೊಠಡಿಗಳು ಶಿಥಿಲಾವಸ್ಥೆಯಲ್ಲಿರುತ್ತವೆ.
(ಆ) ಸದರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ವಿದ್ಯಾರ್ಥಿಗಳು ಜೀವ ಭಯದೊಂದಿಗೆ ವಿದ್ಯಾಭ್ಯಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
(ಇ) ಹಾಗಿದ್ದಲ್ಲಿ: ಸದರಿ ಶಾಲಾ ಕಟ್ಟಡಗಳನ್ನು ದುರಸ್ಥಿಗೊಳಿಸಲು............ಸರ್ಕಾರವುಕೂಡಲೇಕ್ರಮ ಕೈಗೊಳ್ಳುವುದೇ?	ಬೈಲಹೊಂಗಲ ಮತ ಕ್ಷೇತ್ರ ವ್ಯಾಪ್ತಿಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೂದಿಹಾಳ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೊಡವಾಡ ಈ ಶಾಲೆಗಳ ಕೊಠಡಿ ನಿರ್ಮಾಣಕ್ಕಾಗಿ ತಲಾ ರೂ.8.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದಂತೆ, 2018-19ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಶಾಲಾ ಕಟ್ಟಡಗಳ ದುರಸ್ಥಿ/ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ಇಡಿ 188 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 251
ಸದಸ್ಯರ ಹೆಸರು : ಶ್ರೀ ಟಿ. ವೆಂಕಟರಮಣಯ್ಯ (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ದೊಡ್ಡಬಳ್ಳಾಪುರ ಮತ ಕ್ಷೇತ್ರದಲ್ಲಿ ಎಷ್ಟು ಶಾಲೆಗಳು ಶಿಥಿಲಗೊಂಡಿವೆ;	ದೊಡ್ಡಬಳ್ಳಾಪುರ ಮತ ಕ್ಷೇತ್ರದಲ್ಲಿ 43 ಶಾಲೆಗಳು ಶಿಥಿಲಾವಸ್ಥೆಯಲ್ಲಿರುತ್ತವೆ.
(ಆ) ಎಷ್ಟು ಶಾಲೆಗಳು ದುರಸ್ಥಿಗೊಳ್ಳಬೇಕಾಗಿದೆ;	51 ಶಾಲೆಗಳು ದುರಸ್ಥಿಗೊಳ್ಳಬೇಕಾಗಿದೆ.
(ಇ) ಎಷ್ಟು ಶಾಲೆಗಳಲ್ಲಿ ಹೆಚ್ಚುವರಿ ಕಟ್ಟಡಗಳ ನಿರ್ಮಾಣ, ಕಂಪ್ಯೂಟರ್, ವಿದ್ಯುತ್ ಸೌಲಭ್ಯ ಹಾಗೂ ಕಾಂಪೌಂಡ್ ನಿರ್ಮಾಣ ಮಾಡಬೇಕಾಗಿದೆ; (ವಿವರ ನೀಡುವುದು)	33 ಶಾಲೆಗಳಿಗೆ ಹೆಚ್ಚುವರಿ ಕಟ್ಟಡಗಳ ನಿರ್ಮಾಣ ಹಾಗೂ ಕಂಪ್ಯೂಟರ್‌ಗಳ ಅಗತ್ಯವಿರುತ್ತದೆ. 20 ಶಾಲೆಗಳಿಗೆ ಕಾಂಪೌಂಡ್ ಅವಶ್ಯಕತೆ ಇರುತ್ತದೆ. ವಿವರಗಳನ್ನು ಅನುಬಂಧ-1 ರಿಂದ 3 ರಲ್ಲಿ ಒದಗಿಸಿದೆ. ತಾಲ್ಲೂಕಿನ ಎಲ್ಲಾ ಶಾಲೆಗಳಿಗೂ ವಿದ್ಯುತ್ ಸೌಲಭ್ಯವಿರುತ್ತದೆ.
(ಈ) ಸದರಿ ಶಾಲೆಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಒದಗಿಸಲಾಗಿರುವ ಅನುದಾನದ ಲಭ್ಯತೆ ಆಧರಿಸಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ತಂತ್ರಜ್ಞಾನ ಆಧಾರಿತ ಕಲಿಕಾ (TALP) ಕಾರ್ಯಕ್ರಮದಡಿ 2016-17 ನೇ ಸಾಲಿಗೆ 09 ಪ್ರೌಢ ಶಾಲೆಗಳು ಆಯ್ಕೆಯಾಗಿದ್ದು, ಈ ಶಾಲೆಗಳಿಗೆ ಇ-ಕಂಟೆಂಟ್ ಸಹಿತ 09 ಲ್ಯಾಪ್ ಟಾಪ್ ಗಳನ್ನು ಹಾಗೂ ಎಲ್.ಸಿ.ಡಿ. ಪ್ರೊಜೆಕ್ಟರ್ ಇಲ್ಲದ 01 ಶಾಲೆಗೆ ಎಲ್.ಸಿ.ಡಿ. ಪ್ರೊಜೆಕ್ಟರ್‌ನ್ನು ಒದಗಿಸಿದ್ದು, ಗಣಕ ಶಿಕ್ಷಣದ ಬಗ್ಗೆ ಶಿಕ್ಷಕರಿಗೆ ತರಬೇತಿಯನ್ನು ಪಡೆದ ಶಿಕ್ಷಕರು ವಿದ್ಯಾರ್ಥಿಗಳಿಗೆ ಅನುಕೂಲಿಸುತ್ತಿದ್ದಾರೆ. ಪ್ರತೀ ಶಾಲೆಯ ಕಂಪ್ಯೂಟರ್ ಕೊಠಡಿ ಸಿದ್ಧಗೊಂಡಿವೆ. ಈ ಲ್ಯಾಬ್‌ಗಳಿಗೆ ಬಿ.ಎಸ್.ಎನ್.ಎಲ್. ಇಂಟರ್‌ನೆಟ್ ಸಂಪರ್ಕ ಕಲ್ಪಿಸಲು KTPP ಕಾಯ್ದೆ 4(ಜಿ) ವಿನಾಯಿತಿಯನ್ನು ಸರ್ಕಾರದಿಂದ ಪಡೆದಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಂಪ್ಯೂಟರ್‌ಗಳನ್ನು ಪೂರೈಸಲು ಟೆಂಡರ್ ಪ್ರಕ್ರಿಯೆಯಲ್ಲಿದೆ. 2017-18ನೇ ಸಾಲಿನ 01 ಶಾಲೆ ಆಯ್ಕೆಗೊಂಡಿದ್ದು, ಸದರಿ ಪ್ರೌಢ ಶಾಲೆಗೆ ಒಂದು ಇ-ಕಂಟೆಂಟ್‌ಸಹಿತ ಲ್ಯಾಪ್ ಟಾಪ್ ಹಾಗೂ ಎಲ್.ಸಿ.ಡಿ. ಪ್ರೊಜೆಕ್ಟರ್ ಸರಬರಾಜು ಮಾಡಿದ್ದು, ತರಬೇತಿ ಪಡೆದ ಶಿಕ್ಷಕರು ವಿದ್ಯಾರ್ಥಿಗಳ ಕಲಿಕೆಗೆ ಬಳಸುತ್ತಿದ್ದಾರೆ.

ಇಡಿ 194 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಹೆಚ್ಚುವರಿ ಕೊಠಡಿ ಬೇಕಾದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಟ್ಟಿ.

ಕ್ರಸಂ	ಶಾಲೆಯ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
1	ಸ.ಹಿ.ಪ್ರಾ.ಶಾಲೆ ಗುಂಡಪ್ಪನಾಯಕನಹಳ್ಳಿ	42
2	ಸ.ಹಿ.ಪ್ರಾ.ಶಾಲೆ, ಮೆಳೆಕೋಟೆ	196
3	ಸ.ಕಿ.ಪ್ರಾ.ಶಾಲೆ, ಬಿಡಿಗೆರೆ	75
4	ಸ.ಹಿ.ಪ್ರಾ.ಶಾಲೆ. ಸಕ್ಕರೆ ಗೊಲ್ಲಹಳ್ಳಿ	106
5	ಸ.ಹಿ.ಪ್ರಾ.ಶಾಲೆ, ತಂಬೇನಹಳ್ಳಿ	40
6	ಸ.ಕಿ.ಪ್ರಾ.ಶಾಲೆ. ಟಿ.ಬಿ.ಕಾಲೋನಿ	32
7	ಸ.ಹಿ.ಪ್ರಾ.ಶಾಲೆ. ಪುರುಷನಹಳ್ಳಿ	49
8	ಸ.ಕಿ.ಪ್ರಾ.ಶಾಲೆ, ಕಸಾಘಟ್ಟ	18
9	ಸ.ಹಿ.ಪ್ರಾ.ಶಾಲೆ, ಐಯ್ಯನಹಳ್ಳಿ	28
10	ಸ.ಹಿ.ಪ್ರಾ.ಶಾಲೆ. ರಾಜಘಟ್ಟ	167
11	ಸ.ಕಿ.ಪ್ರಾ.ಶಾಲೆ, ಹೊಸಹಳ್ಳಿ ಕಾಲೋನಿ	20
12	ಸ.ಕಿ.ಪ್ರಾ.ಶಾಲೆ. ಕುಕ್ಕಲಹಳ್ಳಿ	13
13	ಸ.ಹಿ.ಪ್ರಾ.ಶಾಲೆ, ಹೊಸಹಳ್ಳಿ	155
14	ಸ.ಹಿ.ಪ್ರಾ.ಶಾಲೆ. ಉಜ್ಜನಿ	106
15	ಸ.ಹಿ.ಪ್ರಾ.ಶಾಲೆ, ಕಾರನಾಳ	86
16	ಸ.ಕಿ.ಪ್ರಾ.ಶಾಲೆ ಮುಪ್ಪಡಿಘಟ್ಟ	6
17	ಸ.ಹಿ.ಪ್ರಾ.ಶಾಲೆ, ಕೋಡಿಹಳ್ಳಿ	57
18	ಸ.ಕಿ.ಪ್ರಾ.ಶಾಲೆ, ಭೊಮೇನಹಳ್ಳಿ	24
19	ಸ.ಹಿ.ಪ್ರಾ.ಶಾಲೆ ಸಾಧುಮಠ	18
20	ಸ.ಹಿ.ಪ್ರಾ.ಶಾಲೆ, ದೊಡ್ಡರಾಯಪ್ಪನಹಳ್ಳಿ	44
21	ಸ.ಕಿ.ಪ್ರಾ.ಶಾಲೆ, ಕರೇಕಲ್ಲು ಪಾಳ್ಯ	12
22	ಸ.ಹಿ.ಪ್ರಾ.ಶಾಲೆ, ಜಾಲಿಗೆರೆ	63
23	ಸ.ಕಿ.ಪ್ರಾ.ಶಾಲೆ, ಕಣಿವೆಪುರ	14
24	ಸ.ಹಿ.ಪ್ರಾ.ಶಾಲೆ ಬಾಸ್‌ಬಾಗ್	99
25	ಸ.ಹಿ.ಪ್ರಾ.ಶಾಲೆ ವರದನಹಳ್ಳಿ	145
26	ಸ.ಕಿ.ಪ್ರಾ ಶಾಲೆ ಸೂಲುಕುಂಟೆ	19
27	ಕೊನಘಟ್ಟ	202
28	ಹುಲಿಕುಂಟೆ	177
29	ದೊಡ್ಡಬೆಳವಂಗಲ	305
30	ಕಾಡತಿಪ್ಪೂರು	80
31	ಕನಸವಾಡಿ	131
32	ಸ.ತೆ.ಪೌ.ಶಾಲೆ ಕರೇನಹಳ್ಳಿ	168
33	ಹಣಬೆ	83

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ದೊಡ್ಡಬಳ್ಳಾಪುರ.
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು,

ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕಂಪ್ಯೂಟರ್ ಅಗತ್ಯವಿರುವ ಶಾಲೆಗಳು

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 213 ಕಿರಿಯ ಪ್ರಾಥಮಿಕ ಶಾಲೆಗಳಿದ್ದು, ಇವುಗಳಿಗೆ ಕಂಪ್ಯೂಟರ್ ಸೌಲಭ್ಯವಿರುವುದಿಲ್ಲ. 129 ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಇವುಗಳಲ್ಲಿ 34 ಶಾಲೆಗಳಲ್ಲಿ (CALC) ಕಂಪ್ಯೂಟರ್ ಸೌಲಭ್ಯವಿರುತ್ತದೆ. ಆದರೆ 10ಶಾಲೆಗಳಲ್ಲಿ ಮಾತ್ರ ಕಂಪ್ಯೂಟರ್‌ಗಳು ಕಾರ್ಯ ನಿರ್ವಹಿಸುತ್ತಿದೆ. ಉಳಿದ 24 ಶಾಲೆಗಳಲ್ಲಿ ಯು.ಪಿ.ಎಸ್ ಹಾಗೂ ಬ್ಯಾಟರಿಗಳು ದುರಸ್ತಿಯಾಗಬೇಕಿವೆ. ಶಿಕ್ಷಕರು ಹಾಗೂ ಮಕ್ಕಳ ಸಂಖ್ಯೆ ಗಣನೀಯವಾಗಿರುವ ಕೆಳಕಂಡ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಸೌಲಭ್ಯವನ್ನು ಕೋರಲಾಗಿದೆ.

SI.NO	NAME OF THE SCHOOLS	
1	G HPS KANASAVADI COLONY	58
2	G HPS ALAHALLI	85
3	G HPS AREHALLIGUDDADAHALLI	86
4	G HPS BEEDIKERE	70
5	G HPS CHANNAVEERANAHALLI	67
6	G HPS CHIKKA HEJJAJI	87
7	G HPS DARGAJOGIHALLI	140
8	G HPS DODDA HEJJAJI	86
9	G HPS ELE PETE	50
10	G HPS ELLUPURA	119
11	G HPS GUNJURU	75
12	G HPS HOSAHALLI THANDA	114
13	G HPS JAALIGERE	62
14	G HPS KANAKENAHALLI	50
15	G HPS KANCHIGANALA	119
16	G HPS KANTANAKUNTE	172
17	G HPS KARNALA	79
18	G HPS KHAS BHAG	104
19	G HPS KODIGEHALLI	87
20	G HPS LAGHUMENAHALLI	70
21	G HPS MARALENAHALLI	63
22	G HPS MELINA NAYAKARANDAHALLI	56
23	G HPS PUTTALINGAYYANAPALYA	14
24	G HPS ROJIPURA	150
25	G HPS S.S. GHATI	90
26	G HPS SASALU	57
27	G HPS SHIVAPURA	86
28	G HPS TELUGU DBPURA	82
29	G HPS THURUVANAHALLI	75
30	G HPS VADDARAHALLI	58
31	G HPS VARADANAHALLI	127
32	G HPS VEERAPURA	86
33	G MPS DODDA BELAVANGALA	192

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ದೊಡ್ಡಬಳ್ಳಾಪುರ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಮನ್ವಯಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕಾಂಪೌಂಡ್ ಅಗತ್ಯವಿರುವ ಶಾಲೆಗಳು

ಕ್ರಸಂ	ಶಾಲೆಗಳ ಹೆಸರು	ವಿದ್ಯಾರ್ಥಿಗಳ ಸಂಖ್ಯೆ	ಕಾಂಪೌಂಡ್ ಬೇಡಿಕೆ
1	ಸ.ಹಿ.ಪ್ರಾ.ಶಾಲೆ, ನಾಗೇನಹಳ್ಳಿ	57	400
2	ಸ.ಹಿ.ಪ್ರಾ.ಶಾಲೆ, ಎಸ್.ಎಸ್.ಘಾಟಿ	99	100 ಮೀ
3	ಸ.ಪ್ರೌ.ಶಾಲೆ ಹೊಸಹಳ್ಳಿ	335	100 ಮೀ
4	ಸ.ಹಿ.ಪ್ರಾ.ಶಾಲೆ, ಚಿಕ್ಕಹೆಜ್ಜಾಜಿ	87	1000 ಮೀ
5	ಸ.ಮಾ.ಪ್ರಾ.ಶಾಲೆ, ದೊಡ್ಡಬೆಳವಂಗಲ	192	1000 ಮೀ
6	ಸ.ಹಿ.ಪ್ರಾ.ಶಾಲೆ ಚಿಕ್ಕಹೆಜ್ಜಾಜಿ ಕಾಲೋನಿ	38	1000 ಮೀ
7	ಸ.ತೆ.ಕಿ.ಪ್ರಾ ಶಾಲೆ ಕರೇನಹಳ್ಳಿ	40	15 ಮೀ
8	ಸ.ಹಿ.ಪ್ರಾ.ಶಾಲೆ, ಹೊಸಹಳ್ಳಿತಾಂಡ	113	150 ಮೀ
9	ಸ.ಕಿ.ಪ್ರಾ.ಶಾಲೆ, ನೆಲ್ಲುಕುಂಟೆ	15	150 ಮೀ
10	ಸ.ಹಿ.ಪ್ರಾ.ಶಾಲೆ, ಲಘುಮೇನಹಳ್ಳಿ	76	150 ಮೀ
11	ಸ.ಹಿ.ಪ್ರಾ.ಶಾಲೆ, ರಾಜಘಟ್ಟ	167	165 ಮೀ
12	ಸ.ಮಾ.ಪ್ರಾ.ಶಾಲೆ, ಹುಲೀಕುಂಟೆ	117	200 ಮೀ
13	ಸ.ಹಿ.ಪ್ರಾ.ಶಾಲೆ, ಎಂ.ಎಸ್ ಹಳ್ಳಿ	43	300 ಮೀ
14	ಸ.ಕಿ.ಪ್ರಾ ಶಾಲೆ ವೀರಭದ್ರನಪಾಳ್ಯ	10	350 ಮೀ
15	ಸ.ಕಿ.ಪ್ರಾ.ಶಾಲೆ, ತೂಬಕುಂಟೆ	22	50 ಮೀ
16	ಸ.ಕಿ.ಪ್ರಾ.ಶಾಲೆ, ಮಧುರೆ	16	50 ಮೀ
17	ಸ.ಕಿ.ಪ್ರಾ.ಶಾಲೆ, ಬೀರಯ್ಯನಪಾಳ್ಯ	19	50 ಮೀ
18	ಸ.ಹಿ.ಪ್ರಾ.ಶಾಲೆ, ಮಲ್ಲೋಹಳ್ಳಿಪಾಳ್ಯ	14	500 ಮೀ
19	ಸ.ಹಿ.ಪ್ರಾ.ಶಾಲೆ ನಾರನಹಳ್ಳಿ	19	500 ಮೀ
20	ಸ.ಕಿ.ಪ್ರಾ ಶಾಲೆ ಬೆನಕಿನಮಡಗು	17	70 ಮೀ

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ದೊಡ್ಡಬಳ್ಳಾಪುರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	244
2. ಪ್ರಶ್ನೆ ಮಂಡಿಸಿರುವವರು	:	ಶ್ರೀ ನಾರಾಯಣಸ್ವಾಮಿ. ಎಸ್.ಎನ್
3. ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು
4. ಉತ್ತರಿಸ ಬೇಕಾದ ದಿನಾಂಕ	:	10/07/2018

<table>
<tr><th>ಪ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>1</td><td>2016–17 ಮತ್ತು 2017–18ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ವಿವಿಧ ಕಾರಣಗಳಿಂದ ವಾಪಸ್ಸಾದ (ರೋಗಿಯ ಮರಣ, ಹೆಸರು / ಬ್ಯಾಂಕ್ ಖಾತೆ ತಪ್ಪಾಗಿ) ಚೆಕ್ಕುಗಳು ಎಷ್ಟು ? ಇದರ ಮೊತ್ತ ಎಷ್ಟು ?</td><td>
<table>
<tr><th>ಆರ್ಥಿಕ ವರ್ಷ</th><th>ಚೆಕ್‌ಗಳ ಸಂಖ್ಯೆ</th><th>ಒಟ್ಟು ಮೊತ್ತ</th></tr>
<tr><td>2016–17</td><td>1412</td><td>ರೂ.4,61,09,715/–</td></tr>
<tr><td>2017–18</td><td>754</td><td>ರೂ.3,22,48,545/–</td></tr>
</table>
ಮೇಲ್ಕಂಡ ವಿವರದಂತೆ ವಿವಿಧ ಕಾರಣಗಳಿಗೆ ಹಿಂದಿರುಗಿರುವ ಚೆಕ್‌ಗಳನ್ನು ರದ್ದುಪಡಿಸಲಾಗಿದೆ.</td></tr>
<tr><td>2</td><td>ಕೋಲಾರ ಜಿಲ್ಲೆಯ ಐದು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ವಾಪಸ್ಸಾಗಿರುವ ಚೆಕ್‌ಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)</td><td>
<table>
<tr><th>ತಾಲ್ಲೂಕು ಹೆಸರು</th><th>ಒಟ್ಟು</th><th>ವಿಲೆ</th><th>ವಿತರಣೆ</th><th>ಪರಿಶೀಲನೆ ಹಂತ</th></tr>
<tr><td>ಕೋಲಾರ</td><td>07</td><td>03</td><td>02</td><td>02</td></tr>
<tr><td>ಮುಳಬಾಗಿಲು</td><td>10</td><td>04</td><td>01</td><td>05</td></tr>
<tr><td>ಬಂಗಾರಪೇಟೆ</td><td>07</td><td>02</td><td>04</td><td>01</td></tr>
<tr><td>ಮಾಲೂರು</td><td>03</td><td>01</td><td>02</td><td>–</td></tr>
<tr><td>ಶ್ರೀನಿವಾಸ ಪುರ</td><td>12</td><td>04</td><td>06</td><td>02</td></tr>
</table>
ಕೋಲಾರ ಜಿಲ್ಲೆಯ ಐದು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 2016/17 ಮತ್ತು 2017/18ನೇ ಸಾಲಿನಲ್ಲಿ ಹಿಂದಿರುಗಿರುವ ಒಟ್ಟು ಧನಾದೇಶಗಳ ವಿವರಗಳನ್ನು ಈ ಮೇಲ್ಕಂಡಂತೆ ಒದಗಿಸಿದೆ.</td></tr>
<tr><td>3</td><td>ಇವು ಯಾವ ಕಾರಣಕ್ಕಾಗಿ ವಾಪಸ್ ಆಗಿವೆ ? ಈ ಪೈಕಿ ಎಷ್ಟು ಜನ ಫಲಾನುಭವಿಗಳಿಗೆ ಬದಲಿ ಚೆಕ್ ನೀಡಲಾಗಿದೆ ?</td><td>ಫಲಾನುಭವಿಯು ಮೃತ ಪಟ್ಟಿರುವ ಕಾರಣ, ಫಲಾನುಭವಿಯ ಹೆಸರಿನಲ್ಲಿ ತಿದ್ದುಪಡಿ ಇರುವ ಕಾರಣ, ಧನಾದೇಶದ ಅವಧಿ ಮುಕ್ತಾಯಗೊಂಡಿರುವ ಕಾರಣ, ಸಮರ್ಪಕ ದಾಖಲೆಗಳು ಇಲ್ಲದ ಕಾರಣಗಳಿಂದ ಧನಾದೇಶವನ್ನು ತಹಶೀಲ್ದಾರರು ವರದಿಯೊಂದಿಗೆ ಹಿಂದಿರುಗಿಸಿರುತ್ತಾರೆ. ಹಿಂದಿರುಗಿರುವ ಒಟ್ಟು 39 ಧನಾದೇಶಗಳ ಪೈಕಿ 15 ಫಲಾನುಭವಿಗಳಿಗೆ ಮರು ಧನಾದೇಶ ವಿತರಿಸಲಾಗಿದೆ.</td></tr>
<tr><td>4</td><td>ಬದಲಿ ಚೆಕ್‌ಅನ್ನು ನೀಡಲು ವಿಳಂಭ ಆಗಿರುವುದಕ್ಕೆ ಕಾರಣಗಳೇನು ?</td><td>ಬದಲಿ ಧನಾದೇಶವನ್ನು ನೀಡಲು ವಿಳಂಭವಾಗಿರುವುದಿಲ್ಲ.</td></tr>
<tr><td>5</td><td>ಯಾವ ಕಾಲ ಮಿತಿಯಲ್ಲಿ ಬದಲಿ ಚೆಕ್‌ಗಳನ್ನು ನೀಡಲಾಗುವುದು ?</td><td>ಬದಲಿ ಧನಾದೇಶವನ್ನು ವಿತರಿಸಲು ಕಾಲ ಮಿತಿಯನ್ನು ಅಳವಡಿಸಿಕೊಳ್ಳಲಾಗಿರುವುದಿಲ್ಲ.</td></tr>
<tr><td>6</td><td>ಇದಕ್ಕೆ ಕಾರಣರಾದ ಅಧಿಕಾರಿಗಳು ಯಾರು ? ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ?</td><td>ಉದ್ಭವಿಸುವುದಿಲ್ಲ</td></tr>
</table>

ಸಿಎಂ/15/ಸಿಎಂಆರ್‌ಎಫ್/ಎಲ್.ಎ/2018

ಹೆಚ್.ಡಿ ಕುಮಾರಸ್ವಾಮಿ
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 652
2. ಸದಸ್ಯರ ಹೆಸರು : ಶ್ರೀ.ಪ್ರತಾಪಗೌಡ ಪಾಟೀಲ್(ಮಸ್ಕಿ)
3. ಉತ್ತರಿಸಬೇಕಾದ ದಿನಾಂಕ : 10-07-2018
4. ಉತ್ತರಿಸುವರು : ಮಾನ್ಯ ಮುಖ್ಯ ಮಂತ್ರಿಗಳು.

ಅ) ಹೊಸದಾಗಿ ಘೋಷಣೆಯಾದ ತಾಲ್ಲೂಕು ಕೇಂದ್ರಗಳಲ್ಲಿ ಉಪ ಖಜಾನೆಯನ್ನು(sub treasury) ಯಾವಾಗ ತೆರೆಯಲಾಗುವುದು;	ಕಂದಾಯ ಇಲಾಖೆಯು 50 ಹೊಸ ತಾಲ್ಲೂಕುಗಳನ್ನು ರಚಿಸಿದ್ದು, ಆ ಪೈಕಿ 23 ತಾಲ್ಲೂಕುಗಳಲ್ಲಿ ಈಗಾಗಲೇ ಉಪ ಖಜಾನೆಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 27 ತಾಲ್ಲೂಕುಗಳಲ್ಲಿ ಹೊಸದಾಗಿ ಉಪ ಖಜಾನೆಗಳನ್ನು ಸ್ಥಾಪಿಸುವ ಪ್ರಕ್ರಿಯೇ ಚಾಲ್ತಿಯಲ್ಲಿದೆ. ಇದಕ್ಕೆ ಅಗತ್ಯವಾಗಿರುವ 137 ಹುದ್ದೆಗಳನ್ನು ಸರ್ಕಾರಿ ಆದೇಶ ಸಂ: ಆಇ 85 ಅಖಇ 2018 ದಿ:06-07-2018 ರಲ್ಲಿ ಸೃಜಿಸಲಾಗಿದೆ.
ಆ) ವಿವಿಧ ಇಲಾಖೆಗಳಿಗೆ ಈವರೆಗೆ ಉಪ ಖಜಾನೆ ಪ್ರಾರಂಭ ಮಾಡದಿರುವುದಕ್ಕೆ ಕಾರಣವೇನು;	27 ತಾಲ್ಲೂಕುಗಳಲ್ಲಿ ಹೊಸದಾಗಿ ಉಪ ಖಜಾನೆಗಳನ್ನು ಸ್ಥಾಪಿಸಲು ಅಗತ್ಯವಾಗಿರುವ 137 ಹುದ್ದೆಗಳನ್ನು ಸೃಜಿಸಲು ಕ್ರಮ ವಹಿಸಲಾಗುತ್ತಿತ್ತು.
ಇ) ಉಪ ಖಜಾನೆ ಪ್ರಾರಂಭ ಮಾಡದಿರುವುದರಿಂದ ಹೊಸ ತಾಲ್ಲೂಕುಗಳಲ್ಲಿ ಯಾವುದೇ ಇಲಾಖೆಗಳು ಕೆಲಸ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಈ) ಹಾಗಿದ್ದಲ್ಲಿ, ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?	ಉದ್ಭವಿಸುವುದಿಲ್ಲ

ಆಇ 149 ಅಖಇ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

<u>ಕರ್ನಾಟಕ ವಿಧಾನಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 27
2. ಸದಸ್ಯರ ಹೆಸರು : ಶ್ರೀ.ಪ್ರತಾಪಗೌಡ ಪಾಟೀಲ್(ಮಸ್ಕಿ)
3. ಉತ್ತರಿಸಬೇಕಾದ ದಿನಾಂಕ : 10-07-2018
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು.

ಅ) ಹೊಸದಾಗಿ ಘೋಷಣೆಯಾದ ತಾಲ್ಲೂಕು ಕೇಂದ್ರಗಳಲ್ಲಿ ಉಪ ಖಜಾನೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;	ಕಂದಾಯ ಇಲಾಖೆಯು 50 ಹೊಸ ತಾಲ್ಲೂಕುಗಳನ್ನು ರಚಿಸಿದ್ದು, ಆ ಪೈಕಿ 23 ತಾಲ್ಲೂಕುಗಳಲ್ಲಿ ಈಗಾಗಲೇ ಉಪ ಖಜಾನೆಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 27 ತಾಲ್ಲೂಕುಗಳಲ್ಲಿ ಹೊಸದಾಗಿ ಉಪ ಖಜಾನೆಗಳನ್ನು ಸ್ಥಾಪಿಸುವ ಪ್ರಕ್ರಿಯೇ ಚಾಲ್ತಿಯಲ್ಲಿದೆ. ಇದಕ್ಕೆ ಅಗತ್ಯವಾಗಿರುವ 137 ಹುದ್ದೆಗಳನ್ನು ಸರ್ಕಾರಿ ಆದೇಶ ಸಂ: ಆಇ 85 ಅಖಇ 2018 ದಿ:06-07-2018 ರಲ್ಲಿ ಸೃಜಿಸಲಾಗಿದೆ.
ಆ) ಇದುವರೆಗೆ ಉಪ ಖಜಾನೆಯನ್ನು ಪ್ರಾರಂಭ ಮಾಡದಿರುವುದಕ್ಕೆ ಕಾರಣವೇನು;	27 ತಾಲ್ಲೂಕುಗಳಲ್ಲಿ ಹೊಸದಾಗಿ ಉಪ ಖಜಾನೆಗಳನ್ನು ಸ್ಥಾಪಿಸಲು ಅಗತ್ಯವಾಗಿರುವ 137 ಹುದ್ದೆಗಳನ್ನು ಸೃಜಿಸಲು ಕ್ರಮ ವಹಿಸಲಾಗುತ್ತಿತ್ತು.
ಇ) ಉಪ ಖಜಾನೆ ಪ್ರಾರಂಭ ಮಾಡದಿರುವುದರಿಂದ ಹೊಸ ತಾಲ್ಲೂಕುಗಳಲ್ಲಿ ಯಾವುದೇ ಇಲಾಖೆಗಳು ಕೆಲಸ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	**ಉದ್ಭವಿಸುವುದಿಲ್ಲ**

ಆಇ 150 ಅಖಇ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 557
ಸದಸ್ಯರ ಹೆಸರು : ಡಾ॥ ಎಚ್.ಡಿ ರಂಗನಾಥ್ (ಕುಣಿಗಲ್)
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಕುಣಿಗಲ್ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿರುವ ಶೌಚಾಲಯಗಳು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಹಾಗಿದ್ದಲ್ಲಿ, ಅವುಗಳ ದುರಸ್ತಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?	2017-18ನೇ ಸಾಲಿನಲ್ಲಿ ಕುಣಿಗಲ್ ಕ್ಷೇತ್ರದ ಪ್ರತಿ ಶಾಲೆಗೆ ಶೌಚಾಲಯ ನಿರ್ಮಾಣಕ್ಕೆ ರೂ.1.00 ಲಕ್ಷಗಳ ಅನುದಾನವನ್ನು ನರೇಗಾ ಯೋಜನೆಯಡಿ ಬಿಡುಗಡೆಗೊಳಿಸಲಾಗಿದೆ.
(ಇ) ಶೌಚಾಲಯ ಇಲ್ಲದಿರುವ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	2017-18ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ, 1357 ಬಾಲಕರ ಶೌಚಾಲಯಗಳು ಮತ್ತು 650 ಬಾಲಕಿಯರ ಶೌಚಾಲಯಗಳು ಸೇರಿದಂತೆ ಒಟ್ಟು 2007 ಹೆಚ್ಚುವರಿ ಶೌಚಾಲಯಗಳ ನಿರ್ಮಾಣಕ್ಕಾಗಿ ರೂ.2007.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ.
(ಈ) ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?	

ಇಡಿ 197 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು:	ಶ್ರೀ ಅಮೀನಪ್ಪಗೌಡ ಎಸ್ ಪಾಟೀಲ್ (ನಡಹಳ್ಳಿ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:	582
ಉತ್ತರಿಸುವ ದಿನಾಂಕ:	10.07.2018
ಉತ್ತರಿಸಬೇಕಾದ ಸಚಿವರು:	ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಡಿ.ಪಿ.ಎ.ಆರ್ ನಿಂದ ನೇಮಗೊಂಡಿರುವ ಹೆಚ್ಚುವರಿ ಆಪ್ತ ಸಹಾಯಕರುಗಳ ವೇತನ ಹೆಚ್ಚು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಉದ್ಭವಿಸುವುದಿಲ್ಲ
ಇ)	ಹಾಗಿಲ್ಲದಿದ್ದಲ್ಲಿ, ಕಾರಣವೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಸಿಆಸುಇ 128 ವಿಸಸೇ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 272
ಸದಸ್ಯರ ಹೆಸರು : ಶ್ರೀ ಕೆ.ರಘುಪತಿಭಟ್(ಉಡುಪಿ)
ಉತ್ತರಿಸಬೇಕಾದ ದಿನಾಂಕ : 10.07.2018
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಗ್ರಾಮೀಣ ಭಾಗಗಳ ಬಡವಿದ್ಯಾರ್ಥಿಗಳೆ ಹೆಚ್ಚಾಗಿ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವುದನ್ನೆ ಸರ್ಕಾರ ಗಮನಿಸಿದೆಯೇ;	ಗಮನಿಸಿದೆ.
(ಆ) ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸಮವಸ್ತ್ರ, ಶೂ ಇತ್ಯಾದಿಗಳನ್ನು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೂ ನೀಡುವಲ್ಲಿ ಇರುವ ತೊಡಕುಗಳೇನು;	ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಇತ್ಯಾದಿಗಳನ್ನು ವಿತರಿಸಿದ್ದಲ್ಲಿ, ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದರಿಂದ, ಪ್ರಸ್ತುತ ಸದರಿ ಯೋಜನೆಗಳನ್ನು ಸರ್ಕಾರಿ ಶಾಲಾ ಮಕ್ಕಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.
(ಇ) ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳ ನಡುವೆ ತಾರತಮ್ಯ ನೀತಿಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯುಂಟಾಗುತ್ತಿರುವುದನ್ನು ಇಲಾಖೆ ಗಂಭೀರವಾಗಿ ಪರಿಗಣಿಸದೇ ಇರಲು ಕಾರಣಗಳೇನು;	ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಈಗಾಗಲೇ, ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಗಳಾದ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಹಾಗೂ ಉಚಿತ ಪಠ್ಯ ಪುಸ್ತಕ ಮತ್ತು ಬೈಸಿಕಲ್‌ಗಳನ್ನು ವಿತರಿಸಲಾಗುತ್ತಿದೆ.
(ಈ) ಗ್ರಾಮೀಣ ಭಾಗಗಳ ಬಡವರ್ಗಗಳ ಕುಟುಂಬಗಳ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವ ನಿಟ್ಟಿನಲ್ಲಿ ಸರ್ಕಾರದ ಕಾರ್ಯಕ್ರಮಗಳೇನು; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಗ್ರಾಮೀಣ ಭಾಗಗಳ ಬಡವರ್ಗಗಳ ಕುಟುಂಬಗಳ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವ ನಿಟ್ಟಿನಲ್ಲಿ ಸರ್ಕಾರದ ಕಾರ್ಯಕ್ರಮಗಳು ಈ ಕೆಳಕಂಡಂತಿವೆ; 1. ಉಚಿತ ಪಠ್ಯಪುಸ್ತಕ 2. ಉಚಿತ ಸಮವಸ್ತ್ರ ಮತ್ತು ಶೂ ಸಾಕ್ಸ್ (ಸರ್ಕಾರಿ ಶಾಲೆಗಳಿಗೆ ಮಾತ್ರ) 3. ಮಧ್ಯಾಹ್ನದ ಬಿಸಿಯೂಟ 4. ಕ್ಷೀರಭಾಗ್ಯ ಯೋಜನೆ 5. ಕಬ್ಬಿಣಾಂಶವಿರುವ ಮಾತ್ರೆಗಳು 6. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಎನ್.ಟಿ.ಎಸ್.ಸಿ. ಮತ್ತು ಎನ್.ಎಂ.ಎಂ.ಎಸ್. ವಿದ್ಯಾರ್ಥಿ ವೇತನ 7. ಶಾಲೆ ಬಿಟ್ಟ ಹಾಗೂ ದುರ್ಬಲ ವರ್ಗದ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕೆ.ಜಿ.ಬಿ.ವಿ. ಶಾಲೆಗಳು 8. ಉಚಿತ ಬೈಸಿಕಲ್ ವಿತರಣೆ 9. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇನ್ಸ್‌ಪೈರ್ ಅವಾರ್ಡ್ ಪ್ರೋತ್ಸಾಹಧನ

ಇಡಿ 93 ಯೋಯೋಕ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 656

ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)

ಉತ್ತರಿಸಬೇಕಾದ ದಿನಾಂಕ : 10.07.2018

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ)ಕೊಪ್ಪಳ ಜಿಲ್ಲೆಯ, ಯಲಬುರ್ಗಾ ತಾಲ್ಲೂಕಿನಲ್ಲಿರುವ ಆದರ್ಶ ವಿದ್ಯಾಲಯದ ಮಕ್ಕಳಿಗೆ ಪೀಠೋಪಕರಣಗಳಿಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಹಾಗಿದ್ದಲ್ಲಿ, ಪೀಠೋಪಕರಣ ಪೂರೈಕೆಗೆ ಅನುದಾನ ಒದಗಿಸಲಾಗಿದೆಯೇ; ಎಷ್ಟು ಅನುದಾನ ಮತ್ತು ಯಾವಾಗ ಅನುದಾನ ಒದಗಿಸಲಾಗಿದೆ;	ಪೀಠೋಪಕರಣ ಪೂರೈಕೆಗೆ ರೂ.3,01,32,700/- ಅನುದಾನವನ್ನು ದಿನಾಂಕ:04-04-2017ರಂದು ಕೊಪ್ಪಳ ಜಿಲ್ಲೆಗೆ ಒದಗಿಸಲಾಗಿದೆ.
(ಇ) ಪೀಠೋಪಕರಣ ಪೂರೈಕೆಯಾಗದೇ ಇರುವುದಕ್ಕೆ ಕಾರಣಗಳೇನು;	ಜಿಲ್ಲಾ ಹಂತದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಟೆಂಡರ್ ಸಮಿತಿಯಿಂದ ಪೀಠೋಪಕರಣ ಮಾದರಿಗಳ ಪರಿಶೀಲನೆಯ ದಿನಾಂಕವನ್ನು 10-07-2018ಕ್ಕೆ ನಿಗದಿಗೊಳಿಸಲಾಗಿದೆ.
(ಈ) ಪೂರೈಕೆ ಮಾಡಲು ವಿಳಂಬ ಮಾಡಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?	ವಿಳಂಬಕ್ಕೆ ಕಾರಣ ಕೇಳಿ ಉಪ ನಿರ್ದೇಶಕರು (ಆಡಳಿತ) ರವರಿಗೆ ನೋಟೀಸನ್ನು ದಿನಾಂಕ:06.07.2018 ರಂದು ಜಾರಿ ಮಾಡಲಾಗಿರುತ್ತದೆ.

ಇಡಿ 22 ಎಂಪಿಡಿ 2018

(ಎನ್.ಮಹೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	120
ಸದಸ್ಯರ ಹೆಸರು	ಶ್ರೀ ಗೂಳಿಹಟ್ಟಿ ಜಿ.ಶೇಖರ್ (ಹೊಸದುರ್ಗ)
ಉತ್ತರಿಸುವವರು	ಮುಖ್ಯಮಂತ್ರಿ
ಉತ್ತರದ ದಿನಾಂಕ	10-07-2018

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಸದುರ್ಗ ತಾಲ್ಲೂಕಿನ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಯಥೇಚ್ಚವಾಗಿ ಅಧಿಕೃತ ಪರವಾನಿಗೆ ಪಡೆದ ಮದ್ಯ ಮಾರಾಟ ಅಂಗಡಿಗಳಿಂದಲೇ ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ;	ಹೊಸದುರ್ಗ ವಲಯ ವ್ಯಾಪ್ತಿಯ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟುವ ಸಂಬಂಧ ನಿರಂತರವಾಗಿ ಜಾರಿ ಮತ್ತು ತನಿಖೆ ಕಾರ್ಯಗಳನ್ನು ಚುರುಕುಗೊಳಿಸಲು ಕ್ರಮ ವಹಿಸಲಾಗಿದೆ. 2017-18 ಸಾಲಿನಲ್ಲಿ ಅಬಕಾರಿ ಕಾಯ್ದೆ ಕಲಂ 15(ಎ) ರಡಿಯಲ್ಲಿ 126 ಪ್ರಕರಣಗಳನ್ನು ಹಾಗೂ ಕಲಂ 32 ರಡಿ 07 ಘೋರ ಪ್ರಕರಣಗಳನ್ನು ದಾಖಲಿಸಲಾಗಿದೆ.
ಇ)	ಕಳೆದ ಮೂರು ವರ್ಷಗಳಿಂದ ಹೊಸದುರ್ಗ ತಾಲ್ಲೂಕಿಗೆ ಎಷ್ಟು ಮದ್ಯ ಮಾರಾಟ ಅಂಗಡಿಗಳನ್ನು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ; (ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ಹೊಸದುರ್ಗ ತಾಲ್ಲೂಕಿಗೆ 06 ಸನ್ನದುಗಳು ಸ್ಥಳಾಂತರಗೊಂಡಿರುತ್ತವೆ. ವಿವರ ಈ ಕೆಳಕಂಡಂತೆ ಇದೆ; 1. ಆರ್.ವಿ. ಬಾರ್ & ರೆಸ್ಟೋರೆಂಟ್, ಸಿಎಲ್-9 ಸನ್ನದು. ಚಿಕ್ಕಬ್ಯಾಲದಕೆರೆ ಕ್ರಾಸ್, ಹೊಸದುರ್ಗ ತಾಲ್ಲೂಕು, ಈ ಸನ್ನದು 2015-16ನೇ ಸಾಲಿಗೆ ಚಿತ್ರದುರ್ಗ ಟೌನ್‌ನಿಂದ ಸ್ಥಳಾಂತರಗೊಂಡಿರುತ್ತದೆ. 2. ಮಂಜುನಾಥ ಬಾರ್ & ರೆಸ್ಟೋರೆಂಟ್, ಸಿಎಲ್-9 ಮತ್ತೋಡು ಗ್ರಾಮ, ಹೊಸದುರ್ಗ ತಾಲ್ಲೂಕು. ಈ ಸನ್ನದು 2016-17ನೇ ಸಾಲಿಗೆ ಚಿತ್ರದುರ್ಗ ಟೌನ್‌ನಿಂದ ಸ್ಥಳಾಂತರಗೊಂಡಿರುತ್ತದೆ 3. ಪಿ ಷಣ್ಮುಖ ಐಶ್ವರ್ಯ ಬಾರ್ & ರೆಸ್ಟೋರೆಂಟ್, ಸಿಎಲ್-9 ಸನ್ನದು, ಬೀಸನಹಳ್ಳಿ, ಹೊಸದುರ್ಗ ತಾಲ್ಲೂಕು, ಈ ಸನ್ನದು 2016-17ನೇ ಸಾಲಿಗೆ ಚಿತ್ರದುರ್ಗ ಟೌನ್‌ನಿಂದ ಸ್ಥಳಾಂತರಗೊಂಡಿರುತ್ತದೆ. 4. ಟಿ.ಈರಣ್ಣ, ರಾಘವೇಂದ್ರ ಬಾರ್ & ರೆಸ್ಟೋರೆಂಟ್, ಸಿಎಲ್-9 ಶ್ರೀರಾಂಪುರ, ಹೊಸದುರ್ಗ ತಾಲ್ಲೂಕು, ಈ ಸನ್ನದು 2017-18ನೇ ಸಾಲಿಗೆ ಚಳ್ಳಕೆರೆ ತಾಲ್ಲೂಕು ಘಟಪರ್ತಿ ಗ್ರಾಮದಿಂದ ಸ್ಥಳಾಂತರಗೊಂಡಿರುತ್ತದೆ.

		5. ಲಕ್ಷ್ಮೀ ಎಂಟರ್ ಪ್ರೈಸಸ್, ಗವಿರಂಗ ಬಾರ್ & ರೆಸ್ಟೋರೆಂಟ್. ಸಿಎಲ್-9, ಗವಿರಂಗಪುರ, ಹೊಸದುರ್ಗ ತಾಲ್ಲೂಕು, ಈ ಸನ್ನದು 2017-18ನೇ ಸಾಲಿಗೆ ಚಳ್ಳಕೆರೆ ತಾಲ್ಲೂಕು, ನೆಲ್ಲಗೊಂಡೆ ಗ್ರಾಮದಿಂದ ಸ್ಥಳಾಂತರಗೊಂಡಿರುತ್ತದೆ 6. ಶರತ್ ವೈನ್ಸ್, ಸಿಎಲ್-2 ಸನ್ನದು, ಬೆಲಗೂರು ಗ್ರಾಮ. ಹೊಸದುರ್ಗ ತಾಲ್ಲೂಕು, ಈ ಸನ್ನದು 2017-18ನೇ ಸಾಲಿಗೆ ಹಿರಿಯೂರು ಟೌನ್‌ನಿಂದ ಸ್ಥಳಾಂತರಗೊಂಡಿರುತ್ತದೆ.
ಈ)	ಸಾರ್ವಜನಿಕರ ವಿರೋಧವಿದ್ದರೂ ಎಷ್ಟು ಸ್ಥಳಗಳಲ್ಲಿ ಬೇರೆ ಕಡೆಯಿಂದ ವರ್ಗಾವಣೆ ಮಾಡಿಸಿ ಅಂಗಡಿ ತೆರೆಯಲಾಗಿದೆ?	ಹೊಸದುರ್ಗ ತಾಲ್ಲೂಕು ಶ್ರೀರಾಂಪುರ ಗ್ರಾಮದಲ್ಲಿ 2016-17ನೇ ಸಾಲಿನಲ್ಲಿ ಕಟ್ಟಡ ಸಂಖ್ಯೆ:-08ರಲ್ಲಿ ಗವಿರಂಗ ಬಾರ್ & ರೆಸ್ಟೋರೆಂಟ್ ಸಿಎಲ್-9 ಸನ್ನದು ವಹಿವಾಟು ನಡೆಸುತ್ತಿದ್ದು, ಸದರಿ ಸನ್ನದು ಮಾನ್ಯ ಸುಪ್ರೀಂಕೋರ್ಟ್‌ನ ಆದೇಶದಂತೆ ಸ್ಥಗಿತಗೊಂಡಿರುತ್ತದೆ. ಈ ಸನ್ನದನ್ನು ಇದೇ ಗ್ರಾಮದಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) 1967ರ ನಿಯಮ-5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವ ಗುರುಪರಪ್ಪಸ್ವಾಮಿ ಲೇಔಟ್‌ನಲ್ಲಿರುವ ಖಾತೆ ನಂ: 2003/ಸೈಟ್ ನಂ:35 ರಲ್ಲಿನ ಕಟ್ಟಡಕ್ಕೆ ಸ್ಥಳಾಂತರಗೊಳಿಸುವ ಸಂಬಂಧ ಸದರಿ ಗ್ರಾಮದ ಶ್ರೀ ಪರಪ್ಪ ಮತ್ತು ಇತರರು ಸ್ಥಳಾಂತರಕ್ಕೆ ಉದ್ದೇಶಿಸಿರುವ ಮೇಲ್ಕಂಡ ಸ್ಥಳವು ಜನ ವಸತಿ ಪ್ರದೇಶವಾಗಿರುವುದರಿಂದ ಸದರಿ ಸ್ಥಳದಲ್ಲಿ ಮದ್ಯದಂಗಡಿ ಪ್ರಾರಂಭಿಸಿರುವ ಬಗ್ಗೆ ಮಾನ್ಯ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಜೆ.ಎಂ.ಎಫ್.ಸಿ. ನ್ಯಾಯಾಲಯ ಹೊಸದುರ್ಗ ಇಲ್ಲಿ OS No 528/2017 ರಡಿ ದಾವೆಯನ್ನು ಹೂಡಿದ್ದು ಮಾನ್ಯ ನ್ಯಾಯಾಲಯವು ಸದರಿ ದಾವೆಯ ವಿಚಾರಣೆ ನಡೆಸಿ ದಿನಾಂಕ:11.04.2018 ರಂದು ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಅರ್ಜಿದಾರರು ಸದರಿ ತೀರ್ಪಿನ ವಿರುದ್ಧ ಮಾನ್ಯ ಸೀನಿಯರ್ ಸಿವಿಲ್ ಜಡ್ಜ್, ಜೆ.ಎಂ.ಎಫ್.ಸಿ. ನ್ಯಾಯಾಲಯ ಹೊಸದುರ್ಗದಲ್ಲಿ ಅಪೀಲ್ ಸಂಖ್ಯೆ:-19/2018 ರಡಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣದ ವಿಚಾರಣೆಯನ್ನು ನಡೆಸಿ ದಿ:27.06.2018 ರಂದು ಅಂತಿಮ ತೀರ್ಪು ಹೊರಡಿಸಿ ದಿನಾಂಕ:-11.04.2018 ರಂದು ಮಾನ್ಯ ಹೊಸದುರ್ಗ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಜೆ.ಎಂ.ಎಫ್.ಸಿ. ನ್ಯಾಯಾಲಯವು ನೀಡಿರುವ ತೀರ್ಪನ್ನು ಎತ್ತಿ ಹಿಡಿದಿರುತ್ತದೆ. ಇದರ ಹಿನ್ನೆಲೆಯಲ್ಲಿ ಸದರಿ ಸನ್ನದನ್ನು ಮೇಲ್ಕಂಡ ಸ್ಥಳಕ್ಕೆ 2017-18ನೇ ಸಾಲಿಗೆ ನವೀಕರಿಸಿ ಸ್ಥಳಾಂತರಿಸಲಾಗಿರುತ್ತದೆ.

ಆಇ 48 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ ಸದಸ್ಯರು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 228
ಸದಸ್ಯರ ಹೆಸರು : ಶ್ರೀ. ಡಾ|| ಉಮೇಶ್ ಜಿ. ಜಾಧವ್ (ಚಿಂಚೋಳಿ)
ಉತ್ತರಿಸಬೇಕಾದ ದಿನಾಂಕ : 10.07.2018
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕ/ ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ : ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ : (ವಿವರ ನೀಡುವುದು)	**ಪ್ರಾಥಮಿಕ ಶಿಕ್ಷಣ** ಹತ್ತು ಸಾವಿರ ಪ್ರಾಥಮಿಕ ಶಾಲಾ ಪದವೀಧರ ಸಹ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲಿರುತ್ತದೆ. ನಿವೃತ್ತಿ, ನಿಧನ ಇತ್ಯಾದಿ ಕಾರಣಗಳಿಂದ ತೆರವಾಗಿರುವ ಖಾಲಿ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ 22,500 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಲು ಆದೇಶಿಸಲಾಗಿದೆ. **ಪ್ರೌಢ ಶಿಕ್ಷಣ** ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಟ್ಟು 5,500 ಬೋಧಕ ಹುದ್ದೆಗಳು ಖಾಲಿಯಿದ್ದು, ಅದರಲ್ಲಿ 3590 ಹುದ್ದೆಗಳನ್ನು ನೇರ ನೇಮಕಾತಿಗಾಗಿ ಹಾಗೂ 1910 ಹುದ್ದೆಗಳನ್ನು ಬಡ್ತಿಗಾಗಿ ಮೀಸಲಿರಿಸಲಾಗಿದೆ. 3590 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದಲ್ಲಿ ಸ್ವೀಕೃತಗೊಂಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ 3100 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ. **ಬೋಧಕೇತರ ನೌಕರರು** ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಬೋಧಕೇತರ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ/ಬಡ್ತಿ

		ಅನುಪಾತದಂತೆ ಭರ್ತಿ ಮಾಡುಲಾಗುತ್ತಿದೆ. ಪ್ರಸ್ತುತ ಪ್ರ.ದ.ಸಹಾಯಕರು, ದ್ವಿ.ದ.ಸಹಾಯಕರು ಮತ್ತು ಗ್ರೂಪ್ ಡಿ, ನೇರ ನೇಮಕಾತಿಯ ಹುದ್ದೆಗಳನ್ನು, ಅನುಕಂಪದ ನೇಮಕಾತಿ ಮುಖಾಂತರ ಭರ್ತಿ ಮಾಡಲಾಗುತ್ತಿದೆ. **ಪದವಿಪೂರ್ವ ಶಿಕ್ಷಣ** ಪದವಿಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 1204, ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಇಡಿ 35 ಡಿಜಿಓ 2009 ದಿ:15.05.2014 ರಲ್ಲಿ 1204, ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ನೀಡಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸದರಿ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷಾ ಮೂಲಕ ಭರ್ತಿ ಮಾಡಲು ವಹಿಸಿಕೊಡಲಾಗಿದೆ. ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿದೆ. ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ದ್ವಿತಿಯ ದರ್ಜೆ ಸಹಾಯಕರ ಹಾಗೂ 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮತ್ತು ಪ್ರಾದೇಶಿಕ ಆಯುಕ್ತರುಗಳಿಂದ ನೇಮಕಾತಿಗೆ ಕಳುಹಿಸುವ ಪ್ರಸ್ತಾವನೆಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಗಳು ಖಾಲಿ ಇರುವುದಿಲ್ಲ.
ಆ.	ಚಿಂಚೋಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಬೋಧಕ/ ಭೋದಕೇತರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು :	ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಪ್ರಾಥಮಿಕ: 476 ಪ್ರೌಢ: 119 ಬೋಧಕೇತರ: 24 ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 476 ಹುದ್ದೆಗಳಲ್ಲಿ 263 ಪದವೀಧರ ಪ್ರಾಥಮಿಕ ಶಾಲಾ

		ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದೆ. ನೇಮಕಾತಿ ಪ್ರಕ್ರಿಯೆ ಆಗುವವರೆಗೆ ಆಯುಕ್ತರು ಸಾಶಿಇ ಬೆಂಗಳೂರುರವರ ಜ್ಞಾಪನ ಸಂಖ್ಯೆ ಸಿ3(1)/ಪ್ರಾಶಿ/ಅಶಿನೇ/01/218-19 ಭಾಗ ದಿ:15.06.2018 ರನ್ವಯ ಖಾಲಿ ಇರುವ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಖಾಲಿ ಹುದ್ದೆಗಳಿಗೆ ತಾತ್ಕಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು, ಅದರಂತೆ ಕ್ರಮವಹಿಸಲಾಗುವುದು. **ಪದವಿಪೂರ್ವ ಶಿಕ್ಷಣ** ಚಿಂಚೋಳಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 35 ಡಿಜಿಓ2009 ದಿ:15.05.2014 ರಲ್ಲಿ ಸೂಚಿಸಿರುವಂತೆ ನೇರನೇಮಕಾತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸದರಿ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ವಹಿಸಿಕೊಡಲಾಗಿದೆ, ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿದೆ. ಚಿಂಚೋಳಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹಾಗೂ 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮತ್ತು ಕಲಬುರಗಿ ಪ್ರಾದೇಶಿಕ ಆಯುಕ್ತರಿಂದ ನೇಮಕಾತಿಗೆ ಕಳುಹಿಸುವ ಪ್ರಸ್ತಾವನೆ ಮೂಲಕ ಭರ್ತಿ ಮಾಡಲಾಗುತ್ತಿದೆ.
ಇ.	ಚಿಂಚೋಳಿ ತಾಲ್ಲೂಕಿನ ಕೆಲ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳಲ್ಲಿ ಸುಮಾರು 70 ಕ್ಕೂ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಇದ್ದರೂ ಸಹ ಕೇವಲ ಒಬ್ಬ ಶಿಕ್ಷಕ /ಶಿಕ್ಷಕಿ ಇರುವುದು ಸರ್ಕಾರದ ಗಮನಕ್ಕೆ	ಇಲ್ಲ

	ಬಂದಿದಿಯೇ:	
ಈ.	ಹಾಗಿದ್ದಲ್ಲಿ, ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣವನ್ನು ಪಡೆಯಲು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ. ಪ್ರಾಥಮಿಕ, ಪ್ರೌಢ ಶಾಲಾ ಹಾಗೂ ಪದವಿ ಪೂರ್ವ ಕಾಲೇಜಿಗಳಲ್ಲಿ ಪ್ರಸ್ತುತ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

ಸಂಖ್ಯೆ: ಇಡಿ 118 ಎಸ್‌ಓಹೆಚ್ 2018

(ಎನ್ ಮಹೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	188
ಸದಸ್ಯರ ಹೆಸರು	ಶ್ರೀ.ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ)
ಉತ್ತರಿಸುವವರು	ಮುಖ್ಯಮಂತ್ರಿ
ಉತ್ತರದ ದಿನಾಂಕ	10-07-2018

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸರ್ಕಾರ ಈವರೆಗೆ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಇದ್ದ ಮದ್ಯ ಮಾರಾಟ ಕೇಂದ್ರಗಳನ್ನು ಸಂಪೂರ್ಣವಾಗಿ ಸ್ಥಳಾಂತರಿಸಲಾಗಿದೆಯೇ;	ಇಲ್ಲ
ಆ)	ಸ್ಥಳಾಂತರಿಸಿದ್ದಲ್ಲಿ ಎಷ್ಟು ಕೇಂದ್ರಗಳನ್ನು ಸ್ಥಳಾಂತರಿಸಿದೆ;	1667
ಇ)	ಸ್ಥಳಾಂತರಿಸಲು ಬಾಕಿ ಇರುವ ಮದ್ಯ ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು;	218
ಈ)	ಸಂಪೂರ್ಣವಾಗಿ ಸ್ಥಳಾಂತರಿಸಲು ಸಾಧ್ಯವಾಗದಿರಲು ಕಾರಣಗಳೇನು?	ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳಲ್ಲಿ ಇರುವ ಸನ್ನದುಗಳನ್ನು ಸ್ಥಳಾಂತರಿಸಲು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ-5 ರಲ್ಲಿ ಧಾರ್ಮಿಕ ಸಂಸ್ಥೆ, ವಿದ್ಯಾಸಂಸ್ಥೆ, ಆಸ್ಪತ್ರೆ, ಸರ್ಕಾರಿ ಕಛೇರಿ, ಕೇಂದ್ರ ಸರ್ಕಾರಿ ಕಛೇರಿ, ಸ್ಥಳೀಯ ಸಂಸ್ಥೆಗಳ ಕಛೇರಿ ಅಥವಾ ಪ್ರಾಧಾನ್ಯವಾಗಿ ಎಸ್‌ಸಿ/ ಎಸ್‌ಟಿ ರವರು ವಾಸಿಸುವಂತಹ ಪ್ರದೇಶದಿಂದ 100 ಮೀಟರ್ ಅಂತರದೊಳಗೆ ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಂದ 220 ಮೀಟರ್ ಅಂತರದೊಳಗೆ ಯಾವುದೇ ಸನ್ನದುಗಳನ್ನು ನೀಡದಿರಲು ನಿರ್ಬಂಧವಿದೆ. ಸನ್ನದುದಾರರು ಸನ್ನದು ಸ್ಥಳಾಂತರ ಕೋರಿ ಸೂಕ್ತ ಸ್ಥಳದ ಆಯ್ಕೆ ಮಾಡಿ ಅರ್ಜಿ ಸಲ್ಲಿಸದ ಕಾರಣ ಸನ್ನದುಗಳನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ಸಾಧ್ಯವಾಗಿರುವುದಿಲ್ಲ.

ಆಇ 49 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	247
ಸದಸ್ಯರ ಹೆಸರು	:	ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್ (ಕಾಗವಾಡ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಕಾಗವಾಡ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು);	ಕಾಗವಾಡ ವಿಧಾನಸಭಾ ಕ್ಷೇತ್ರದಲ್ಲಿ 99 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 04 ಪ್ರೌಢ ಶಾಲೆಗಳಿವೆ. (ಗ್ರಾಮ ಪಂಚಾಯಿತಿವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ)
(ಆ) ಸದರಿ ಶಾಲೆಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
(ಇ) ಹಾಗಿದ್ದಲ್ಲಿ, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳನ್ನು ನೆಲಸಮ ಮಾಡಿ ಮರುನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;	2018-19ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಶಾಲಾ ಕಟ್ಟಡಗಳ ದುರಸ್ಥಿ/ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.
(ಈ) ಸದರಿ ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಬಂದಿದೆ
(ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ಸಂಪೂರ್ಣ ಮಾಹಿತಿ ನೀಡುವುದು)	• ಕಾಗವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಎಚ್.ಪಿ.ಎಸ್. ಬಸವನಗರ [ಕಾಗವಾಡ], ತಂಗಡಿ, ಕಾವಲಗುಡ್ಡ, ಕೆಂಪವಾಡ, ಉಗರ ಬಿ.ಕೆ ಈ ಶಾಲೆಗಳಿಗೆ ಪ್ರತಿ ಶಾಲೆಗೆ ಒಂದು ಕೊಠಡಿ ನಿರ್ಮಾಣಕ್ಕಾಗಿ ರೂ.8.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. • ಜುಗೂಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಎಚ್.ಪಿ.ಜಿ.ಎಸ್. ಜುಗೂಳ ಈ ಶಾಲೆಗೆ ಒಂದು ಕೊಠಡಿ ನಿರ್ಮಾಣಕ್ಕೆ ರೂ.8.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. 2018-19ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಹಂಚಿಕೆಯಾಗಿರುವ ಅನುದಾನದ ಲಭ್ಯತೆಯನ್ನಾಧರಿಸಿ, ಕಾಗವಾಡ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಇಡಿ 193 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	185
ಸದಸ್ಯರ ಹೆಸರು	:	ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ ಯಲ್ಲಮ್ಮ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
(ಅ)	ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಷ್ಟು ಶಾಲೆಗಳಿಗೆ ಕ್ಷೀರಭಾಗ್ಯ ಯೋಜನೆ ಅನುಷ್ಠಾನಗೊಳಿಸಲಾಗಿದೆ.	ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆಗೆ ಒಳಪಟ್ಟ 172 ಸರ್ಕಾರಿ ಶಾಲೆಗಳು ಮತ್ತು 29 ಅನುದಾನಿತ ಶಾಲೆಗಳು ಸೇರಿದಂತೆ ಒಟ್ಟು 201 ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.
(ಆ)	ಕ್ಷೀರಭಾಗ್ಯ ಯೋಜನೆ ಅನುಷ್ಠಾನಗೊಳಿಸದ ಶಾಲೆಗಳೆಷ್ಟು ? (ಶಾಲಾವಾರು ಹಾಗೂ ಮಕ್ಕಳ ಸಂಖ್ಯೆವಾರು ಸಂಪೂರ್ಣ ಮಾಹಿತಿ ನೀಡುವುದು)	ಯಾವುದೂ ಇರುವುದಿಲ್ಲ
(ಇ)	ಸದರಿ ಯೋಜನೆಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಆರ್ಥಿಕ ಪಾಲು ಎಷ್ಟು ? (ವಿವರಣೆ ನೀಡುವುದು)	ಕ್ಷೀರಭಾಗ್ಯ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ರಾಜ್ಯ ಸರ್ಕಾರವೇ ಶೇ.100 ರಷ್ಟು ಅನುದಾನವನ್ನು ಭರಿಸುತ್ತಿದೆ.

ಇಡಿ 22 ಎಂಎಂಎಸ್ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 25
ಮಾನ್ಯ ಸದಸ್ಯರ ಹೆಸರು : ಅಮೀನಪ್ಪಗೌಡಎಸ್ ಪಾಟೀಲ್ (ನಡಹಳ್ಳಿ)
ಉತ್ತರಿಸುವ ದಿನಾಂಕ : 10-07-2018
ಉತ್ತರಿಸುವ ಸಚಿವರು : ಉನ್ನತ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ ಎಷ್ಟು; (ಅವು ಯಾವುವು)	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಇರುವುದಿಲ್ಲ. ಸದರಿ ಕ್ಷೇತ್ರದಲ್ಲಿ "ಶ್ರೀಮತಿ ತಾರಾಬಾಯಿ ಮಲಕನಗೌಡ ಪಾಟೀಲ್ ಪಾಲಿಟೆಕ್ನಿಕ್, ಎಂ.ಎಂ.ಪಾಟೀಲ್ ಲೇಔಟ್, ಡಿ ಹಿಪ್ಪರ್ಗಿರೋಡ್, ತಾಳೀಕೋಟೆ-586214, ಮುದ್ದೇಬಿಹಾಳ ತಾ: ಬಿಜಾಪುರಜಿಲ್ಲೆ" ಎಂಬ ಖಾಸಗಿ ಸಂಸ್ಥೆಯನ್ನು 2017-18 ಮತ್ತು 2018-19 ನೇ ಸಾಲಿನಿಂದ ಎಐಸಿಟಿಇ, ನವದೆಹಲಿಯವರು "ಪ್ರವೇಶರಹಿತ ಪಾಲಿಟೆಕ್ನಿಕ್" ಎಂದು ಘೋಷಿಸಿದ್ದು, 2 ವರ್ಷಗಳಿಂದ ವಿದ್ಯಾರ್ಥಿಗಳ ಪ್ರವೇಶಾತಿ ಆಗಿರುವುದಿಲ್ಲ.
ಆ)	ಈ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಮೇಲಿನಂತೆ ಕಳೆದ 2 ವರ್ಷಗಳಿಂದ ವಿದ್ಯಾರ್ಥಿಗಳ ಪ್ರವೇಶಾತಿ ಆಗಿರುವುದಿಲ್ಲ..
ಇ)	ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶೈಕ್ಷಣಿಕ ಸುಧಾರಣಾ ಹಿತದೃಷ್ಟಿಯಿಂದ ಇನ್ನೂ ಹೆಚ್ಚಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;	ಇಲ್ಲ
ಈ)	ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು;	ರಾಜ್ಯದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಪ್ರಾರಂಭಿಸಲು ಎಐಸಿಟಿಇ, ನವದೆಹಲಿಯವರ ನಿಯಮಗಳನ್ನು ಪಾಲಿಸಬೇಕಿದ್ದು, ಎಐಸಿಟಿಇಯವರ 2018-19 ನೇ ಸಾಲಿನ ಮಾರ್ಗ ಸೂಚಿಸಯನ್ವಯ ಪಾಲಿಟೆಕ್ನಿಕ್ ಪ್ರಾರಂಭಿಸಲು ಗ್ರಾಮಾಂತರ ಪ್ರದೇಶದಲ್ಲಿ 4.00 ಎಕರೆ, ನಗರ ಪ್ರದೇಶದಲ್ಲಿ 1.5 ಎಕರೆ ಜಮೀನು ಅಗತ್ಯವಿರುತ್ತದೆ. ಇದರೊಂದಿಗೆ ಪಾಲಿಟೆಕ್ನಿಕ್ ತರಗತಿ ನಡೆಸಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರವೇ ಎಐಸಿಟಿಇ, ನವದೆಹಲಿಯವರ ಅನುಮೋದನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಪುಟ 2ಕ್ಕೆ

ಉ)	ಈ ಮಾನದಂಡಗಳ ಪ್ರಕಾರ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಮಂಜೂರು ಆಗಿವೆಯೆ; ಇಲ್ಲದಿದ್ದಲ್ಲಿ, ಕಾರಣಗಳೇನು?	ಮುದ್ದೇಬಿಹಾಳ ವಿಧಾನಸಭಾಕ್ಷೇತ್ರಕ್ಕೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಮಂಜೂರು ಆಗಿರುವುದಿಲ್ಲ. ವಿಜಯಪುರ ಜಿಲ್ಲೆಯ, ಬಸವನಬಾಗೇವಾಡಿಗೆ ಈಗಾಗಲೇ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಮಂಜುರಾಗಿದ್ದು, ಇದು ಮುದ್ದೇಬಿಹಾಳದಿಂದ 37.7 ಕಿ.ಮೀ ಅಂತರದಲ್ಲಿದೆ. ಇದಲ್ಲದೇ 2018-19 ನೇ ಸಾಲಿನ 2ನೇ ಹಂತದ ಪ್ರವೇಶಾತಿ ಪ್ರಕ್ರಿಯೆಯಲ್ಲಿ (7-7-2018) ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರದಲ್ಲಿ ಶೆ. 32 ರಷ್ಟು ಸೀಟು ಖಾಲಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್, ಝಳಕಿಯಲ್ಲಿ ಶೇ. 87 ರಷ್ಟು ಸೀಟುಗಳು ಖಾಲಿ ಇರುವ ಕಾರಣ, ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರಕ್ಕೆ ಸಧ್ಯಕ್ಕೆ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡುವ ಉದ್ದೇಶ ಇರುವುದಿಲ್ಲ.

ಇಡಿ 122 ಟಿಜಿಎಲ್ 2018

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ ಸದಸ್ಯರು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 287

ಸದಸ್ಯರ ಹೆಸರು : ಶ್ರೀ: ದೊಡ್ಡನಗೌಡರ್ ಮಹಾಂತೇಶ್ ಬಸವಂತರೇ (ಕಿತ್ತೂರು)

ಉತ್ತರಿಸಬೇಕಾದ ದಿನಾಂಕ : 10.07.2018

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ಎಂ.ಕೆ ಹುಬ್ಬಳ್ಳಿ ಅವರಾದಿ ಗ್ರಾಮಗಳಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲದೆ ಮಕ್ಕಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ
ಆ.	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು;	2008ನೇ ಸಾಲಿನಿಂದ ರಾಜ್ಯವಲಯದಲ್ಲಿ ಯಾವುದೇ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುತ್ತಿಲ್ಲ, ಬದಲಾಗಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಅವಕಾಶ ಕಲ್ಪಿಸಲಾಗಿದೆ.
ಇ.	ತಿಗಡಿ ಗ್ರಾಮದಲ್ಲಿ ಸರ್ಕಾರದ ಪದವಿ ಪೂರ್ವ ಕಾಲೇಜು ಇಲ್ಲದಿರುವುದು ಸರ್ಕಾರದ ಗನಮಕ್ಕೆ ಬಂದಿದೆಯೇ;	ಇಲ್ಲ
ಈ.	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?	ಉದ್ಭವಿಸುವುದಿಲ್ಲ

ಸಂಖ್ಯೆ: ಇಡಿ 116 ಎಸ್ಓಹೆಚ್ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	651
ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ತೇರದಾಳದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಕೊಠಡಿಗಳು ಬಹಳಷ್ಟು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಹಾಗಿದ್ದಲ್ಲಿ, ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ? ಸದರಿ ಕ್ಷೇತ್ರದ ಅನೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	2018-19ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಮರು ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. ಸದರಿ ಕ್ಷೇತ್ರದ ಅನೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.
(ಇ) ಹಾಗಿದ್ದಲ್ಲಿ, ಯಾವಾಗ ಶಿಕ್ಷಕರನ್ನು ಭರ್ತಿ ಮಾಡಲಾಗುವುದು;	ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.
(ಈ) ಸದರಿ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಪ್ರೌಢ ಶಾಲೆಗಳ ಬೇಡಿಕೆ ಇರುವುದರಿಂದ ಪ್ರಸ್ತುತ ವರ್ಷ ಎಷ್ಟು ಮತ್ತು ಯಾವಾಗ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಅಗತ್ಯತೆ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಪ್ರೌಢ ಶಾಲೆ ಪ್ರಾರಂಭಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.

ಇಡಿ 198 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	223
2	ಸದಸ್ಯರ ಹೆಸರು	:	ಶ್ರೀ ಬಸವರಾಜ್ ಮಟ್ಟಿಮುಡ್ (ವಿಧಾನಸಭೆಯಿಂದ ಚುನಾಯಿತರಾದವರು)
3	ಉತ್ತರಿಸಬೇಕಾದ ದಿನಾಂಕ	:	10.07.2018
4	ಉತ್ತರಿಸುವ ಸಚಿವರು	:	ಮುಖ್ಯಮಂತ್ರಿ

	ಪ್ರಶ್ನೆ	ಉತ್ತರ
ಅ)	ಕಲಬುರ್ಗಿ ಗ್ರಾಮೀಣ ಮತಕ್ಷೇತ್ರ ವ್ಯಾಪ್ತಿಗೆ ಹೆಚ್.ಕೆ.ಆರ್.ಡಿ.ಬಿಯಿಂದ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನವೆಷ್ಟು;	ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನವು ಡಾ: ನಂಜುಡಪ್ಪಾ ವರದಿ ಅನುಸಾರ CDI ಸೂಚ್ಯಾಂಕ ಆಧಾರದ ಮೇಲೆ ತಾಲೂಕನ್ನು ಒಂದು ಘಟಕವನ್ನಾಗಿ ಪರಿಗಣಿಸಿ ತಾಲೂಕವಾರು ಅನುದಾನ ಹಂಚಿಕೆ ಮಾಡುತ್ತಿರುವುದರಿಂದ ವಿಧಾನ ಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಿರುವುದಿಲ್ಲ. ಆದರೆ ತಾಲೂಕವಾರು ಪ್ರಗತಿಯ ವರದಿ ಅನುಬಂಧ "ಎ" ರಲ್ಲಿ ಲಗತ್ತಿಸಿದೆ
ಆ)	ಸದರಿ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ:	ಅನುಬಂಧ "ಬಿ"ನಲ್ಲಿ ಲಗತ್ತಿಸಿದೆ.
ಇ)	ಈಪೈಕಿ ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಕಾಗಾರಿಗಳಾವುವು:	"ಅನುಬಂಧ-ಬಿ ನಲ್ಲಿ ಲಗತ್ತಿಸಿದೆ"
ಈ)	ಸದರಿ ಕಾಮಗಾರಿಗಳನ್ನು ಯಾವ ಸಂಸ್ಥೆಯಿಂದ ಅನುಷ್ಟಾನಗೊಳಿಸಲಾಗುತ್ತಿದೆ? (ಕಾಮಗಾರಿಗಳವಾರು ಸಂಪೂರ್ಣವಿವರ ಒದಗಿಸುವುದು)	ಅನುಬಂಧ-ಬಿ ನಲ್ಲಿ ಲಗತ್ತಿಸಿದೆ"

ಸಂಖ್ಯೆ: ಯೋಇ 70 ಹೈಕವಿ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ-ಎ

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

ರೂ.ಲಕ್ಷಗಳಲ್ಲಿ

ಕ್ರಸಂ	ತಾಲೂಕ	ವರ್ಷ	ಆರ್ಥಿಕ ಪ್ರಗತಿ	
			ಮಂಜೂರಾದ ಅನುದಾನ	ಖರ್ಚಾದ ಅನುದಾನ
1	ಕಲಬುರಗಿ	2015-16	6451.48	4584.80
		2015-16R	6002.76	4933.51
		2016-17	11120.16	5599.19
		2017-18	13074.73	1239.64
		ಒಟ್ಟು	**36649.13**	**16357.14**
2	ಆಳಂದ	2015-16	2451.65	1942.49
		2015-16R	0.00	0.00
		2016-17	4403.54	1310.18
		2017-18	5000.20	234.01
		ಒಟ್ಟು	**11855.39**	**3486.68**
3	ಚಿತ್ತಾಪೂರ	2015-16	3473.54	2737.55
		2015-16R	1919.43	1266.13
		2016-17	4890.37	2032.62
		2017-18	4694.33	467.58
		ಒಟ್ಟು	**14977.67**	**6503.88**

ಅನುಬಂಧ (ಬಿ)

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
1	2015-16	DC Kalaburagi	Aland	Institutional	SCP	ಆಳಂದ ತಾಲೂಕಿನ ಮಾದನಹಿಪ್ಪರಗಾ, ಮಾಡ್ಯಾಳ, ಕಡಗಂಚಿ, ಆಳಂದ ಪಟ್ಟಣದ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಕ್ಕೆ ಬಾಲಕ, ಬಾಲಕಿಯರಿಗೆ ಸಾಮಾಗ್ರಿಗಳ ಖರಿದಿಗಾಗಿ.	29.00	30.60	ಪೂರ್ಣಗೊಂಡಿದೆ.
2	2015-16	DC Kalaburagi	Aland	Institutional	General	ಆಳಂದ ತಾಲ್ಲೂಕಿನ ವ್ಹಿ.ಕೆ.ಸಲಗರ ಗ್ರಾಮದಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಅಗತ್ಯ ಉಪಕರಣಗಳನ್ನು ಸರಬರಾಜು ಮಾಡುವುದು.	10.50	4.54	ಪೂರ್ಣಗೊಂಡಿದೆ.
3	2015-16	KRIDL 2	Aland	Institutional	SCP	ಆಳಂದ ತಾಲ್ಲೂಕಿನ ಲಾಡ್ಲಮುಗಳಿ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಅಂಗನವಾಡಿ ಕೇಂದ್ರ ನಿರ್ಮಾಣ Including electrification, baby toilet,	13.75	12.00	ಪೂರ್ಣಗೊಂಡಿದೆ.
4	2015-16	KRIDL 2	Aland	Institutional	SCP	ಆಳಂದ ತಾಲ್ಲೂಕಿನ ಹೊದಲ್ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಅಂಗನವಾಡಿ ನಿರ್ಮಾಣ Including electrification, baby toilet,	13.75	13.75	ಪೂರ್ಣಗೊಂಡಿದೆ.
5	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಕಿಣ್ಣಿ ಸುಲ್ತಾನ ಗ್ರಾಮದಲ್ಲಿ 02 ಕಡೆ ಸಾಮೋಹಿಕ ಶೌಚಾಲಯ ನಿರ್ಮಾಣ ಮತ್ತು ನೀರಿನ ವ್ಯವಸ್ಥೆ ಮಾಡುವುದು.	20.00	17.08	Completed.
6	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಮಾದನಹಿಪ್ಪರಗಾ ಗ್ರಾಮದ ಬಸವೇಶ್ವರ ಚೌಕದಿಂದ ಅಗಸಿ ಬಾಗಿಲವರಗೆ ಸಿ.ಸಿ ರಸ್ತೆ ಚರಂಡಿ ಮತ್ತು ರಸ್ತೆ ನಡುವೆ ಸಿಟಿ ಲೈಟ ನಿರ್ಮಾಣ ಕಾಮಗಾರಿ.	36.00	35.30	Completed 01 /2018
7	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಕಣಮಸ ಗ್ರಾಮದಿಂದ ಜಮಗಾ (ಆರ್) ಗ್ರಾಮದ ವರೆಗೆ ರಸ್ತೆ ನಿರ್ಮಾಣ ಕಾಮಗಾರಿ.	71.00	38.86	Physically Completed.
8	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಅಣೂರ ಗ್ರಾಮದಿಂದ ಖಸಗಿ ಬಾರ್ಡರ್ ವರೆಗೆ ರಸ್ತೆ ನಿರ್ಮಾಣ ಕಾಮಗಾರಿ (0.75 ಕೀ.ಮಿ - 02.25 ಕೀ.ಮಿ).	40.00	36.00	Completed.
9	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಸಾಲೇಗಾಂವ ಮಹಾದೇವ ಮಂದಿರದಿಂದ ಗ್ರಾಮದ ವರೆಗೆ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ.	10.52	10.37	Completed 12/2017
10	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಯಳಸಂಗಿ ಗ್ರಾಮದ ವಾರ್ಡ ನಂ. 01 ರ ದೇವಿಕಟ್ಟಿಯಿಂದ ಶಿವಶರಣಪ್ಪಾ ಸವಳೆ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	20.00	19.20	Completed
11	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಗುಂಜ ಬಬಲಾದ ಗ್ರಾಮದ ಕಲ್ಯಾಣಪ್ಪ ಮುಂಗಡಿ ಅವರ ಮನೆಯಿಂದ ಕನಕ ಭವನವ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	9.08	completed
12	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಮುದ್ದಡಗಾ ಗ್ರಾಮದ ಮಠದ ಕಟ್ಟೆಯಿಂದ ಶಿವಲಿಂಗಯ್ಯಾ ಸ್ವಾಮಿ ಮನೆಯವರೆಗೆ ಹಾಗೂ ಗಿರಣಿಯಿಂದ ಅಪ್ಪಾರಾಯ ಮನೆಯ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.80	Completed.
13	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಬೋಧನ ಗ್ರಾಮದ ಮುಖ್ಯ ರಸ್ತೆಯಿಂದ ಊರಿನ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	24.26	21.48	Completed
14	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಕಮಲಾನಗರ ಗ್ರಾಮದಲ್ಲಿ ನಿಜಲಿಂಗಪ್ಪ ರವರ ಮನೆಯ ಹತ್ತಿರ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.24	Completed.

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
15	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ತೋಳನವಾಡಿ ಗ್ರಾಮದಸರ್ಕಾರಿ ಶಾಲೆಯಿಂದ ಗುಂಡಪ್ಪ ಹರಸೂರ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.26	Completed
16	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ನರೋಣಾ ಗ್ರಾಮದ ಮಲ್ಲಯ್ಯಾ ಸಾಲಿ ಮನೆಯಿಂದ ಹುವಯ್ಯಾ ಕಲಶೆಟ್ಟಿ ಮನೆಯ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	15.00	13.83	Completed
17	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಚಿಂಚನಸೂರ ಗ್ರಾಮದ ವಿರುಪಾಕ್ಷ ಭೋದನ ಅಂಗನವಾಡಿಯಿಂದ ಗುರುನಾಥ ತಪಲಿ ಹಾಗೂ ಸುಭಾಷ ಕಡಂಗೆ ಮನೆಯಿಂದ ಪ್ರಕಾಶ ಕುಲಕರ್ಣಿ ಮನೆಯ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.71	Completed
18	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ವ್ಹಿ.ಕೆ.ಸಲಗರ ಗ್ರಾಮದ ಪರಮೇಶ್ವರ ಚಪ್ಪಳಗೆ ಮನೆಯಿಂದ ರಾಮಲಿಂಗ ನರೋಣಾ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.17	Completed
19	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಲಿಂಗನವಾಡಿ ಗ್ರಾಮದ ದೊಂಡಿಬಾ ಮನೆಯಿಂದ ಹನುಮಂತ ನಾಟಿಕಾರ ಹಾಗೂ ರಾಜೋಜಾ ಮನೆಯಿಂದ ಜೋತಿಬಾ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.64	Competed
20	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಹೊಡಲ್ ಗ್ರಾಮದ ಅಲಾಬ ಮಸೀದಿಂದ ಕುಂಡ್ಲಿ ಜಮಾದಾರ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	9.88	Physically Completed
21	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಅಂಬಲಗಾ ಗ್ರಾಮದ ಬಸವರಾಜ ದನ್ನೂರ ಮನೆಯಿಂದ ವಿಜಯಕುಮಾರ ಮೆಗಪ್ಪ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	9.72	Completed
22	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಕುದುಮೂಡು ಗ್ರಾಮದಲ್ಲಿ ಸುಭಾಶ್ಚಂದ್ರ ಮನೆಯಿಂದ ರೇವಣಸಿದಪ್ಪಾ ಕಪನೂರ ಹಾಗೂ ಪಂಡಿತರಾವ್ ಚಿತಲಿ ಮನೆಯಿಂದ ಪೋಲೀಸ್ ಪಾಟೀಲ್ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.75	Completed
23	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಮುರುಡಿ ಗ್ರಾಮದ ಮತಾಬ್ ಸಾಬ ಮನೆಯಿಂದ ಹುಸೇನ ಸಾಬ ತಳೆ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.64	Completed
24	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಮಡಕಿ ಗ್ರಾಮದ ಬಾಲೇಸಾಬ ಮನೆಯಿಂದ ಮುರುಡಿ ರಸ್ತೆ ವರೆಗೆ ಹಾಗೂ ಬಸವಣ್ಣ ಕಟ್ಟೆಯಿಂದ ಲಕ್ಷ್ಮೀ ಗುಡಿಯ ವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	9.80	Completed
25	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಬೆಟಜೇವರ್ಗಿ ಗ್ರಾಮದ ಅಣಪ್ಪ ರಾಮಶೇಟ್ಟಿ ಮನೆಯಿಂದ ಹಣಮಂತರಾವ್ ಹೊನ್ನಳ್ಳಿ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.27	Completed.
26	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ವಾಗ್ದರಗಿ ಗ್ರಾಮದ ರಾಚುಟೇಶ್ವರ ಗುಡಿಯ ಹತ್ತಿರ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.20	Completed.
27	2015-16	PRED Kalaburagi	Aland	Infrastructure	General	ಆಳಂದ ತಾಲ್ಲೂಕಿನ ಬಿಲಗುಂದಾ ಗ್ರಾಮದ ಗಣಪತಿ ಖಜೂರಿ ಮನೆಯಿಂದ ಅಗಸಿಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.	10.00	8.25	Completed

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
28	2015-16	PRED Kalaburagi	Aland	Infrastructure	SCP	ಆಳಂದ ತಾಲ್ಲೂಕಿನ ಚಿಂಚನಸೂರ ಗ್ರಾಮದ ಬಸವಕಲ್ಯಾಣ ರಸ್ತೆಯ ಬುದ್ಧ ನಗರದಲ್ಲಿ ಪರಿಶಿಷ್ಟ ಜಾತಿ ಓಣಿಯಲ್ಲಿ ಮಹಿಳೆಯರ ಶೌಚಾಲಯ ನಿರ್ಮಾಣ	12.00	4.26	Physically Completed.
29	2015-16	PRED Kalaburagi	Aland	Institutional	SCP	ಆಳಂದ ತಾಲ್ಲೂಕಿನ ಕೆರಿ ಅಂಬಲಗಾ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಅಂಗನವಾಡಿ ನಿರ್ಮಾಣ Including electrification, baby toilet, water supply and playing and learning equipments and kitchen utensils with gas	14.00	8.28	Finishing work under progress
30	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಮಾದ್ಯಳ ಗ್ರಾಮದಲ್ಲಿ 03 ಕಡೆ ಸಾಮೋಹಿಕ ಶೌಚಾಲಯ ನಿರ್ಮಾಣ ಮತ್ತು ನೀರಿನ ವ್ಯವಸ್ತೆ ಮಾಡುವುದು.	30.00	10.92	Finishing work under progress
31	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಹಿರ್ಡೋಳ್ಳಿ ಗ್ರಾಮದಲ್ಲಿ 02 ಕಡೆ ಸಾಮೋಹಿಕ ಶೌಚಾಲಯ ನಿರ್ಮಾಣ ಮತ್ತು ನೀರಿನ ವ್ಯವಸ್ತೆ ಮಾಡುವುದು.	20.00	8.25	Finishing work under progress
32	2015-16	PRED Kalaburagi	Aland	Infrastructure	General	ಆಳಂದ ತಾಲೂಕಿನ ಹಳ್ಳಿಸಲಗರ ಗ್ರಾಮದಲ್ಲಿ 02 ಕಡೆ ಸಾಮೋಹಿಕ ಶೌಚಾಲಯ ನಿರ್ಮಾಣ ಮತ್ತು ನೀರಿನ ವ್ಯವಸ್ತೆ ಮಾಡುವುದು.	20.00	5.66	Finishing work under progress
33	2015-16	PWD Kalaburagi	Aland	Infrastructure	General	ಕವಲಗಾ ಗ್ರಾಮದಿಂದ ಝಳಕಿ(ಕೆ) ಗ್ರಾಮದವರಗೆ ಡಾಂಬರೀಕರಣ	209.85	208.96	Physically completed Third Party report awaited.
34	2015-16	PWD Kalaburagi	Aland	Infrastructure	General	ಸರಸಂಬಾ ಗ್ರಾಮದಿಂದ ಸಕ್ಕರಗಾ ಗ್ರಾಮಕ್ಕೆಕೂಡು ರಸ್ತೆ ಡಾಂಬರಿಕರಣ	155.61	136.20	Completed
35	2015-16	PWD Kalaburagi	Aland	Infrastructure	General	ಆಳಂದ ಪಟ್ಟಣದ ಸರಕರಿ ಜ್ಯಾನಿಯರ್ ಕಾಲೇಜಿನಲ್ಲಿ ಶೌಚಾಲಯ ನಿರ್ಮಾಣ	20.00	17.34	Work completed final bill paid.
36	2015-16	PWD Kalaburagi	Aland	Infrastructure	General	ಚಿಂಚೋಳಿ(ಬಿ)ಗ್ರಾಮದ ಕ್ರಾಸ್ ದಿಂದ ಮಹಾರಾಷ್ಟ್ರ ಭೈರಾಟ ಬಾರ್ಟರ ವರೆಗೆ ಡಾಂಬರಿಕರಣ	55.00	51.13	Physically Completed
37	2015-16	PWD Kalaburagi	Aland	Infrastructure	General	ನಿಂಬರಗಾ ಗ್ರಾಮದ ಎಸ್.ಬಿ.ಐ ಬ್ಯಾಂಕದಿಂದ ಪೋಲಿಸಿ ಸ್ಟೇಶನ ವರೆಗೆ ಸಿ.ಸಿ ರಸ್ತೆ ಚರಂಡಿ ನಿರ್ಮಾಣ	20.00	19.40	Physically completed final bill paid.
38	2015-16	PWD Kalaburagi	Aland	Infrastructure	General	ಧುತ್ತರಗಾಂವ ಗ್ರಾಮ ಪಂಚಾಯತಿಯಿಂದ ಕೋರಣೇಶ್ವರ ಮಠದ ವರೆಗೆ ಡಾಂಬರಿಕರಣ ಕಾಮಗಾರಿ	25.00	19.02	Completed
39	2015-16	PWD Kalaburagi	Aland	Infrastructure	General	ಬಂಗರಗಾ ಮುಖ್ಯ ರಸ್ತೆಯಿಂದ ಮಠದ ವರೆಗೆ ಸಿ.ಸಿ ರಸ್ತೆ ಚರಂಡಿ ನಿರ್ಮಾಣ	10.00	9.60	Completed final bill paid.
40	2015-16	PWD Kalaburagi	Aland	Infrastructure	TSP	ಆಳಂದ ತಾಲೂಕಿನ ಝಳಕಿ(ಕೆ) ಪಾದರ್ ತಾಂಡಾದಲ್ಲಿ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಹಾಗೂ ಝಳಕಿ ಗ್ರಾಮಕ್ಕೆ ಕೂಡುವ ರಸ್ತೆ ಕಾಮಗಾರಿ.	48.00	38.80	Final bill to DC vide ltr no 1678 Dt:15-7-2017 for Rs:5.46 Lakhs
41	2015-16	PWD Kalaburagi	Aland	Institutional	SCP	ಆಳಂದ ಪಟ್ಟಣದ ಸರ್ಕಾರಿ ಮೇಟ್ರಿಕ ನಂತರ ಕಾಲೇಜು ಬಾಲಕರ ವಸತಿ ನಿಲಯ ಕಟ್ಟಡ ಕಾಮಗಾರಿ. [With electrification, water supply and sanitation	150.77	139.37	Work Completed
42	2015-16	PWD Kalaburagi	Aland	Institutional	SCP	ಆಳಂದ ತಾಲೂಕಿನ ಕಡಗಂಚಿ ಸರ್ಕಾರಿ ಮೆಟ್ರೀಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ ಹೆಚ್ಚುವರಿ ಕೋಣೆಗಳು, ಕುಡಿಯುವ ನೀರಿನ ಕೊಳವೆ ಭವಿ ಪೈಪಲೈನ್ ಕಾಮಗಾರಿ.	40.00	37.78	Physically completed final bill paid

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
43	2015-16	PWD Kalaburagi	Aland	Institutional	SCP	ಆಳಂದ ತಾಲೂಕಿನ ಮಾದನಹಿಪ್ಪರಗಾ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಕೋಣೆಗಳ ನಿರ್ಮಾಣ ಕಾಮಗಾರಿ. ತಿಣ ಭಣಟಿಳಜಡಿ ಭಜಜ ಚಿಟಿಜ ಟಚಿಣಣಡಿಜಜ	40.00	34.50	Physically completed
44	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಹಡಲಗಿ ಗ್ರಾಮದ ದಲಿತ ಓಣಿಯಿಂದ ಯಳಸಂಗಿ ಹೋಗುವ ಮುಖ್ಯ ರಸ್ತೆ ವರೆಗೆ ಡಾಂಬರಿಕರಣ ಕಾಮಗಾರಿ.	50.00	49.17	Completed and final bill paid
45	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಝಳಕಿ (ಕೆ) ಗ್ರಾಮದ ಧೋಳಪ್ಪಾ ಕೋಚಿ ಮನೆಯಿಂದ ಕಲ್ಯಾಣಿ ಅನಿಹೋಲ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	9.74	Completed and final bill paid.
46	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ದಣ್ಣೂರ ಗ್ರಾಮದ ಪ್ರಭು ಬೋಲ್ಡೆ ಮನೆಯಿಂದ ಮರತೂರ ಯಶ್ವಂತ ಮನೆವರೆಗೆ ಹಾಗೂ ಭೀಮಶ್ಯಾ ಬೋಲ್ಡೆ ಮನೆಯಿಂದ ಶಾಂತಪ್ಪಾ ಹರಳಯ್ಯಾ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	20.00	16.17	Completed Final bill paid
47	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಮಾದನಹಿಪ್ಪರಗಾ ಅರಗಲಕಟ್ಟಿ ಮೈಂದರ್ಗಿ ದರಸ್ತೆಯಲ್ಲಿ 1) ಮುಖ್ಯ ರಸ್ತೆಯಿಂದ ಸಕಾರಿ ಪ್ರಾಥಮಿಕ ಶಾಲೆವರೆಗೆ, 2) ಹನುಮಾನ ದೇವಸ್ಥಾನದಿಂದ ಅಂಬಾಜಿ ಒಡ್ಡರ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	20.00	19.29	completed and final bill paid.
48	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಗೂಳ್ಳೋಳಿ ತಾಂಡಾ ರಾಜು ನೀಲು ಚವ್ಹಾಣ ಮನೆಯಿಂದ ರೋಪಸಿಂಗ್ ಗೇನು ಪವಾರ ಮನೆವರೆಗೆ ಹಾಗೂ ಮುಖ್ಯ ರಸ್ತೆಯಿಂದ ತಾರಾಚಂದ ಗೇನು ಪವಾರ ಮನೆವರೆಗೆ ಹಾಗೂ ದೇವಲು ಗಂಗಾರಾಮ ಪವಾರ ಮನೆಯಿಂದ ವಾಲು ಭೀಮಾ ಪವಾರ ಮನವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	8.00	completed and final bill paid
49	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಪಡಸಾವಳಿ ಗ್ರಾಮದ ಕಲ್ಲು ಗಾಳೆ ಮನೆಯಿಂದ ರಮೇಶ ಹತ್ತಿಕಾಳೆ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	8.00	completed and final bill paid.
50	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಎಲೆ-ನಾವದಗಿ ತಾಂಡಾದಲ್ಲಿ ರೋಹಿದಾಸ ಶತ್ತು ರಾಠೋಡ ಮನೆಯಿಂದ ದನ್ನು ಮಿಠು ರಾಠೋಡ ಮನೆವರೆಗೆ ಹಾಗೂ ಖೆಮು ಲಾಲು ಚವ್ಹಾಣ ಮನೆಯಿಂದ ಖೆಬು ಮಿಠ್ಠು ರಾಠೋಡ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	8.85	completed and final bill paid.
51	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಭೋಳಣಿ ಗ್ರಾಮದ ದಲಿತ ಓಣಿಯ ಸಮುದಾಯ ಭವನ ಮುಖ್ಯ ರಸ್ತೆಯಿಂದ ಮರಗಮ್ಮ ದೇವಸ್ತಾನದ ವರೆಗೆ ಮತ್ತು ತುಕಾರಾಮ ಮೇಲಕೇರಿ ಮನೆಯಿಂದ ಬಾಬು ಜಗಜೀವನರಾಮ ಕಟ್ಟೆಯವರೆಗೆ,ಕಾಂತೂ ಮಾಂಗ ಮನೆಯಿಂದ ಶಿವರಾಮ ಹರಿಜನ ಮನೆಯವರೆಗೆ ವಾಯಾ ಈರಣ್ಣಾ ಗಂಗಾರಾಮ ಮಾಂಗ ಮನೆಯವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	10.00	6.30	completed and final bill paid.

4

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
52	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಜಿಡಗಾ ಗ್ರಾಮದ ದಲಿತ ಓಣಿಯ ನೀರು ಸೇದುವ ಭಾವಿಯಿಂದ ಮಾಂಗ ಓಣಿವರೆಗೆ ಹಾಗೂ ಮಾಂಗ ಓಣಿಯಿಂದ ಧರ್ಮಶಾಲೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	9.40	Completed and final bill paid.
53	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಸರಸಂಬಾ ಗ್ರಾಮದ 1) ಶಂಕರ ಮೇಲಕೇರಿ ಮನೆಯಿಂದ ನಾಗಲೇಗಾಂವ ರಸ್ತೆವರೆಗೆ, 2) ಪಂಡಿತ ಕೋನಾಳೆ ಮನೆಯಿಂಧ ಬಸವರಾಜ ಕಾಂಬಳೆ ಮನೆವರೆಗೆ, 3) ಸಮುದಾಯ ಭವನದಿಂದ ಪಂಡರಿ ಈಶ್ವರ ಮನೆವರೆಗೆ, 4) ಶಂಕರ ಸನಾದೆ ಮನೆಯಿಂದ ಪರಮೇಶ್ವರ ಹುಲ್ಲೆ ಮನೆವರೆಗೆ, 5) ಮುಖ್ಯ ರಸ್ತೆಯಿಂದ ಸ್ಮಶಾನ ಭೂಮಿವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ಮೇಲೆ ಬೆಡ್ಡ ಹಾಕೂವ ಕಾಮಗಾರಿ.	30.00	23.34	Physically Completed.
54	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಕವಲಗಾ ಗ್ರಾಮದ ವಿಠ್ಠಲ ಹಣಮಂತ ಮಾಂಗ ಮನೆಯಿಂದ ಬಸ್ಸು ಕಾಂಬಳೆ ಮನೆವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ.	10.00	8.00	Completed and final bill paid.
55	2015-16	PWD Kalaburagi	Aland	Infrastructure	SCP	ಯಳಸಂಗಿ ಗ್ರಾಮದ ದಲಿತ ಓಣಿಯ ಕಲ್ಲಪ್ಪಾ ಝುಳಕಿ ಮನೆಯಿಂದ ಸಿದ್ದಪ್ಪಾ ಬಳೂರಗಿ ಮನೆಯವರೆಗೆ ಮತ್ತು ನಾಗೇಶ ಕಟ್ಟಿಯಿಂದ ಗಡ್ಡಪ್ಪಾ ಗುಂಗನ ಮನೆಯವರೆಗೆ ಹಾಗೂ ಅಂಗನವಾಡಿ ಕೇಂದ್ರದಿಂದ ಕುಲಾಲಿ ರಸ್ತೆಯವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ಕಾಮಗಾರಿ.	20.00	19.54	Completed and final bill paid.
56	2015-16	PWD Kalaburagi	Aland	Infrastructure	SCP	ಕೆರೂರ ಗ್ರಾಮದ ದಲಿತ ಓಣಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ	10.00	8.00	Completed and final bill paid.
57	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಚಿತಲಿ ಗ್ರಾಮದ ದಲಿತ ಓಣಿಯಲ್ಲಿ ಶೌಚಾಲಯ ನಿರ್ಮಾಣ ಮತ್ತು ನೀರಿನ ವ್ಯವಸ್ಥೆ ಕಾಮಗಾರಿ	10.00	5.00	Physically Completed
58	2015-16	PWD Kalaburagi	Aland	Infrastructure	SCP	1] ಮಾಡ್ಯಾಳ ದಲಿತ ಓಣಿಯ ಭಗವಂತ ಸಂಗೋಳಗಿ ಮನೆಯಿಂದ ಮಾದರ ಓಣಿವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ 2] ಮಾಡ್ಯಾಳ ದಲಿತ ಓಣಿಯ ಶ್ರೀಮಂತ ಶಿಂಗೆ ಮನೆಯಿಂದ ಸುಮಿತ್ರಾ ಬೆಣ್ಣೆಶಿರೂರ ಮನೆಯವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ 3] ಮಾಡ್ಯಾಳ ಗ್ರಾಮದ ನಾಗಪ್ಪಾ ಭೈರ ಮನೆಯಿಂದ ಮಲ್ಲಪ್ಪಾ ದೊಡ್ಡಮನೆವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ 4] ಮಾಡ್ಯಾಳ ಗ್ರಾಮದ ಬಸಪ್ಪಾ ತಿಳಿಗೊಳ ಮನೆಯಿಂದ ಅಜರ್‌ು ಬಂಡಿ ಒಡ್ಡರ ಮನೆವರೆಗೆ ಮತ್ತು ನಾಗಪ್ಪಾ ಬಂಡಿ ಒಡ್ಡರ ಮನೆಯಿಂದ ಲಕ್ಷ್ಮಿಬಾಯಿ ಒಡ್ಡರ ಮನೆವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ	50.00	49.45	Completed and final bill paid
59	2015-16	PWD Kalaburagi	Aland	Infrastructure	SCP	ಬಸವಂತವಾಡಿ ಗ್ರಾಮದ ದಲಿಯ ಓಣಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ	10.00	9.29	Completed and final bill paid.

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
60	2015-16	PWD Kalaburagi	Aland	Infrastructure	SCP	ಹೆಬಳಿ ತಾಂಡಾದಲ್ಲಿ ತುಳಜಾಬಾಯಿ ಪವಾರ ಮನೆಯಿಂದ ಅಶೋಕ ಪಾಂಡು ಮನೆ ಹಿಂದುಗಡೆಯಿಂದ ಹಣಮಂತ ಗುಡಿಯಿಂದ ಚಂದು ಪಾಂಡು ಪವಾರ ಮನೆಯವರೆಗೆ, ಸರಕಾರಿ ಕಿರಿಯ ಪ್ರಾ.ಶಾ. ಯಿಂದ ಮುಖ್ಯರಸ್ತೆಯವರೆಗೆ, ಅಣದೂ ಪವಾರ ಮನೆಯಿಂದ ಕಿಶನ ಪಾಂಡು ಮನೆಯವರೆಗೆ, ಮನೋಹರ ನಿವರ್ತಿ ಪವಾರ ಮನೆಯಿಂದ ವಿಜಯಸಿಂಗ ಮಾನಸಿಂಗ ಮನೆಯವರೆಗೆ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ	10.00	9.41	Completed and final bill paid.
61	2015-16	PWD Kalaburagi	Aland	Infrastructure	SCP	ಹಿರೋಳ್ಳಿ ಗ್ರಾಮದ ದಲಿತ ಓಣಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ	10.00	9.65	Physically completed.
62	2015-16	PWD Kalaburagi	Aland	Infrastructure	SCP	ಸಾವಳೇಶ್ವರ ಗ್ರಾಮದ ದಲಿತ ಓಣಿಯಲ್ಲಿ ಮತ್ತು ದಲಿತ ಓಣಿಗೆ ಕೂಡುವ ರಸ್ತೆ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ	50.00	43.12	Completed and final bill paid
63	2015-16	PWD Kalaburagi	Aland	Infrastructure	SCP	ನಿರಗುಡಿ ಗ್ರಾಮದ ದಲಿತ ಓಣಿಯಲ್ಲಿ ಸಿ.ಸಿ. ಮತ್ತು ಚರಂಡಿ ನಿರ್ಮಾಣ ಕಾಮಗಾರಿ	15.00	13.28	Completed and final bill paid
64	2015-16	PWD Kalaburagi	Aland	Infrastructure	SCP	ಅಂಬೇವಾಡ ಗ್ರಾಮದ ಮಡ್ಡಿ ದಲಿತ ಓಣಿ ಮತ್ತು ಹಳೆಯ ದಲಿತ ಓಣಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ	10.00	9.20	Completed and final bill paid
65	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಜಮಗಾ (ಜೆ) ಗ್ರಾಮದ ದಲಿತ ಓಣಿಯಲ್ಲಿ ಸಿ.ಸಿ. ರಸ್ತೆ ಮತ್ತು ಮುಖ್ಯ ರಸ್ತೆವರೆಗೆ ಡಾಂಬರಿಕರಣ ನಿರ್ಮಾಣ ಕಾಮಗಾರಿ	40.00	38.88	Completed and final bill paid
66	2015-16	PWD Kalaburagi	Aland	Infrastructure	SCP	ಆಳಂದ ತಾಲೂಕಿನ ಮಾಡಿಯಾಳ ಗ್ರಾಮದ ದಲಿತ ಓಣಿಯಲ್ಲಿ 02 ಕಡೆ ಸಾಮೋಹಿಕ ಶೌಚಾಲಯ ನಿರ್ಮಾಣ ಕಾಮಗಾರಿ.	20.00	19.02	Physically completed.
67	2015-16	PWD Kalaburagi	Aland	Institutional	General	ಆಳಂದ ಪಟ್ಟಣದಲ್ಲಿ ಸರ್ಕಾರಿ ಬಾಲಕರ ಜ್ಯೂನಿಯರ ಕಾಲೇಜು ಕಟ್ಟಡ ಮತ್ತು ನೀರಿನ ಸೌಲಭ್ಯದೊಂಧಿಗೆ ಶೌಚಾಲಯ ನಿರ್ಮಾಣ	130.00	119.63	Completed
68	2015-16	PWD Kalaburagi	Aland	Institutional	TSP	ಆಳಂದ ತಾಲೂಕಿನ ಝುಳಕಿ (ಕೆ) ಪಾರ್ದಿ ತಾಂಡಾದಲ್ಲಿ ಶಾಲಾ ಕೋಣೆ ನಿರ್ಮಾಣ	29.54	26.45	Physically completed.
69	2015-16	PWD Kalaburagi	Aland	Institutional	General	ಆಳಂದ ಪಟ್ಟಣದಲ್ಲಿ ಸರ್ಕಾರಿ ಬಾಲಕೀಯರ ಜ್ಯೂನಿಯರ ಕಾಲೇಜು ಕಟ್ಟಡ, ಶೌಚಾಲಯ ನಿರ್ಮಾಣ ಮತ್ತು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು.	210.00	89.66	under progress.
70	2015-16	PWD Kalaburagi	Aland	Institutional	General	ಆಳಂದ ತಾಲೂಕಿನ ಸರಸಂಬಾ ಗ್ರಾಮದಲ್ಲಿಸರ್ಕಾರಿ ಪ್ರೌಢ ಶಾಲೆ ಕಟ್ಟಡ ನಿರ್ಮಾಣ ಮತ್ತು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು.	121.80	36.54	Under progress
71	2015-16	RWS	Aland	Institutional	SCP	ಆಳಂದ ತಾಲ್ಲೂಕಿನ ಮದಕಿ ತಾಂಡಾದಲ್ಲಿ ಅಂಗನವಾಡಿಗೆ ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸುವುದು.	5.00	3.01	ಕೆಲಸ ಮುಗಿದಿದೆ.
72	2015-16	RWS	Aland	Institutional	TSP	ಆಳಂದ ತಾಲ್ಲೂಕಿನ ಕಲ್ಲಕೂಟಗಾ ಗ್ರಾಮದ ಪರಿಶಿಷ್ಟ ಪಂಗಡ ಓಣಿಯಲ್ಲಿ ಅಂಗನವಾಡಿ ಕೇಂದ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ.	4.98	3.33	ಕಾಮಗಾರಿ ಮುಗಿದಿದೆ.
73	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ವಾಗ್ದರಿ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	3.99	ಕಾಮಗಾರಿ ಪೂರ್ಣಗೊಂಡಿದೆ
74	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ವ್ಹಿ.ಕೆ.ಸಲಗರ ತಾಂಡಾದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	3.52	ಕೆಲಸ ಮುಗಿದಿದೆ.

5

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
75	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ಹೊಡೆಲ್ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	3.69	ಕೆಲಸ ಮುಗಿದಿದೆ
76	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ಕೆರಿ ಅಂಬಲಗಾ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	4.89	ಕಾಮಗಾರಿ ಪೂರ್ಣಗೊಂಡಿದೆ.
77	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ಅಂಬಲಗಾ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	3.11	ಕಾಮಗಾರಿ ಪೂರ್ಣಗೊಂಡಿದೆ.
78	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ಕಮಲಾನಗರ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	4.00	3.72	ಕೆಲಸ ಮುಗಿದಿದೆ
79	2015-16	RWS	Aland	Infrastructure	SCP	ಆಳಂದ ತಾಲ್ಲೂಕಿನ ಕರಹರಿ ಗ್ರಾಮದ ಪರಿಶಿಷ್ಟ ಜಾತಿ ಓಣಿಯಲ್ಲಿ ಕುಡಿಯುವ-ನೀರಿನ ವ್ಯವಸ್ಥೆ ಕಲ್ಪಿಸುವುದು.	3.28	2.77	ಕೆಲಸ ಮುಗಿದಿದೆ
80	2015-16	RWS	Aland	Infrastructure	TSP	ಆಳಂದ ತಾಲ್ಲೂಕಿನ ವ್ಹಿ.ಕೆ.ಸಲಗರ ಗ್ರಾಮದಲ್ಲಿ ಪರಿಶಿಷ್ಟ ಪಂಗಡ ಓಣಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	11.13	7.55	completed
81	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಸಾವಳಗಿ(ಕೆ) ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ ನಿರ್ಮಿಸುವುದು.(ಓವರ್ ಹೆಡ್ ಟ್ಯಾಂಕ)	20.00	11.90	ಭೌತಿಕವಾಗಿ ಮುಗಿದಿದೆ (Final Bill submitted)
82	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಲಿಂಗನವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ ಅಳವಡಿಸುವುದು. (ಓವರ್ ಹೆಡ್ ಟ್ಯಾಂಕ)	25.00	20.44	completed
83	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಸಾವಳಗಿ(ಕೆ) ತಾಂಡದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	5.00	4.61	ಕೆಲಸ ಮುಗಿದಿದೆ
84	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಅಂಬಲಗಾ ಗ್ರಾಮದ ಹೊರಗೆ ಮುಖ್ಯ ರಸ್ತೆಯ ಬದಿಯಲ್ಲಿರುವ ಮೆಹಬೂಬ ಸುಭಾನಿ ದರ್ಗಾ ಹತ್ತಿರ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅಂಬಲಗಾ ಗ್ರಾಮದ ದ್ವಾರ ಬಾಗಿಲು ಹತ್ತಿರ ನೀರಿನ ವ್ಯವಸ್ಥೆ ಕಲ್ಪಿಸುವುದು.	3.00	2.80	ಕೆಲಸ ಪೂರ್ಣಗೋಂಡಿದೆ.
85	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಶ್ರೀಚಂದ ಗ್ರಾಮದ ವೀರಭದ್ರೇಶ್ವ ಗುಡಿಯ ಹತ್ತಿರ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	3.00	1.91	ಕೆಲಸ ಮುಗಿದಿದೆ
86	2015-16	RWS	Aland	Infrastructure	General	ಆಳಂದ ತಾಲ್ಲೂಕಿನ ಲಾಡ ಮುಗಳಿ ಗ್ರಾಮದ ಬೀರಲಿಂಗೇಶ್ವರ ಗುಡಿಯ ಹತ್ತಿರ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.	3.00	2.46	ಕೆಲಸ ಮುಗಿದಿದೆ
						Total	**2372.74**	**1889.97**	
1	2015-16	DC Kalaburagi	Chittapur	Institutional	TSP	ಚಿತ್ತಾಪೂರ ತಾಲ್ಲೂಕಿನ ಶಹಾಬಾದ ನಗರ ಹನುಮಾನ ನಗರ ಎಸ್.ಸಿ / ಎಸ್.ಟಿ ವಸತಿ ನಿಲಯಕ್ಕೆ ಅಗತ್ಯ ಸಾಮಗ್ರಿಗಳನ್ನು ಸರಬರಾಜು ಮಾಡುವುದು.	3.26	1.22	
2	2015-16	KRIDL 1	Chittapur	Institutional	General	ಸುಗುರ(ಎನ್) ಗ್ರಾಮದಲ್ಲಿರುವ ಕೊಲ್ಲೂರ ರಸ್ತೆಯ ಹತ್ತಿರ ಸಾಮೂಹಿಕ ಶೌಚಾಲಯ ನಿರ್ಮಾಣ	5.00	5.00	ಮುಗಿದಿದೆ
3	2015-16	KRIDL 1	Chittapur	Institutional	General	ಹೊನಗುಂಟಾ ಗ್ರಾಮದಲ್ಲಿ 2 ಶೌಚಾಲಯ ನಿರ್ಮಾಣ	10.00	10.00	ಮುಗಿದಿದೆ
4	2015-16	KRIDL 1	Chittapur	Institutional	General	ಚಿತ್ತಾಪೂರ ತಾಲ್ಲೂಕಿನ ಮರತೂರು ಗ್ರಾಮದ ಸ.ಪ್ರೌ. ಶಾಲೆಗೆ 2 ಕೋಣೆಗಳ ನಿರ್ಮಾಣ	13.00	13.00	ಮುಗಿದಿದೆ
5	2015-16	KRIDL 1	Chittapur	Institutional	General	ಚಿತ್ತಾಪೂರ ತಾಲ್ಲೂಕಿನ ತೋನಸಳ್ಳಿ ಗ್ರಾಮದ ಸ.ಪ್ರೌ. ಶಾಲೆಗೆ 2 ಕೋಣೆಗಳ ನಿರ್ಮಾಣ	13.00	13.00	ಮುಗಿದಿದೆ

Sl. No	Sanction Year	Agency	Taluka	Sub Type	Category	Work Name	Allocation	Expenditure	Stages of Work
6	2015-16	KRIDL 1	Chittapur	Institutional	General	ಚಿತ್ತಾಪೂರ ತಾಲ್ಲೂಕಿನ ಶಹಾಬಾದ ನಗರದ ಬಸವೇಶ್ವರ ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗೆ 02 ಕೋಣೆಗಳ ನಿರ್ಮಾಣ	12.00	12.00	ಮುಗಿದಿದೆ
7	2015-16	KRIDL 1	Chittapur	Infrastructure	General	ಹದನೂರ-ಭೋಳೆವಾಡ ರಸ್ತೆ ನಿರ್ಮಾಣ (ಎಮ್.ಡಿ.ಆರ್) 6.88 ದಿಂದ 8.22 ಕಿ.ಮೀ (ಚಿತ್ತಾಪೂರ ತಾಲ್ಲೂಕ)	100.00	100.00	ಪೂರ್ಣಗೊಂಡಿದೆ.
8	2015-16	KRIDL 1	Chittapur	Infrastructure	General	ಭೀಮನಳ್ಳಿ ಗ್ರಾಮದ ಶರಣಬಸವೇಶ್ವರ ದೇವಸ್ಥಾನದ ಎದುರುಗಡೆ ಸಿ.ಸಿ ರಸ್ತೆ ನಿರ್ಮಾಣ	20.00	20.00	ಪೂರ್ಣಗೊಂಡಿದೆ.
9	2015-16	KRIDL 1	Chittapur	Infrastructure	General	ವಾಡಿ ಪಟ್ಟಣದ ವಾರ್ಡ ನಂ. 12 ರಲ್ಲಿರುವ ಹಳೆ ಪೋಲಿಸ್ ಸ್ಟೇಷನ ದಿಂದ ಸಾಹೇಬ್ ಹೌಸ್ ಕ್ರಾಸ ವರೆಗೆ ಸಿ.ಸಿ ರಸ್ತೆ ನಿರ್ಮಾಣ	10.00	9.90	ಕಾಮಗಾರಿ ಮುಗಿದಿದೆ
10	2015-16	KRIDL 1	Chittapur	Infrastructure	General	ವಾಡಿ ಪಟ್ಟಣದ ವಾರ್ಡ ನಂ. 16 ರ ರಲ್ಲಿರುವ ಶಬ್ಬಿರ ಖಾನ ಮನೆಯಿಂದ ಖಾಜಾ ಮಿಯಾ ಮನೆಯ ವರೆಗೆ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ	10.00	10.00	ಕಾಮಗಾರಿ ಮುಗಿದಿದೆ
11	2015-16	KRIDL 1	Chittapur	Infrastructure	General	ದಂಡಗುಂಡ ಗ್ರಾಮದ ಹನುಮಾನ ದೇವಸ್ಥಾನದಿಂದ ಹಳೆ ಅಂಗನವಾಡಿ ವರೆಗೆ ಸಿ.ಸಿ ರಸ್ತೆ ಮತ್ತು ಆರ್.ಸಿ.ಸಿ ಚರಂಡಿ ನಿರ್ಮಾಣ	17.50	17.50	ಮುಗಿದಿದೆ.
109		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಕೊತ್ತೂರು ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	5.00
110		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಬಿಳ್ಳೂರು ಗ್ರಾಮದಲ್ಲಿ ಮುಸ್ಲಿಂ ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ	10.00
111		ಬಾಗೇಪಲ್ಲಿ ತಾ॥ ಚೊಕ್ಕಂಪಲ್ಲಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	5.00
112		ಬಾಗೇಪಲ್ಲಿ ತಾ॥ ಕಾರಕೂರು ಗ್ರಾಮದ ಮುಖ್ಯ ರಸ್ತೆಯಿಂದ ಚಿತ್ರಾವತಿ ಡ್ಯಾಂಗೆ ಹೋಗುವ ರಸ್ತೆ ನಿರ್ಮಾಣ	3.00
113		ಬಾಗೇಪಲ್ಲಿ ತಾ॥ ಮಿಟ್ಟೇಮರಿ ಗ್ರಾ॥ ಪಂ॥ ಅಪ್ಪಸ್ವಾಮಿಕುಂಟೆ ತಾಂಡ ಸಿ.ಸಿ. ರಸ್ತೆ ನಿರ್ಮಾಣ	10.00
114		ಬಾಗೇಪಲ್ಲಿ ತಾ॥ ಮಿಟ್ಟೇಮರಿ ಗ್ರಾ॥ ಪಂ॥ ಚೊಕ್ಕಂಪಲ್ಲಿ ಗ್ರಾಮದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ	10.00
115		ಬಾಗೇಪಲ್ಲಿ ತಾ॥ ಮಿಟ್ಟೇಮರಿ ಗ್ರಾ॥ ಪಂ॥ ಗೊಳ್ಳಪಲ್ಲಿ ಎಸ್.ಸಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
116	2017–18	ಬಾಗೇಪಲ್ಲಿ ತಾ॥ ಗಂಧಂವಾರಪಲ್ಲಿ ಗ್ರಾಮದಲ್ಲಿ ಸಮುದಾಯ ಭವನಕ್ಕೆ ಕಾಂಪೌಂಡ್ ನಿರ್ಮಾಣ ಕಾಮಗಾರಿ	5.00
117		ಬಾಗೇಪಲ್ಲಿ ತಾ॥ ಬಿಳ್ಳೂರಿ ಗ್ರಾ॥ ಪಂ॥ ಉಪ್ಪಾರ್ಲಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
118		ಬಾಗೇಪಲ್ಲಿ ತಾ॥ ಪಾತಪಾಳ್ಯ ಗ್ರಾಮದ ಮುಖ್ಯ ರಸ್ತೆಯಿಂದ ಶುದ್ಧನೀರು ಘಟಕಕ್ಕೆ ಹೋಗುವ ರಸ್ತೆ ಸಿ.ಸಿ. ರಸ್ತೆ ನಿರ್ಮಾಣ	10.00
119		ಬಾಗೇಪಲ್ಲಿ ತಾ॥ ಸೋಮನಾಥಪುರ ಗ್ರಾ॥ ಪಂ॥ ಯ ಚಿನ್ನಗಾನಪಲ್ಲಿ ಗ್ರಾಮದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ	5.00
120		ಬಾಗೇಪಲ್ಲಿ ತಾ॥ ಶೇರ್‌ಖಾನ್ ಕೋಟೆಯಿಂದ ಹಕ್ಕಿ–ಪಿಕ್ಕಿ ಕಾಲೋನಿಗೆ ಹೋಗುವ ರಸ್ತೆಗೆ ಡಾಂಬರೀಕರಣ ಕಾಮಗಾರಿ	5.00
121		ಬಾಗೇಪಲ್ಲಿ ತಾ॥ ನಲ್ಲಸಾನಪಲ್ಲಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣ	5.00
122		ಬಾಗೇಪಲ್ಲಿ ತಾ॥ ಬಾಬೇನಾಯಕನಪಲ್ಲಿ ದಿಗುವತಾಂಡ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	5.00
123		ಬಾಗೇಪಲ್ಲಿ ತಾ॥ ಬೋಯಿಪಲ್ಲಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	5.00
124		ಬಾಗೇಪಲ್ಲಿ ತಾ॥ ಮಿಟ್ಟೆಮರಿ ಗ್ರಾ॥ ಪಂ॥ ಮಿಟ್ಟೆಮರಿ ಗ್ರಾಮದ ರಥಬೀದಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ	20.00
125		ಬಾಗೇಪಲ್ಲಿ ತಾ॥ ಮಿಟ್ಟೆಮರಿ ಗ್ರಾ॥ ಪಂ॥ ಚೊಕ್ಕಂಪಲ್ಲಿ ಗ್ರಾಮದಲ್ಲಿ ಶುದ್ಧ ನೀರಿನ ಘಟಕ ನಿರ್ಮಾಣ	8.00

126	2017–18	ಬಾಗೇಪಲ್ಲಿ ತಾ॥ ಕೊಡಕೊಂಡ ರಸ್ತೆಯಿಂದ ಪ್ರಕಾಶಪ್ಪನವರ ಜಮೀನಿನವರೆಗೆ ರಸ್ತೆಗೆ ಜಲ್ಲಿ	5.00
127		ಬಾಗೇಪಲ್ಲಿ ತಾ॥ ಪರಗೋಡು ಗ್ರಾ॥ ಪಂ॥ ಕೊತ್ತಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	15.00
128		ಬಾಗೇಪಲ್ಲಿ ತಾ॥ ಪಾತಪಾಳ್ಯ ಸಿದ್ದಪ್ಪ ಮನೆ ಹತ್ತಿರ ಸಿ.ಸಿ. ರಸ್ತೆ ನಿರ್ಮಾಣ	5.00
129		ಬಾಗೇಪಲ್ಲಿ ತಾ॥ ಅಗಟಮಡಕ ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ	5.00
130		ಬಾಗೇಪಲ್ಲಿ ತಾ॥ ಪೋಲನಾಯಕನಪಲ್ಲಿ ಗ್ರಾ॥ ಪಂ॥ ನರಸಾಪುರ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
131		ಬಾಗೇಪಲ್ಲಿ ತಾ॥ ಆಚೆಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	4.00
132		ಬಾಗೇಪಲ್ಲಿ ತಾ॥ ಘಂಟಂವಾರಿಪಲ್ಲಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಹತ್ತಿರ ಸಮತಟ್ಟು ಮಾಡುವ ಕಾಮಗಾರಿ	5.00
133		ಬಾಗೇಪಲ್ಲಿ ತಾ॥ ದೇವರಗುಡಿಪಲ್ಲಿ ಗ್ರಾ॥ ಪಂ॥ ವ್ಯಾಪ್ತಿಯ ಕೊಂಡಂವಾರಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
134		ಬಾಗೇಪಲ್ಲಿ ತಾ॥ ಜೂಲುಪಾಳ್ಯ ಗ್ರಾ॥ ಪಂ॥ ವ್ಯಾಪ್ತಿಯ ವಾಸಪ್ಪರಾಳಪಲ್ಲಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	5.00
135		ಬಾಗೇಪಲ್ಲಿ ತಾ॥ ಮಿಟ್ಟೇಮರಿ ಗ್ರಾ॥ ಪಂ॥ ವ್ಯಾಪ್ತಿಯ ಮಿಟ್ಟೇಮರಿ ಗ್ರಾಮದ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ	10.00
136		ಬಾಗೇಪಲ್ಲಿ ತಾ॥ ಮಿಟ್ಟೇಮರಿ ಗ್ರಾ॥ ಪಂ॥ ವ್ಯಾಪ್ತಿಯ ಪೊಟ್ಲವಾರಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
137		ಬಾಗೇಪಲ್ಲಿ ತಾ॥ ದಿಗುವಮಾರಪ್ಪಗಾರಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	10.00
138		ಬಾಗೇಪಲ್ಲಿ ತಾ॥ ಬಿಳ್ಳೂರಿ ಗ್ರಾ॥ ಪಂ॥ ವ್ಯಾಪ್ತಿಯ ಉಗ್ರಾಣಂಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
139		ಬಾಗೇಪಲ್ಲಿ ತಾ॥ ಪೋಲನಾಯಕನಪಲ್ಲಿ ಗ್ರಾ॥ ಪಂ॥ ವ್ಯಾಪ್ತಿಯ ಪೂಲಕುಂಟ್ಲಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	4.00
140		ಬಾಗೇಪಲ್ಲಿ ತಾ॥ ಪೆಮ್ಮಯ್ಯಗಾರಿಪಲ್ಲಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಡ್ರೈನೇಜ್ ನಿರ್ಮಾಣ ಕಾಮಗಾರಿ	5.00
141		ಬಾಗೇಪಲ್ಲಿ ತಾ॥ ಘಂಟಂವಾರಪಲ್ಲಿ ಗ್ರಾಮದಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ	5.00
142		ಬಾಗೇಪಲ್ಲಿ ತಾ॥ ಕೊತ್ತಕೋಟವಾಂಡ್ಲಪಲ್ಲಿ ಗ್ರಾಮದಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ	5.00
143		ಬಾಗೇಪಲ್ಲಿ ತಾ॥ ಜಿಲಿಪಿಗಾರಪಲ್ಲಿ ಗ್ರಾಮದ ಯರ್ರಪರೆಡ್ಡಿ ಮನೆಯಿಂದ ನಾಗಪ್ಪ ಮನೆಯವರೆಗೆ ಸಿ.ಸಿ. ರಸ್ತೆ ನಿರ್ಮಾಣ	5.00
144		ಬಾಗೇಪಲ್ಲಿ ತಾ॥ ಜಿಲಿಪಿಗಾರಪಲ್ಲಿ ಗ್ರಾಮದ ಜೀಲಾಕುಂಟೆಕೆರೆ ಕಟ್ಟೆ ರಸ್ತೆ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
145		ಬಾಗೇಪಲ್ಲಿ ತಾ॥ ಜಿಲಿಪಿಗಾರಪಲ್ಲಿ ಗ್ರಾಮದ ನಂಜಿರೆಡ್ಡಿ ಮನೆಯಿಂದ ಭವನಮ್ಮ ಮನೆಯವರೆಗೆ ಸಿ.ಸಿ. ರಸ್ತೆ ನಿರ್ಮಾಣ	5.00
146		ಬಾಗೇಪಲ್ಲಿ ತಾ॥ ಘಂಟವಾರಪಲ್ಲಿ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ಸಮತಟ್ಟು ಕಾಮಗಾರಿ	5.00

147		ಬಾಗೇಪಲ್ಲಿ ತಾ॥ ಭತ್ತಲವಾರಪಲ್ಲಿ ಗ್ರಾಮದ ಆಮದಾಲಕುಂಟೆಗೆ ರಸ್ತೆ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
148		ಬಾಗೇಪಲ್ಲಿ ತಾ॥ ನರಸಾಪುರ ಗ್ರಾಮದ ಶ್ರೀರಾಮರೆಡ್ಡಿ ಮನೆಯ ಹತ್ತಿರದಿಂದ ರಾಮಸ್ವಾಮಿ ದೇವಸ್ಥಾನದವರೆಗೆ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	5.00
149		ಬಾಗೇಪಲ್ಲಿ ತಾ॥ ಗುಂಡ್ಲಪಲ್ಲಿ ಗ್ರಾಮದ ಗಂಗುಲಪ್ಪ ಮನೆಯಿಂದ ಅಕ್ಕುಲಪ್ಪ ಮನೆಯವರೆಗೆ ಸಿ.ಸಿ. ರಸ್ತೆ ನಿರ್ಮಾಣ	5.00
150		ಬಾಗೇಪಲ್ಲಿ ತಾ॥ ನಾರೇಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿ	5.00
151		ಬಾಗೇಪಲ್ಲಿ ತಾ॥ ಪಾತಪಾಳ್ಯ ಗ್ರಾ॥ ಪಂ॥ ಕಾಮಸಾನಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
152		ಬಾಗೇಪಲ್ಲಿ ತಾ॥ ಪಾತಪಾಳ್ಯ ಗ್ರಾ॥ ಪಂ॥ ಗುಜ್ಜೆಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
153		ಬಾಗೇಪಲ್ಲಿ ತಾ॥ ಪಾತಪಾಳ್ಯ ಗ್ರಾ॥ ಪಂ॥ ಸಿಂಗಪ್ಪಗಾರಪಲ್ಲಿ ಗ್ರಾಮದಲ್ಲಿ ಚರಂಡಿ ನಿರ್ಮಾಣ	5.00
154		ಬಾಗೇಪಲ್ಲಿ ತಾ॥ ಪಾತಪಾಳ್ಯ ಗ್ರಾ॥ ಪಂ॥ ಗೊಂದಿಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
155		ಬಾಗೇಪಲ್ಲಿ ತಾ॥ ತೋಳ್ಪಲ್ಲಿ ಗ್ರಾ॥ ಪಂ॥ ಪೆದ್ದರೆಡ್ಡಿಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
156		ಬಾಗೇಪಲ್ಲಿ ತಾ॥ ಜೂಲ್‌ಪಾಳ್ಯ ಗ್ರಾ॥ ಪಂ॥ ಕನ್ನಂಪಲ್ಲಿ ಗ್ರಾಮದ ಡೈರಿ ಬಿಲ್ಡಿಂಡ್ ಕಟ್ಟಡ ನಿರ್ಮಾಣ	5.00
157	2017-18	ಬಾಗೇಪಲ್ಲಿ ತಾ॥ ಸೋಮನಾಥಪುರ ಗ್ರಾ॥ ಪಂ॥ ಸೋಮನಾಥಪುರ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
158		ಬಾಗೇಪಲ್ಲಿ ತಾ॥ ಸೋಮನಾಥಪುರ ಗ್ರಾ॥ ಪಂ॥ ಮಂಗಳಮಡಗವರಪಲ್ಲಿ ಹತ್ತಿರ ಸಿ.ಸಿ. ರಸ್ತೆ ಕಾಮಗಾರಿ	5.00
159		ಬಾಗೇಪಲ್ಲಿ ತಾ॥ ದೇವರಗುಡಿಪಲ್ಲಿ ಗ್ರಾ॥ ಪಂ॥ ಬಾಲರೆಡ್ಡಿಪಲ್ಲಿ ಗ್ರಾಮದಲ್ಲಿ ಹಾಲಿನ ಡೈರಿ ಬಿಲ್ಡಿಂಗ್ ಕಟ್ಟಡ ನಿರ್ಮಾಣ	5.00
160		ಬಾಗೇಪಲ್ಲಿ ತಾ॥ ನಲಪರೆಡ್ಡಿಪಲ್ಲಿ ಗ್ರಾ॥ ಪಂ॥ ಜಿಲ್ಲಾಜರ್ಲು ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
161		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಬಿಳ್ಳೂರು ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ	5.00
162		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಬಂದಾರ್ಲಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
163		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಬೋವಿಪಲ್ಲಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	5.00
164		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಬಾಬೇನಾಯಕನಪಲ್ಲಿ ತಾಂಡ ಹತ್ತಿರ ಸಿ.ಸಿ. ರಸ್ತೆ ನಿರ್ಮಾಣ	5.00
165		ಬಾಗೇಪಲ್ಲಿ ತಾ॥ ಗೊರ್ತಪಲ್ಲಿ ಗ್ರಾಮದ ಸುದರ್ಶನರೆಡ್ಡಿ ಜಮೀನಿನ ಹತ್ತಿರ ಮೋರಿ ನಿರ್ಮಾಣ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
166		ಬಾಗೇಪಲ್ಲಿ ತಾ॥ ಬಿಳ್ಳೂರು ಗ್ರಾ॥ ಪಂ॥ ಮ್ಯಾಕಲಪಲ್ಲಿಯಿಂದ ಉಗ್ರಾಣಂ ಪಲ್ಲಿವರೆಗೆ ರಸ್ತೆ ಅಭಿವೃದ್ಧಿ (ಬದಲಾವಣೆ ಕಾಮಗಾರಿ)	5.00

167	2017–18	ಬಾಗೇಪಲ್ಲಿ ತಾ॥ ತಿಮ್ಮಂಪಲ್ಲಿ ಗ್ರಾ॥ ಪಂ॥ ತಟ್ಟನ್ನಗಾರಿಪಲ್ಲಿ ಕ್ರಾಸ್‌ನಿಂದ ಮುಲ್ಲಂಗಿ ಚಟ್ಲಪಲ್ಲಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
168		ಬಾಗೇಪಲ್ಲಿ ತಾ॥ ಬಿಳ್ಳೂರು ಮುಖ್ಯ ರಸ್ತೆಯಿಂದ ದುಗ್ಗಿನಾಯಕನಪಲ್ಲಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
169		ಬಾಗೇಪಲ್ಲಿ ತಾ॥ ಜಿಲಾಜರ್ಲು ಗ್ರಾಮದಿಂದ ಆಂದ್ರ ಗಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
170		ಬಾಗೇಪಲ್ಲಿ ತಾ॥ ಗೂಳೂರು ಮುಖ್ಯ ರಸ್ತೆಯಿಂದ ಚಿನ್ನೇಪಲ್ಲಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
171		ಬಾಗೇಪಲ್ಲಿ ತಾ॥ ತಿಮ್ಮಂಪಲ್ಲಿ ಗ್ರಾ॥ ಪಂ॥ ಕನ್ನಂಪಲ್ಲಿ ಹತ್ತಿರ ರಸ್ತೆ ಅಭಿವೃದ್ಧಿ ಕಾಮಗಾರಿ (ಬದಲಾವಣೆ ಕಾಮಗಾರಿ)	5.00
172		ಗುಡಿಬಂಡೆ ತಾ॥ ಗುಡಿಬಂಡೆ ಪಟ್ಟಣದಲ್ಲಿ ಬಸವನಕಟ್ಟೆ ನಿರ್ಮಾಣ ಕಾಮಗಾರಿ	20.00
173		ಗುಡಿಬಂಡೆ ತಾ॥ ತಿರುಪತಿ ಪಂ॥ ಜೆ.ಪಿ. ನಗರ (ಬೀಚಗಾನಹಳ್ಳಿ ಕ್ರಾಸ್) ದಲ್ಲಿ ಸಿ.ಸಿ. ರಸ್ತೆ ನಿರ್ಮಾಣ	4.75
ವಿಶೇಷ ಘಟಕ ಯೋಜನೆ			
174	2016–17	ಬಾಗೇಪಲ್ಲಿ ತಾ॥ ಗೊರ್ತಪಲ್ಲಿ ಗ್ರಾ॥ ಪಂ॥ ಗೊರ್ತಪಲ್ಲಿ ಗ್ರಾಮದ ವರದಪ್ಪನ ಕಾಲುವೆಗೆ ಚೆಕ್‌ಡ್ಯಾಂ ನಿರ್ಮಾಣ	3.25
175		ಬಾಗೇಪಲ್ಲಿ ತಾ॥ ಗೊರ್ತಪಲ್ಲಿ ಗ್ರಾ॥ ಪಂ॥ ದೊನಕೊಂಡ ಎಸ್.ಸಿ. ಕಾಲೋನಿಯಲ್ಲಿ ಗಂಗಣ್ಣ ಜಮೀನಿನ ಹತ್ತಿರ ಚೆಕ್‌ಡ್ಯಾಂ ನಿರ್ಮಾಣ	3.00
176		ಬಾಗೇಪಲ್ಲಿ ತಾಲ್ಲೂಕು ಪಾತುಪಾಳ್ಯ ಪರಿಶಿಷ್ಟ ಜಾತಿಯವರ ಕಾಲೋನಿಯಲ್ಲಿ ಸಮುದಾಯ ಭವನದ ಮುಂದೆ ಮೇಲ್ಚಾವಣಿ ಕಾಮಗಾರಿ (ಸವಿನಿ)	4.00
177	2017–18	ಬಾಗೇಪಲ್ಲಿ ತಾ॥ ಗುಟ್ಟಪಾಳ್ಯ ಕಾಲೋನಿಯ ಲಗುಮಯ್ಯ ಕುಂಟೆಗೆ ಹೋಗುವ ಕಾಲುವೆ ಅಭಿವೃದ್ಧಿ ಕಾಮಗಾರಿ	3.00
178		ಬಾಗೇಪಲ್ಲಿ ತಾ॥ ತಿಮ್ಮರಪಲ್ಲಿ ಗ್ರಾ॥ ಪಂ॥ ಬ್ರಾಹ್ಮಣರಹಳ್ಳಿಯಿಂದ ಯಗವ ಮದ್ದಲಖಾನೆ ಗ್ರಾಮದ ಕೆರೆಗೆ ಎಸ್.ಸಿ. ಜಮೀನಿನ ಬಳಿ ಹೋಗುವ ಕೆರೆಗೆ ಬರುವ ಕಾಲುವೆ ಅಭಿವೃದ್ಧಿ	3.00
179		ಬಾಗೇಪಲ್ಲಿ ತಾ॥ ಉಲ್ಲೋಡು ಗ್ರಾ॥ ಪಂ॥ ಚದುಮಲಬೆಟ್ಟದ ಎಸ್.ಸಿ. ಕಾಲೋನಿಯ ಸ.ನಂ. 88 ರ ಜಮೀನು ಸಮತಟ್ಟು ಕಾಮಗಾರಿ	3.25
180		ಬಾಗೇಪಲ್ಲಿ ತಾ॥ ಮಲ್ಲಸಂದ್ರ ಕಾಲೋನಿ ಮುಖ್ಯ ರಸ್ತೆಯಿಂದ ಸ್ಮಶಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿ	3.00
ಗಿರಿಜನ ಉಪಯೋಜನೆ			
181	2016–17	ಬಾಗೇಪಲ್ಲಿ ತಾ॥ ಕಾನಗಮಾಕಲಪಲ್ಲಿ ಗ್ರಾ॥ ಪಂ॥ ನಡಂಪಲ್ಲಿ ಬಯಪ್ಪ ಮನೆಯಿಂದ ಕೆರೆ ಕಾಲುವೆ ಅಭಿವೃದ್ಧಿ ಕಾಮಗಾರಿ	2.50
182	2017–18	ನಲ್ಲರೆಡ್ಡಿಪಲ್ಲಿ ಗ್ರಾ॥ ಪಂ॥ ಮೊಟಕಪಲ್ಲಿ ಕೆರೆಕೋಡಿ ಕಾಲುವೆ ಅಭಿವೃದ್ಧಿ ಕಾಮಗಾರಿ	3.00
183		ನಲ್ಲಗುಟ್ಟಪಲ್ಲಿ ಗ್ರಾ॥ ಪಂ॥ ಚಿಲಿಪಿಲಿಗಾರಪಲ್ಲಿ ಗ್ರಾಮದ ಕೆರೆ ಏರಿ ಅಭಿವೃದ್ಧಿ ಕಾಮಗಾರಿ	4.75

(I/C)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **289**

ಸದಸ್ಯರ ಹೆಸರು : ಶ್ರೀ ಅಂಗಾರ ಎಸ್. (ಸುಳ್ಯ)

ಉತ್ತರಿಸಬೇಕಾದ ದಿನಾಂಕ : **10-07-2018**

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಮಡಾವು ಎಂಬಲ್ಲಿ ಮಂಜೂರು ಮಾಡಿರುವ 110 ಕೆ.ವಿ. ಸ್ಟೇಷನ್ ಕಾಮಗಾರಿ ಯಾವ ಹಂತದಲ್ಲಿದೆ;	ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಮಡಾವು ಗ್ರಾಮದಲ್ಲಿ 110 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಮತ್ತು ಸಂಬಂಧಿಸಿದ ಪ್ರಸರಣ ಮಾರ್ಗವನ್ನು ನಿರ್ಮಿಸುವ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿತ್ತು. ಆದರೆ ಗುತ್ತಿಗೆದಾರರಿಂದ ಕಾಮಗಾರಿಯ ಪ್ರಗತಿಯು ಸಮರ್ಪಕವಾಗಿರದ ಕಾರಣ ವಿದ್ಯುತ್ ಉಪಕೇಂದ್ರದ ಗುತ್ತಿಗೆಯನ್ನು ರದ್ದುಪಡಿಸಿ ಪುನಃ ಹೊಸದಾಗಿ ಟೆಂಡರ್ ಕರೆದು ದಿನಾಂಕ 07-07-2018 ರಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.
ಆ)	ಈ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ;	ವಿದ್ಯುತ್ ಉಪಕೇಂದ್ರದ ಕಾಮಗಾರಿಗಳನ್ನು ಅಂದಾಜು ರೂ. 1438.13 ಲಕ್ಷಗಳ ವೆಚ್ಚದಲ್ಲಿ ಮೆ॥ ರೂಪ ಇಂಜಿನಿಯರಿಂಗ್ ಕಾರ್ಪೋರೇಷನ್, ಮಂಗಳೂರು ರವರಿಗೆ ವಹಿಸಿಕೊಡಲಾಗಿದೆ ಹಾಗೂ 110 ಕೆ.ವಿ ಪ್ರಸರಣ ಮಾರ್ಗದ ಕಾಮಗಾರಿಗಳನ್ನು ಅಂದಾಜು ರೂ 1455.52 ಲಕ್ಷಗಳ ವೆಚ್ಚದಲ್ಲಿ ಮೆ॥ ವೆನ್ಸರ್ ಕನ್ಸ್ಟ್ರಕ್ಷನ್ಸ್, ಹೈದರಾಬಾದ್ ರವರಿಗೆ ವಹಿಸಿಕೊಡಲಾಗಿದೆ.
ಇ)	ಇದರ ಅಂದಾಜು ವೆಚ್ಚ ಎಷ್ಟು;	
ಈ)	ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಿತ್ತು;	ವಿದ್ಯುತ್ ಉಪಕೇಂದ್ರದ ಕಾಮಗಾರಿಯನ್ನು ದಿನಾಂಕ:07-07-2018 ರಿಂದ 9 ತಿಂಗಳ ಕಾಲಮಿತಿಯಲ್ಲಿ (ದಿನಾಂಕ 06-04-2019 ರವರೆಗೆ) ಪೂರ್ಣಗೊಳಿಸಲು ಆದೇಶಿಸಲಾಗಿದೆ. 110 ಕೆ.ವಿ ಪ್ರಸರಣ ಮಾರ್ಗದ ಕಾಮಗಾರಿಯನ್ನು 24-06-2015 ರಲ್ಲಿ ಪೂರ್ಣಗೊಳಿಸಬೇಕಿತ್ತು, ಪ್ರಸರಣಾ ಮಾರ್ಗದ ನಿರ್ಮಾಣಕ್ಕಾಗಿ ಮಾರ್ಗದಡಿಯಲ್ಲಿ ಬರುವ ಭೂಮಾಲೀಕರು ಪ್ರತಿರೋಧಿಸಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಿದ್ದರಿಂದ ಕಾಮಗಾರಿಗಳು ವಿಳಂಬಗೊಂಡಿರುತ್ತವೆ.
ಉ)	ಎಷ್ಟು ಕಾಮಗಾರಿ ಪೂರ್ಣಗೊಂಡಿದೆ;	ವಿದ್ಯುತ್ ಉಪಕೇಂದ್ರದ ಕಾಮಗಾರಿಯನ್ನು ದಿನಾಂಕ:07-07-2018 ರಂದು ಗುತ್ತಿಗೆಯನ್ನು ವಹಿಸಿಕೊಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಿದೆ. ಪುತ್ತೂರು ತಾಲ್ಲೂಕಿನ ನೆಟ್ಲಮಡ್ನೂರು 220 ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಮಾಡಾವು 110 ಕೆವಿ ವಿದ್ಯುತ್ ಉಪಕೇಂದ್ರಕ್ಕೆ 27 ಕಿ.ಮೀ. ವಿದ್ಯುತ್ ಪ್ರಸರಣ ಮಾರ್ಗದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು ಒಟ್ಟು 115 ವಿದ್ಯುತ್ ಗೋಪುರಗಳ ಪೈಕಿ 113 ಗೋಪುರಗಳ ತಳಪಾಯ ಪೂರ್ಣಗೊಂಡಿದ್ದು, 105 ಗೋಪುರಗಳನ್ನು ಸ್ಥಾಪಿಸಲಾಗಿದ್ದು, 14.7ಕಿ.ಮೀ. ಪ್ರಸರಣಾ ಮಾರ್ಗದಲ್ಲಿ ತಂತಿ ಎಳೆಯುವ ಕಾಮಗಾರಿಗಳು ಪೂರ್ಣಗೊಂಡಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ.
ಊ)	ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು)	ವಿದ್ಯುತ್ ಉಪಕೇಂದ್ರದ ಕಾಮಗಾರಿಯನ್ನು ದಿನಾಂಕ:06-04-2019 ರೊಳಗಾಗಿ ಪೂರ್ಣಗೊಳಿಸಲು ಕಾರ್ಯಾದೇಶವನ್ನು ನೀಡಲಾಗಿದೆ. ಪ್ರಸರಣ ಮಾರ್ಗದ ಕಾಮಗಾರಿಗಳು ಅಕ್ಟೋಬರ್ 2018 ರೊಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಸಂಖ್ಯೆ: ಇಎನ್ 84 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 250
ಸದಸ್ಯರ ಹೆಸರು : ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್ (ಕಾಗವಾಡ)
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಕಾಗವಾಡ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಒಟ್ಟು ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಾಗವಾಡ ವಿಧಾನ ಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಜೂನ್ 2018ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು 2250 ಇದ್ದು, ಅವುಗಳ ವಿವರಗಳು ಕೆಳಕಂಡಂತಿದೆ:-

ಕ್ರ ಸಂ.	ಪರಿವರ್ತಕ ಸಾಮರ್ಥ್ಯ (ಕೆ.ವಿ.ಎ.ಗಳಲ್ಲಿ)	ಪರಿವರ್ತಕಗಳ ಸಂಖ್ಯೆ
1	25	870
2	63	814
3	100	539
4	250	27
	ಒಟ್ಟು	**2250**

	ಪ್ರಶ್ನೆ	ಉತ್ತರ
ಆ)	ಕಳೆದ ಒಂದು ವರ್ಷದಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುತ್ತವೆ ಅವುಗಳ ಸಾಮರ್ಥ್ಯ ಎಷ್ಟು; (ಕೆ.ವಿ. ವಿವರ ನೀಡುವುದು)	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಾಗವಾಡ ವಿಧಾನ ಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2017-18 ಮತ್ತು 2018-19ನೇ ಸಾಲಿನ ಜೂನ್ 18ರ ಅಂತ್ಯಕ್ಕೆ ವಿಫಲಗೊಂಡ ಪರಿವರ್ತಕಗಳ ಒಟ್ಟು **362** ಇದ್ದು, ಅವುಗಳ ವಿವರಗಳು ಕೆಳಕಂಡಂತಿದೆ:-

ಕ್ರ ಸಂ.	ಪರಿವರ್ತಕ ಸಾಮರ್ಥ್ಯ (ಕೆ.ವಿ.ಎ.ಗಳಲ್ಲಿ)	2017-18	2018-19ನೇ ಸಾಲಿನ ಜೂನ್ 18ರ ಅಂತ್ಯಕ್ಕೆ
1	25	88	7
2	63	141	12
3	100	98	14
4	250	2	0
	ಒಟ್ಟು	**329**	**33**

	ಪ್ರಶ್ನೆ	ಉತ್ತರ
ಇ)	ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳಿಗೆ ಎಷ್ಟು ದಿನಗಳಲ್ಲಿ ಪರ್ಯಾಯವಾಗಿ ದುರಸ್ತಿ ಮಾಡಿ ಪೂರೈಸಲಾಗುವುದು;	ನಗರ ಪ್ರದೇಶ, ಗ್ರಾಮ ಮತ್ತು ಕುಡಿಯುವ ನೀರು ಸರಬರಾಜು ಸ್ಥಾವರಗಳ ಪರಿವರ್ತಕಗಳು ವಿಫಲಗೊಂಡಲ್ಲಿ, ವಿಫಲಗೊಂಡ ಪರಿವರ್ತಕಗಳನ್ನು 24 ಗಂಟೆಯೊಳಗೆ ಬದಲಾಯಿಸಲಾಗುತ್ತಿದೆ. ಕೃಷಿ ಪಂಪ್‌ಸೆಟ್‌ಗಳ ಪರಿವರ್ತಕಗಳು ವಿಫಲಗೊಂಡಲ್ಲಿ 72 ಗಂಟೆಯೊಳಗೆ ಬದಲಾಯಿಸಲಾಗುತ್ತಿದೆ.

ಈ)	ಕಾಗವಾಡ ಮತಕ್ಷೇತ್ರದಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ತೆರೆಯಲಾಗಿದೆ; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು)	
ಉ)	ಸದರಿ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ಹಾಗೂ ಗುತ್ತಿಗೆದಾರರು ಸರಿಯಾಗಿ ಕೆಲಸ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾಗವಾಡ ಮತ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರವು ಸ್ಥಾಪನೆಯಾಗಿರುವುದಿಲ್ಲ. ಆದಾಗ್ಯೂ, ಕಾಗವಾಡ ಮತಕ್ಷೇತ್ರದಲ್ಲಿ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಅಥಣಿ ವಿಭಾಗದಲ್ಲಿರುವ ದುರಸ್ತಿ ಕೇಂದ್ರದಲ್ಲಿ ಕಾಲಮಿತಿಯಲ್ಲಿ ದುರಸ್ತಿಗೊಳಿಸಲಾಗುತ್ತಿದೆ.
ಊ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;	
ಋ)	ಇದರಿಂದ ರೈತರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಅಧಿಕಾರಿಗಳು ಮತ್ತು ಗುತ್ತಿಗೆದಾರರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?	

ಸಂಖ್ಯೆ: ಇಎನ್ 79 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	189
ಸದಸ್ಯರ ಹೆಸರು	:	ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಸರ್ಕಾರ ಪ್ರತಿ ವರ್ಷ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದೆ ಮತ್ತು ಎಷ್ಟು ಮೆಗಾವ್ಯಾಟ್ ವಿದ್ಯುತ್ ಬಳಕೆ ಮಾಡುತ್ತಿದೆ;</td><td>ಕಳೆದ 3 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಮೂಲಗಳಿಂದ ಉತ್ಪಾದಿಸಿದ ಮತ್ತು ಕೇಂದ್ರ ಘಟಕಗಳಿಂದ ಖರೀದಿಸಿದ ವಿದ್ಯುತ್ ಪ್ರಮಾಣ:
(ಮಿ.ಯೂ.ಗಳಲ್ಲಿ)
<table>
<tr><th></th><th>2015-16</th><th>2016-17</th><th>2017-18</th></tr>
<tr><td>ರಾಜ್ಯದ ಒಳಗಿನ ಉತ್ಪಾದನ ಮೂಲಗಳಿಂದ</td><td>44,671.80</td><td>42,754.89</td><td>42,378.05</td></tr>
<tr><td>ಕೇಂದ್ರ ವಿದ್ಯುತ್ ಘಟಕಗಳಿಂದ</td><td>16,929.55</td><td>22,888.62</td><td>22,512.66</td></tr>
<tr><td>ಒಟ್ಟು</td><td>61,601.35</td><td>65,643.51</td><td>64,890.71</td></tr>
</table>
ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್‌ನಲ್ಲಿ ಬಳಕೆಯಾಗಿರುವ ವಿದ್ಯುತ್ ಪ್ರಮಾಣ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಮಾರಾಟ (ಮಿ.ಯೂ.ಗಳಲ್ಲಿ)</th></tr>
<tr><td>2015-16</td><td>51,011.54</td></tr>
<tr><td>2016-17</td><td>54,096.34</td></tr>
<tr><td>2017-18</td><td>54,113.15</td></tr>
</table></td></tr>
<tr><td>ಆ)</td><td>ಪ್ರತಿ ವರ್ಷ ಸರ್ಕಾರ ಸರ್ಕಾರೇತರ ಮೂಲಗಳಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರೀದಿ ಮಾಡುತ್ತಿದೆ;</td><td>2017-18ನೇ ಸಾಲಿನಲ್ಲಿ ಸರ್ಕಾರೇತರ ಮೂಲಗಳಿಂದ ಖರೀದಿ ಮಾಡಲಾಗಿರುವ ವಿದ್ಯುತ್ತಿನ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಇ)</td><td>ಇದಕ್ಕೆ ಬಳಕೆ ಮಾಡುತ್ತಿರುವ ಅನುದಾನವೆಷ್ಟು;</td><td>ಸರ್ಕಾರದಿಂದ ವಿದ್ಯುತ್ ಖರೀದಿಗೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.</td></tr>
<tr><td>ಈ)</td><td>ರಾಜ್ಯಕ್ಕೆ ಕೊರತೆ ಇರುವ ವಿದ್ಯುತ್ ಪ್ರಮಾಣವೆಷ್ಟು;</td><td>ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ತಿನ ಪೂರೈಕೆಯಾಗುತ್ತಿದೆ.</td></tr>
<tr><td>ಉ)</td><td>ಈ ಕೊರತೆಯನ್ನು ನೀಗಿಸಲು ಸರ್ಕಾರದ ಮುಂದೆ ಇರುವ ಯೋಜನೆಗಳು ಯಾವುವು;</td><td>ಮುಂಬರುವ ದಿನಗಳಲ್ಲಿ ವಿದ್ಯುತ್ ಕೊರತೆ ಉಂಟಾದಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.

ವಿದ್ಯುತ್ ಕೊರತೆ ಪ್ರಮಾಣವನ್ನು ಅಂದಾಜಿಸಿ, ಕೆ.ಇ.ಆರ್.ಸಿ ರವರ ಅನುಮತಿ ಪಡೆದು ಮಧ್ಯಮಾವಧಿ/ಅಲ್ಪಾವಧಿ ಆಧಾರದಲ್ಲಿ ಟೆಂಡರ್ ಪ್ರಕ್ರಿಯೆ ಮೂಲಕ ವಿದ್ಯುತ್ ಖರೀದಿ ಮಾಡಲಾಗುವುದು.
ತಾತ್ಕಾಲಿಕ ವಿದ್ಯುತ್ ಕೊರತೆಯನ್ನು ನೀಗಿಸಲು ಎನರ್ಜಿ ಎಕ್ಸ್‌ಚೇಂಜ್ (IEX) ಮುಖಾಂತರ ಎಸ್ಕಾಂ ಕೋರಿಕೆಯ ಮೇರೆಗೆ ವಿದ್ಯುತ್ ಖರೀದಿ ಮಾಡಲಾಗುವುದು.
</td></tr>
</table>

		ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಹಲವು ದೀರ್ಘಾವಧಿ ಯೋಜನೆಗಳು ಹಾಗೂ ನವೀಕೃತ ಇಂಧನ ಯೋಜನೆಗಳನ್ನು ಕೈಗೊಳ್ಳಲಾಗಿದ್ದು, ವಿವರಗಳು ಕೆಳಕಂಡಂತಿವೆ. • 370 ಮೆಗಾವ್ಯಾಟ್ ಯಲಹಂಕ ಅನಿಲಾಧಾರಿತ ಯೋಜನೆಯ ಸ್ಥಾಪನೆ. • 5964 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗಳನ್ನು ಹಂಚಿಕೆ ಮಾಡಲಾಗಿದ್ದು, 3734 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳು ಅನುಷ್ಠಾನಗೊಂಡಿರುತ್ತದೆ. • ಪ್ರಸಕ್ತ ಸಾಲಿನಲ್ಲಿ ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಹಂಚಿಕೆ ಪ್ರಮಾಣ 555 ಮೆಗಾವ್ಯಾಟ್‌ಗಳನ್ನು ನಿರೀಕ್ಷಿಸಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹಲವು ವಿದ್ಯುತ್ ಬೇಡಿಕೆ ನಿರ್ವಹಣೆ ಕ್ರಮಗಳನ್ನು ಕೈಗೊಂಡಿದ್ದು, ವಿವರಗಳು ಕೆಳಕಂಡಂತಿವೆ. • star rated ವಿದ್ಯುತ್ ಉಪಕರಣಗಳ ಅಳವಡಿಕೆ. • star rated ವಿತರಣಾ ಪರಿವರ್ತಗಳ ಅಳವಡಿಕೆ. • ಹೆಚ್ಚು ಕಾರ್ಯಕ್ಷಮತೆಯುಳ್ಳ ನೀರಾವರಿ ಪಂಪ್‌ಸೆಟ್‌ಗಳ ಅಳವಡಿಕೆ. • LED ಬಲ್ಬ್‌ಗಳ ವಿತರಣೆ. • ಸೌರ ಮೇಲ್ಛಾವಣಿ ಬಳಕೆ. • ಅಲ್ಲದೇ, ವ್ಯವಸ್ಥೆ ಸುಧಾರಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೇಲೆ ತಿಳಿಸಿರುವ ಉಪಕ್ರಮಗಳ ಅನುಷ್ಠಾನದಿಂದ ವಿದ್ಯುತ್ ಬೇಡಿಕೆ ಪ್ರಮಾಣವು ಕಡಿಮೆಯಾಗಲಿದ್ದು, ವಿದ್ಯುತ್ ಕೊರತೆಯನ್ನು ನಿವಾರಿಸುವ ನಿರೀಕ್ಷೆಯಿದೆ.
ಊ)	ಈ ಕೊರತೆಯ ವಿದ್ಯುತ್ ಪ್ರಮಾಣವನ್ನು ಸರಿದೂಗಿಸಲು ರೈತರಿಗೆ ನೀಡಲಾಗುತ್ತಿರುವ ವಿದ್ಯುತ್‌ನಲ್ಲಿ ಪ್ರಸ್ತುತ ವರ್ಷ ವಿದ್ಯುತ್ ಕಡಿತಗೊಳಿಸುವ ಯೋಚನೆಗಳೇನಾದರೂ ಸರ್ಕಾರದ ಮುಂದೆ ಇದೆಯೇ;	ರೈತರಿಗೆ ಪೂರೈಸಲಾಗುತ್ತಿರುವ ವಿದ್ಯುತ್ತನ್ನು ಕಡಿತಗೊಳಿಸುವ ಯಾವುದೇ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ. ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕೃಷಿ ಪಂಪುಸೆಟ್ಟುಗಳಿಗೆ 7 ಗಂಟೆಗಳ 3 ಫೇಸ್ ವಿದ್ಯುತ್ತನ್ನು ಪೂರೈಸಲಾಗುತ್ತಿದೆ.
ಋ)	ರೈತರಿಗೆ ದಿನದ 24 ಗಂಟೆಗಳ ಕಾಲ ವಿದ್ಯುತ್ ವಿತರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?	ರಾಜ್ಯಾದ್ಯಂತ 24 ಗಂಟೆಗಳ ವಿದ್ಯುತ್ತನ್ನು ಪೂರೈಸಲು ಈಗಾಗಲೇ ಕೇಂದ್ರ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ "24x7 Power for All" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಡಿ ವಿದ್ಯುತ್ ಉತ್ಪಾದನೆ ಹೆಚ್ಚಳ, ಪ್ರಸರಣ ಹಾಗೂ ವಿತರಣಾ ಜಾಲ ಬಲವರ್ಧನೆ ಕಾರ್ಯವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಮಾರ್ಚ್–2019 ರ ವೇಳೆಗೆ ಎಲ್ಲಾ ಗ್ರಾಹಕರಿಗೆ ವಿದ್ಯುತ್ ಪೂರೈಸುವ ಸಾಮರ್ಥ್ಯವನ್ನು ವಿದ್ಯುತ್ ಜಾಲವು ಹೊಂದಲಿದೆ.

ಸಂಖ್ಯೆ: ಇಎನ್ 71 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 189ಕ್ಕೆ ಅನುಬಂಧ

2017-18 ನೇ ಸಾಲಿನಲ್ಲಿ ಸರ್ಕಾರೇತರ ಮೂಲಗಳಿಂದ ಖರೀದಿ ಮಾಡಲಾಗಿರುವ ವಿದ್ಯುತ್ತಿನ ವಿವರಗಳು

- ಅಲ್ಪಾವಧಿ ಆಧಾರದಲ್ಲಿ ಒಟ್ಟು 1000 ಮೆ.ವ್ಯಾ ವಿದ್ಯುತ್‌ನ್ನು ಖರೀದಿಸಲು, ದಿನಾಂಕ 28.08.2017 ರಂದು ಎರಡು ಪ್ರತ್ಯೇಕ ಟೆಂಡರ್ ಪ್ರಕಟಣೆ ಮೂಲಕ i) 500 ಮೆ.ವ್ಯಾ. ವಿದ್ಯುತ್‌ನ್ನು ದಕ್ಷಿಣ ವಲಯಗಳ ಉತ್ಪಾದಕರಿಂದ ನವೆಂಬರ್ 2017 ರಿಂದ 31.05.2018 ರವರೆಗೆ ಮತ್ತು ii) 500 ಮೆ.ವ್ಯಾ. ವಿದ್ಯುತ್‌ನ್ನು ಎಲ್ಲಾ ವಲಯಗಳ ಉತ್ಪಾದಕರಿಂದ ನವೆಂಬರ್ 2017 ರಿಂದ 31.05.2018 ರವರೆಗೆ ಖರೀದಿಸಲು ಟೆಂಡರ್‌ಗಳನ್ನು ಕರೆಯಲಾಗಿತ್ತು.

i) ದಕ್ಷಿಣ ವಲಯಗಳ ಉತ್ಪಾದಕರಿಂದ ಖರೀದಿಸಲು ಕರೆದಿದ್ದ ಟೆಂಡರ್ ಮುಖಾಂತರ 500 ಮೆ.ವ್ಯಾ. ವಿದ್ಯುತ್‌ನ್ನು ಖರೀದಿಸಲು ಕೆ.ಇ.ಆರ್.ಸಿ ಅನುಮತಿ ನೀಡಿದ್ದು ಈ ಕೆಳಕಂಡ ಕಂಪನಿಗಳಿಂದ ದಿನಾಂಕ 08.11.2017 ರಿಂದ ವಿದ್ಯುತ್ ಖರೀದಿಸಲಾಗಿದೆ.

ಕ್ರಮ ಸಂಖ್ಯೆ	ಕಂಪನಿಗಳ ಹೆಸರು	ವಿದ್ಯುತ್‌ನ ಪ್ರಮಾಣ (ಮೆ.ವ್ಯಾ.ಗಳಲ್ಲಿ)
1	ಗ್ಲೋಬಲ್ ಎನರ್ಜಿ ಪ್ರೈ ಲಿ ಸೆಂಬ್‌ಕಾರ್ಪ್‌ಗಾಯತ್ರಿ ಪವರ್ ಲಿಮಿಟೆಡ್	300
2	ಜೆ.ಎಸ್.ಡಬ್ಲ್ಯು.ಇ.ಎಲ್	200

ii) ಎಲ್ಲಾ ವಲಯಗಳ ಉತ್ಪಾದಕರಿಂದ ವಿದ್ಯುತ್ ಖರೀದಿಸಲು ಕರೆದಿದ್ದ ಟೆಂಡರ್ ಮುಖಾಂತರ 400 ಮೆ.ವ್ಯಾ ವಿದ್ಯುತ್ ಖರೀದಿಸಲು ಕೆ.ಇ.ಆರ್.ಸಿ ಅನುಮತಿ ನೀಡಿದ್ದು ಈ ಕೆಳಕಂಡ ಕಂಪನಿಗಳಿಂದ ದಿನಾಂಕ 14.11.2017 ರಿಂದ ವಿದ್ಯುತ್ ಖರೀದಿಸಲಾಗಿದೆ.

ಕ್ರಮ ಸಂಖ್ಯೆ	ಕಂಪನಿಗಳ ಹೆಸರು	ವಿದ್ಯುತ್‌ನ ಪ್ರಮಾಣ (ಮೆ.ವ್ಯಾ.ಗಳಲ್ಲಿ)
1	ಶ್ರೀ ಸಿಮೆಂಟ್ ಲಿ ರಾಜಸ್ಥಾನ (NR)	100
2	ಜೆ.ಎನ್.ಎಸ್.ಟಿ.ಪಿ.ಪಿ, ಮಧ್ಯ ಪ್ರದೇಶ (WR)	100
3	ಗ್ಲೋಬಲ್ ಎನರ್ಜಿ ಪ್ರೈ ಲಿ ಸೆಂಬ್ ಕಾರ್ಪ್‌ಗಾಯತ್ರಿ ಪವರ್ ಲಿಮಿಟೆಡ್	200

ದಿನಾಂಕ 31.05.2018 ಕ್ಕೆ ಒಪ್ಪಂದ ಅಂತ್ಯಗೊಂಡಿದ್ದು, ಹಾಲಿ ಯಾವುದೇ ವಿದ್ಯುತ್ ಖರೀದಿ ಮಾಡುತ್ತಿಲ್ಲ.

- ಒಂದು ವೇಳೆ ಮುಂಬರುವ ದಿನಗಳಲ್ಲಿ ವಿದ್ಯುತ್ ಕೊರತೆ ಉಂಟಾದಲ್ಲಿ ತಾತ್ಕಲಿಕ ವಿದ್ಯುತ್ ಕೊರತೆಯನ್ನು ನೀಗಿಸಲು ಎನರ್ಜಿ ಎಕ್ಸ್‌ಚೇಂಜ್ (IEX) ಮುಖಾಂತರ ಎಸ್ಕಾಂ ಕೋರಿಕೆಯ ಆದಾರದ ಮೇಲೆ ವಿದ್ಯುತ್ ಖರೀದಿ ಮಾಡಲಾಗುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150

ಸದಸ್ಯರ ಹೆಸರು : ಶ್ರೀ ಎಸ್.ಟಿ.ಸೋಮಶೇಖರ್ (ಯಶವಂತಪುರ)

ಉತ್ತರಿಸಬೇಕಾದ ದಿನಾಂಕ : 10-07-2018

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ತಾವರೆಕೆರೆ ಹೋಬಳಿಯಲ್ಲಿ 24*7 ವಿದ್ಯುತ್ ವಿತರಣೆಗೆ ಈ ಹಿಂದೆ ಸಲ್ಲಿಸಿದ್ದ ಪ್ರಸ್ತಾವನೆ ಯಾವ ಹಂತದಲ್ಲಿದೆ;	ತಾವರೆಕೆರೆ ಹೋಬಳಿ ವ್ಯಾಪ್ತಿಯಲ್ಲಿ ನೀರಾವರಿ ಪಂಪ್‌ಸೆಟ್ ಹೊರತುಪಡಿಸಿ ಉಳಿದ ಎಲ್ಲಾ ಗ್ರಾಹಕರಿಗೆ ದಿನವಹಿ ಸರಾಸರಿ 20 ಗಂಟೆಗಳ ವಿದ್ಯುತ್ ಪೂರೈಸಲಾಗುತ್ತಿದೆ.
ಆ)	ಬೆಂಗಳೂರು ನಗರಕ್ಕೆ ಹತ್ತಿರ ಇರುವ ಈ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಾಸವಾಗುವುದರಿಂದ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತಾವರೆಕೆರೆ ಹೋಬಳಿ ವ್ಯಾಪ್ತಿಯಲ್ಲಿ 3 ಸಂಖ್ಯೆಯ 66/11 ಕೆವಿ ಉಪಕೇಂದ್ರಗಳಾದ ತಾವರೆಕೆರೆ, ಚಂದ್ರಪ್ಪ ಸರ್ಕಲ್ ಮತ್ತು ತಿಪ್ಪಗೊಂಡನಹಳ್ಳಿಯಿಂದ ವಿದ್ಯುತ್ ಪೂರೈಸಲಾಗುತ್ತಿದೆ. ಸದರಿ ಉಪಕೇಂದ್ರಗಳಿಗೆ ವಿದ್ಯುತ್ ಪೂರೈಸುತ್ತಿರುವ 66 ಕೆವಿ ಪ್ರಸರಣಾ ಮಾರ್ಗವು ಅಧಿಕ ವಿದ್ಯುತ್ ಹೊರೆ ಹೊಂದಿದ್ದು, ವಿದ್ಯುತ್ ಹೊರೆಯನ್ನು ಕಡಿಮೆಗೊಳಿಸಲು ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
ಇ)	ತಾವರೆಕೆರೆ ಹೋಬಳಿಯಲ್ಲಿ ನಿರಂತರ ವಿದ್ಯುತ್ ಪೂರೈಕೆಯಾಗುವಂತೆ ಮೇಲ್ದರ್ಜೆಗೇರಿಸಲಾಗುವುದೇ?	• ಮಾಗಡಿ 220/66 ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಹೊಸದಾಗಿ ಮಾಗಡಿ-ಟಿ.ಜಿ.ಹಳ್ಳಿ 66 ಕೆ.ವಿ ಮಾರ್ಗವನ್ನು ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು ಡಿಸೆಂಬರ್ 2018ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. • ಚಂದ್ರಪ್ಪ ಸರ್ಕಲ್ 66/11ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಲೋಡ್ ಶೆಡ್ಡಿಂಗ್ ತಡೆಗಟ್ಟಲು ಕುಂಬಳಗೂಡಿನಲ್ಲಿ ಹೊಸದಾಗಿ 220/66 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ನಿರ್ಮಿಸಲಾಗುತ್ತಿದ್ದು ದಿನಾಂಕ 14.09.2019 ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ತಾವರೆಕೆರೆ ಹೋಬಳಿಯಲ್ಲಿನ ಪ್ರದೇಶಗಳಿಗೆ ವಿದ್ಯುತ್ ಪೂರೈಕೆಯು ಸುಧಾರಿಸಲಿದ್ದು, ಹೆಚ್ಚಿನ ಅವಧಿಯ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ.

ಸಂಖ್ಯೆ : ಇಎನ್ 68 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 248

ಸದಸ್ಯರ ಹೆಸರು : ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್ (ಕಾಗವಾಡ)

ಉತ್ತರಿಸಬೇಕಾದ ದಿನಾಂಕ : 10-07-2018

ಉತ್ತರಿಸುವವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಕಾಗವಾಡ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟ ಹಾಗೂ ಅಂಗವಿಕಲತೆಗೆ ಒಳಾಗಾಗಿರುವ ಜಾನುವಾರುಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಕಾಗವಾಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ವಿದ್ಯುತ್ ಸ್ಪರ್ಶಿಸಿ ಜಾನುವಾರುಗಳು ಮೃತಪಟ್ಟಿರುವುದು ಹಾಗೂ ಅಂಗವಿಕಲತೆಗೆ ಒಳಗಾಗಿರುವುದು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.
ಆ)	ಸದರಿ ಫಾಲನುಭವಿಗಳಿಗೆ ಸರ್ಕಾರದಿಂದ ಪರಿಹಾರ ಧನ ನೀಡಲಾಗಿದೆಯೇ;	
ಇ)	ಹಾಗಿದ್ದಲ್ಲಿ, ಫಲಾನುಭವಿಗಳಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು (ವರ್ಷವಾರು, ಫಲಾನುಭವಿಗಳ ಹೆಸರು ಮತ್ತು ವಿಳಾಸವನ್ನೊಳಗೊಂಡ ವಿವರ ನೀಡುವುದು);	
ಈ)	ಪರಿಹಾರ ಧನವನ್ನು ಇದುವರೆವಿಗೂ ಪಡೆಯದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;	
ಉ)	ಈ ರೀತಿ ವಿದ್ಯುತ್ ಅನಾಹುತಗಳಾಗಲು ಕಾರಣವೇನು;	ಜಾನುವಾರುಗಳಿಗೆ ವಿದ್ಯುತ್‌ನಿಂದ ಅನಾಹುತ ಉಂಟಾಗಲು ಮೂಲ ಕಾರಣಗಳು ಈ ಕೆಳಗಿನಂತಿವೆ:- 1) ಪರಿವರ್ತಕದ ಕಂಬಗಳು / ಗೈ / ಕಂಬಗಳಿಗೆ ಜಾನುವಾರುಗಳನ್ನು ಕಟ್ಟುವುದರಿಂದ. 2) ಜೋರಾಗಿ ಗಾಳಿ, ಮಳೆಯಿಂದ ಕಂಬಗಳು ಮುರಿದು ಬೀಳುವುದರಿಂದ. 3) ಗ್ರಾಹಕರು ಎಲ್.ಟಿ / ಹೆಚ್.ಟಿ ಲೈನ್‌ಗಳ ಕೆಳಗೆ ಜಾನುವಾರುಗಳನ್ನು ಕಟ್ಟುವುದರಿಂದ.

ಊ)	ಸದರಿ ಅನಾಹುತಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು)	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಾಗವಾಡ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಅಪಘಾತವನ್ನು ತಡೆಗಟ್ಟಲು ಈ ಕೆಳಕಂಡ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಕಳೆದ 3 ವರ್ಷಗಳಲ್ಲಿ ಹಳೆಯದಾದ / ಶಿಥಿಲಗೊಂಡ 53.45 ಕೀ.ಮಿ ಹೆಚ್.ಟಿ ಮಾರ್ಗದ ವಾಹಕವನ್ನು ಹೊಸ ರ್‍ಯಾಬಿಟ್ ವಾಹಕದಿಂದ ಬದಲಾಯಿಸಲಾಗಿದೆ. 2. ಕಳೆದ 3 ವರ್ಷಗಳಲ್ಲಿ ಹಳೆಯದಾದ / ಶಿಥಿಲಗೊಂಡ 78.335 ಕೀ.ಮಿ ಎಲ್.ಟಿ ಮಾರ್ಗದ ವಾಹಕವನ್ನು ಹೊಸ ವೀಸಲ್ ವಾಹಕದಿಂದ ಬದಲಾಯಿಸಲಾಗಿದೆ. 3. ಕಳೆದ 3 ವರ್ಷಗಳಲ್ಲಿ ಅಪಘಾತಕ್ಕಿಡಾಗಬಹುದಾದಂತಹ 85 ಸ್ಥಳಗಳನ್ನು ಗುರುತಿಸಿ (PMRA-Preventive Measures to Reduce Accidents) ಅವುಗಳಿಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. 4. DDUGJY ಯೋಜನೆ ಅಡಿಯಲ್ಲಿ 70.47 ಕೀ.ಮಿ ಹೆಚ್.ಟಿ ಮಾರ್ಗದ ವಾಹಕ ಬದಲಾಯಿಸುವ ಕಾರ್ಯವು ಪ್ರಗತಿಯಲ್ಲಿದೆ. 5. DDUGJY ಯೋಜನೆ ಅಡಿಯಲ್ಲಿ ಹೆಚ್.ಟಿ ಮಾರ್ಗಗಳಲ್ಲಿ 689 ಮಧ್ಯಂತರ ಕಂಬಗಳನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದೆ. 6. ಒಂದು ಬಾರಿ ನಿರ್ವಹಣಾ (One Time Maintenance) ಕಾಮಗಾರಿಯಲ್ಲಿ ಎಲ್.ಟಿ / ಹೆಚ್.ಟಿ ಕಂಬಗಳ ಅಂತರ ಹೆಚ್ಚಿರುವ ಸ್ಥಳಗಳಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವ ಹಾಗೂ ಶಿಥಿಲಗೊಂಡ ಕಂಬಗಳನ್ನು ಬದಲಾಯಿಸಲು 3000 ಕಂಬಗಳ ಸರ್ವೇ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸಕ್ತ ವರ್ಷದಲ್ಲಿ ಸುಮಾರು 1500-2000 ಕಂಬಗಳನ್ನು ಬದಲಾಯಿಸುವ ಗುರಿಯನ್ನು ಹೊಂದಲಾಗಿದೆ. ಇದಲ್ಲದೇ, 650 ಕಿ.ಮೀ. ಉದ್ದದ ವಿದ್ಯುತ್ ವಾಹಕಗಳನ್ನು ಬದಲಾಯಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 7. ಗ್ರಾಹಕರಿಗೆ ಎಲ್.ಟಿ / ಹೆಚ್.ಟಿ ಲೈನ್‌ಗಳ ಕೆಳಗೆ ಮತ್ತು ಪರಿವರ್ತಕ / ಗೈ / ಕಂಬಗಳಿಗೆ ಜಾನುವಾರುಗಳನ್ನು ಕಟ್ಟದಂತೆ ತಿಳಿಸಲು ಹೆಸ್ಕಾಂ ಕಛೇರಿಗಳಲ್ಲಿ ಮತ್ತು ಗ್ರಾಮದ ಮುಖ್ಯ ಸ್ಥಳಗಳಲ್ಲಿ ಭಿತ್ತಿ ಪತ್ರ ಲಗತ್ತಿಸಲಾಗಿದೆ.

ಸಂಖ್ಯೆ: ಇಎನ್ 78 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	270
ಸದಸ್ಯರ ಹೆಸರು	:	ಶ್ರೀ ಕೆ. ರಘುಪತಿ ಭಟ್ (ಉಡುಪಿ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಪ್ರಸ್ತುತ ಮಳೆಗಾಲದ ಸಂದರ್ಭದಲ್ಲಿ ಗಾಳಿ, ಮಳೆಗೆ ಮರಗಳು ಬಿದ್ದು, ವಿದ್ಯುತ್ ಸಮಸ್ಯೆಗಳು ಉಂಟಾಗುತ್ತಿರುವುದಕ್ಕೆ ತಕ್ಷಣದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಇಲಾಖೆಗೆ ಅಳವಡಿಸಿಕೊಂಡ ಕಾರ್ಯಕ್ರಮಗಳೇನು;	ಮಳೆಗಾಲ ಸಂದರ್ಭದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಮತ್ತು ವಿದ್ಯುತ್ ಜಾಲದ ನಿರ್ವಹಣೆಯಲ್ಲಿ ಉಂಟಾಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ಸಮರ್ಥವಾಗಿ ನಿಭಾಯಿಸಲು ಮುಂಗಾರು ಆಕಸ್ಮಿಕ ಯೋಜನೆಯನ್ನು (Monsoon Contingency Plan) ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲಾಗಿದ್ದು, ವಿವರಗಳು ಕೆಳಕಂಡಂತಿವೆ. • ಮಳೆಗಾಲದಲ್ಲಿ ಭಾರಿ ಗಾಳಿ ಮಳೆಯಿಂದಾಗಿ ವಿದ್ಯುತ್ ಕಂಬಗಳು ಉರುಳಿ ಮಾರ್ಗಗಳು ತುಂಡಾಗಿ ವಿದ್ಯುತ್ ಅಪಘಾತ ಸಂಭವಿಸಬಹುದಾದ ಸಾಧ್ಯತೆಗಳಿರುತ್ತವೆ. ಈ ರೀತಿಯ ಅಪಘಾತಗಳನ್ನು ತಪ್ಪಿಸಲು ನಿಯಮಿತವಾಗಿ ಮಾರ್ಗ ತಪಾಸಣೆ ನಡೆಸಿ ಜೋತು ಬಿದ್ದಿರುವ ಮಾರ್ಗಗಳನ್ನು ಎಳೆದುಕಟ್ಟುವುದು, ಹಳೆಯ/ ಸವಕಲುಗೊಂಡಿರುವ ಕಂಬಗಳನ್ನು ಬದಲಾಯಿಸುವುದು, ಅಪಾಯಕಾರಿ ಸ್ಥಿತಿಯಲ್ಲಿರುವ ಪರಿವರ್ತಕಗಳ ಮಾರ್ಗ ಬದಲಾವಣೆ ಮತ್ತು ನಿರ್ವಹಣಾ ಸಾಮಗ್ರಿಗಳನ್ನು ಕಾಲಕಾಲಕ್ಕೆ ಅಳವಡಿಸಿ 11 ಕೆವಿ ಮತ್ತು ಎಲ್‌ಟಿ ಮಾರ್ಗಗಳನ್ನು ಸುರಕ್ಷಿತ ರೀತಿಯಲ್ಲಿ ನಿರ್ವಹಣೆ ಮಾಡಲಾಗುವುದು. • ವಿತರಣಾ ಜಾಲದ ನಿರ್ವಹಣೆಗೆ ತುರ್ತು ಸಮಯದಲ್ಲಿ ಬೇಕಾಗುವ ಅಗತ್ಯ ಸಾಮಗ್ರಿಗಳಾದ ವಿದ್ಯುತ್ ಕಂಬಗಳು, ಪರಿವರ್ತಕಗಳು, ವಾಹಕಗಳು, ಇನ್ಸುಲೇಟರ್‌ಗಳು ಹಾಗೂ ಇತರೆ ಸಾಮಗ್ರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಉಗ್ರಾಣದಲ್ಲಿ ದಾಸ್ತಾನು ಇಟ್ಟುಕೊಳ್ಳಲಾಗುವುದು. • ಮಳೆಗಾಲದಲ್ಲಿ ಪರಿವರ್ತಕ ಕೇಂದ್ರದ ಸುತ್ತಲೂ ಮಳೆ ನೀರು ನಿಲ್ಲದಂತೆ ಮತ್ತು ಜಾನುವಾರುಗಳು ಓಡಾಡದಂತೆ ಮುಳ್ಳು ತಂತಿಬೇಲಿ ಅಳವಡಿಸುವ ವ್ಯವಸ್ಥೆ ಮಾಡಲಾಗುವುದು. • ಮಳೆಗಾಲದಲ್ಲಿ ಮಳೆ ಮತ್ತು ಗಾಳಿಗೆ, ಮರಗಳು ವಿದ್ಯುತ್ ತಂತಿಗಳ ಮೇಲೆ ಬೀಳುವ ಸಾಧ್ಯತೆ ಇರುವುದರಿಂದ ಮುಂಚಿತವಾಗಿಯೇ ಮರದ ಕೊಂಬೆಗಳನ್ನು ಕಡಿಯಲಾಗುವುದು. • ಪ್ರತಿ ಉಪವಿಭಾಗದ ಸೇವಾ ಕೇಂದ್ರದಲ್ಲಿ ಸಿಬ್ಬಂದಿಗಳ

		ನಿಯೋಜನೆ, ವಾಹನ ಸೌಕರ್ಯ, ತುರ್ತು ನಿರ್ವಹಣೆಗೆ ಬೇಕಾದ ಅಗತ್ಯ ಸಲಕರಣೆಗಳು ಇರುವಂತೆ ಖಾತ್ರಿ ಪಡಿಸಿಕೊಂಡು ಸೇವಾ ಕೇಂದ್ರಗಳನ್ನು ಸಜ್ಜುಗೊಳಿಸಲಾಗುವುದು ಹಾಗೂ ಸುರಕ್ಷತಾ ಸಲಕರಣೆ ಮುಂತಾದವುಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಸಿಬ್ಬಂದಿಗಳಿಗೆ ಸೂಚಿಸಲಾಗುತ್ತಿದೆ. • ಸ್ಥಿರ ದೂರವಾಣಿ, ಮೊಬೈಲ್ ಫೋನ್‌ಗಳನ್ನು ಸದಾ ಚಾಲನೆಯಲ್ಲಿಟ್ಟುಕೊಳ್ಳಲಾಗುವುದು. • ವಿದ್ಯುತ್ ಸಂಬಂಧಿತ ದೂರುಗಳನ್ನು ದಾಖಲಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೇವಾ ಕೇಂದ್ರಗಳ ದೂರವಾಣಿ ಸಂಖ್ಯೆ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಮೂಲಕ ತಿಳಿಸಲಾಗುವುದು.
ಆ)	ಗಾಳಿಗೆ. ವಿದ್ಯುತ್ ಕಂಬಗಳು ಉರುಳಿ ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸೂಕ್ತ ಪರಿಹಾರವನ್ನು ನೀಡಲು ಇಲಾಖೆ ಕೈಗೊಂಡ ಕ್ರಮಗಳೇನು:	ಗಾಳಿಗೆ ವಿದ್ಯುತ್ ಕಂಬಗಳು ಉರುಳಿ ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾದ ಸಂದರ್ಭದಲ್ಲಿ ಅಪಘಾತಕ್ಕೆ ಕಾರಣವನ್ನು ಸಂಬಂಧಪಟ್ಟ ವಿದ್ಯುತ್ ಪರಿವೀಕ್ಷಕ ಪ್ರಾಧಿಕಾರದವರಿಂದ ಧೃಢೀಕರಿಸಿಕೊಂಡ ನಂತರ, ಫಸಲು, ಆಸ್ತಿ, ಗೃಹೋಪಯೋಗಿ ಉಪಕರಣ ಹಾಗೂ ಮುಂತಾದವುಗಳ ನಷ್ಟವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಅಂದಾಜಿಸಿ ವಿದ್ಯುತ್ ಸರಬರಾಜು ಕಂಪನಿಗಳ ನಿಯಾಮಾನುಸಾರ ಪರಿಹಾರವನ್ನು ನೀಡಲಾಗುವುದು.
ಇ)	ಉಡುಪಿ ಜಿಲ್ಲೆಯಲ್ಲಿ ಕಳೆದ 2016 ರಿಂದ ಇಲ್ಲಿಯವರೆಗೆ ಗಾಳಿ ಮಳೆಯಿಂದ ವಿದ್ಯುತ್ ಕಂಬಗಳು ಉರುಳಿ ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;	ಉಡುಪಿ ಜಿಲ್ಲೆಯಲ್ಲಿ 2016 ರಿಂದ ಇಲ್ಲಿಯವರೆಗೆ ಗಾಳಿ ಮಳೆಯಿಂದ ವಿದ್ಯುತ್ ಕಂಬಗಳು ಉರುಳಿ ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾದ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.
ಈ)	ಸದರಿ ಪ್ರಕರಣಗಳಲ್ಲಿ ಎಷ್ಟು ಕುಟುಂಬಗಳಿಗೆ ಇಲಾಖೆಯಿಂದ ಪರಿಹಾರ ನೀಡಲಾಗಿದೆ? (ಜಿಲ್ಲಾವಾರು ಕುಟುಂಬಗಳ ಹೆಸರು, ಮೊತ್ತ ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು)	

ಸಂಖ್ಯೆ: ಇಎನ್ 81 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	126
ಸದಸ್ಯರ ಹೆಸರು	:	ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿದ್ಯುತ್ತಿನ ಗ್ರಿಡ್‌ಗಳನ್ನು ಯಾವ ಆಧಾರದ ಮೇಲೆ ಮಂಜೂರಾತಿ ಮಾಡಲಾಗಿದೆ;	ಗ್ರಾಮೀಣ ಪ್ರದೇಶಗಳೂ ಸೇರಿದಂತೆ ರಾಜ್ಯಾದ್ಯಂತ ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಕೆಳಕಂಡ ತಾಂತ್ರಿಕ ಅಂಶಗಳನ್ನು ಪರಿಗಣಿಸಲಾಗುತ್ತಿದೆ. • ಹಾಲಿ ಚಾಲನೆಯಲ್ಲಿರುವ ವಿದ್ಯುತ್ ಉಪಕೇಂದ್ರಗಳ ಮೇಲಿನ ಅಧಿಕ ವಿದ್ಯುತ್ ಹೊರೆ ಕಡಿಮೆ ಮಾಡಲು.
ಆ)	ಗ್ರಾಮೀಣ ಪ್ರದೇಶಕ್ಕೆ ವಿಶೇಷವಾಗಿರುವಂತಹ ಕಾರ್ಯಕ್ರಮಗಳೇನಾದರೂ ಇವೆಯೇ?	• ಮುಂಬರುವ ದಿನಗಳಲ್ಲಿ ವಿದ್ಯುತ್ ಬೇಡಿಕೆಯಲ್ಲಿನ ಏರಿಕೆ • ಅತಿ ಉದ್ದದ ವಿತರಣಾ ಮಾರ್ಗಗಳಿಂದ ಉಂಟಾಗುವ ವೋಲ್ಟೇಜ್ ಸಮಸ್ಯೆಯನ್ನು ನಿವಾರಿಸಲು ಹಾಗೂ ವಿದ್ಯುತ್ ನಷ್ಟ ಕಡಿಮೆ ಮಾಡಲು. ಮೇಲಿನ ಅಂಶಗಳನ್ನು ಪರಿಗಣಿಸಿ, ಪ್ರಸರಣ/ ವಿತರಣಾ ವ್ಯವಸ್ಥೆಯ ಅಧ್ಯಯನ ನಡೆಸಿ, ತಾಂತ್ರಿಕ ಸಮಿತಿಯ ಅನುಮೋದನೆ ಪಡೆದ ನಂತರ ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ, ಹಾಲಿ ಚಾಲನೆಯಲ್ಲಿರುವ ಉಪಕೇಂದ್ರಗಳ ಉನ್ನತೀಕರಣ ಹಾಗೂ ಪ್ರಸರಣ ಮಾರ್ಗಗಳ ರಚನೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಇಎನ್ 67 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಬಿ. ಶೇಖರ್ (ಹೊಸದುರ್ಗ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	121
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ	:	10.07.2018

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹೊಸದುರ್ಗ ತಾಲ್ಲೂಕಿನಲ್ಲಿ ವಿದ್ಯುತ್ ಮಗ್ಗಗಳ ನಿಗಮದಿಂದ ಎಷ್ಟು ಜನ ಫಲಾನುಭವಿಗಳಿಗೆ ನಿವೇಶನ / ಶೆಡ್ ನೀಡಲಾಗಿದೆ.	ಹೊಸದುರ್ಗ ತಾಲ್ಲೂಕಿನ ಜೋಡಿ ಶ್ರೀರಂಗಪುರ ಸರ್ವೆ ನಂ.60 ರಲ್ಲಿನ 8 ಎಕರೆ ಜಮೀನು ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಸ್ವಾಧೀನದಲ್ಲಿದ್ದು, ಈ ಪೈಕಿ 2.5 ಎಕರೆ ಜಮೀನಿನಲ್ಲಿ ಸುಮಾರು 100 ನಿವೇಶನಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ನಿಗಮದ ವತಿಯಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
ಆ)	ರಾಜ್ಯದಲ್ಲಿ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಎಷ್ಟು ಮೀಟರ್ ಸಮವಸ್ತ್ರ ಬಟ್ಟೆಯನ್ನು ನೇಕಾರರಿಗೆ ನೀಡಲಾಗಿದೆ.	2018-19ನೇ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ 70 ಲಕ್ಷ ಮೀ. ಸಮವಸ್ತ್ರ ಬಟ್ಟೆಯನ್ನು ಉತ್ಪಾದಿಸಿ ಸರಬರಾಜು ಮಾಡಲು ಕೆ.ಎಸ್.ಟಿ.ಐ.ಡಿ.ಸಿ. ಮತ್ತು ಕೆ.ಹೆಚ್.ಡಿ.ಸಿ. ನಿಗಮಗಳಿಗೆ ಶಿಕ್ಷಣ ಇಲಾಖೆಯಿಂದ ಆದೇಶ ನೀಡಲಾಗಿದೆ.
ಇ)	ಯಾವ್ಯಾವ ನಿಗಮಕ್ಕೆ ಎಷ್ಟೆಷ್ಟು ಮೀಟರ್ ಬಟ್ಟೆ ನೀಡಲಾಗಿದೆ.	1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಈ ಸಂಸ್ಥೆಗೆ 53 ಲಕ್ಷ ಮೀ. ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಆದೇಶ ನೀಡಲಾಗಿದೆ. 2. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಈ ಸಂಸ್ಥೆಗೆ 17 ಲಕ್ಷ ಮೀ. ಸಮವಸ್ತ್ರ ಬಟ್ಟೆ ಸರಬರಾಜು ಮಾಡಲು ಆದೇಶ ನೀಡಲಾಗಿದೆ.
ಈ)	ಇದರಲ್ಲಿ ನೇಕಾರರಿಗೆ ನೀಡಲಾದ ಬಟ್ಟೆಯ ವಿವರ ಎಷ್ಟು.	2018-19ನೇ ಸಾಲಿಗೆ ಒಟ್ಟು 70 ಲಕ್ಷ ಮೀ. ಬಟ್ಟೆಯನ್ನು ಉತ್ಪಾದಿಸುವಂತೆ ನೇಕಾರರಿಗೆ ಆದೇಶ ನೀಡಲಾಗಿದೆ.
ಉ)	ಹೊರಗಿನಿಂದ ಖರೀದಿಸಿದ ಬಟ್ಟೆ ಎಷ್ಟು.	2018-19ನೇ ಸಾಲಿಗೆ ಶಿಕ್ಷಣ ಇಲಾಖೆಯು ನೇರವಾಗಿ ಟೆಂಡರ್ ಮೂಲಕ ಹೊರಗಡೆಯಿಂದ 50 ಲಕ್ಷ ಮೀ. ಬಟ್ಟೆಯನ್ನು ಖರೀದಿಸಿರುತ್ತದೆ.
ಊ)	ಕಳೆದ 3 ವರ್ಷಗಳಲ್ಲಿ ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ. ಎಷ್ಟು ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸಲಾಗಿದೆ.	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೂತನ ಜವಳಿ ನೀತಿಯ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ ಒಟ್ಟಾರೆ 62782 ಜನರಿಗೆ ತರಬೇತಿಯನ್ನು ನೀಡಲಾಗಿದ್ದು, ಗ್ರೀನ್ ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಯೋಜನೆಯಡಿಯಲ್ಲಿ ಎರಡು ಟೆಕ್ಸ್‌ಟೈಲ್ ಪಾರ್ಕ್‌ಗಳನ್ನು ನಿರ್ಮಿಸಲಾಗಿದೆ. 1. ಮೆ॥ ಬೈನರಿ ಅಪಾರೆಲ್ ಪಾರ್ಕ್ ಪ್ರೈ ಲಿ., ಹಿರಿಯೂರು ತಾ॥, ಚಿತ್ರದುರ್ಗ ಜಿಲ್ಲೆ – ಯೋಜನೆ ಪೂರ್ಣಗೊಂಡಿದೆ. 2. ಮೆ॥ ಕುರ್ಣೆ ಟೆಕ್ಸ್‌ಟೈಲ್ ಪಾರ್ಕ್ ಪ್ರೈ ಲಿ., ಬುಗಟೆ-ಆಲೂರು ಗ್ರಾಮ, ಹುಕ್ಕೇರಿ ತಾ॥, ಬೆಳಗಾವಿ ಜಿಲ್ಲೆ – ಯೋಜನೆ ಅನುಷ್ಠಾನ ಹಂತದಲ್ಲಿದೆ.
ಋ)	ಎಷ್ಟು ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ತರಬೇತಿ ಪಡೆದ ಒಟ್ಟಾರೆ 57,225 ಜನರಿಗೆ ಹಲವಾರು ಜವಳಿ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗವನ್ನು ಕಲ್ಪಿಸಲಾಗಿದೆ.

ವಾಕೈ 58 ಜಕೈಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 660
ಸದಸ್ಯರ ಹೆಸರು : ಶ್ರೀ ರಾಜೇಶ್ ನಾಯಕ್ ಯು. (ಬಂಟ್ವಾಳ)
ಉತ್ತರಿಸಬೇಕಾದ ದಿನಾಂಕ : 10-07-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಬಂಟ್ವಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿರುವ ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ವೈರ್‌ಗಳು ತುಂಬಾ ಹಳೆಯದಾಗಿರುವುದರಿಂದ, ಜೀವಹಾನಿಯಾಗುವ ಸಂಭವ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ 2017-18 ಹಾಗೂ 2018-19ನೇ ಸಾಲಿನ ಜೂನ್ 18ರ ಅಂತ್ಯದವರೆಗೆ ಬದಲಾಯಿಸಿರುವ ಶಿಥಿಲವಾದ ವಿದ್ಯುತ್ ಕಂಬಗಳ ಹಾಗೂ ಹಳೆಯದಾದ ವಿದ್ಯುತ್ ತಂತಿಗಳ ವಿವರಗಳು ಕೆಳಗಿನಂತಿವೆ:- (see table below)
ಆ)	ಹಾಗಿದ್ದಲ್ಲಿ, ಸರ್ಕಾರದಿಂದ ಈ ಹಳೆಯ ವಿದ್ಯುತ್ ಕಂಬಗಳನ್ನು ಮತ್ತು ವಿದ್ಯುತ್ ವೈರ್‌ಗಳನ್ನು ತೆಗೆದು ಹೊಸದಾಗಿ ಅಳವಡಿಸಲಾಗುವುದೇ? (ಸಂಪೂರ್ಣ ವಿವರ ನೀಡುವುದು)	ಇದಲ್ಲದೇ, ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಳೆಯದಾದ ವಿದ್ಯುತ್ ಕಂಬಗಳನ್ನು ಹಾಗೂ ವಿದ್ಯುತ್ ತಂತಿಗಳನ್ನು ಬದಲಾಯಿಸಲು ರೂ.3162.10 ಲಕ್ಷ ಮೊತ್ತದ ಅಂದಾಜುಪಟ್ಟಿಗೆ ಮಂಜೂರಾತಿ ದೊರಕಿದ್ದು, ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಕ್ರ ಸಂ	ವಿವರ	ಪರಿಮಾಣ	ವರ್ಷ 2017-18 ಹೆಚ್.ಟಿ	ವರ್ಷ 2017-18 ಎಲ್.ಟಿ	ವರ್ಷ 2018-19 (ಜೂನ್ ಅಂತ್ಯದವರೆಗೆ) ಹೆಚ್.ಟಿ	ವರ್ಷ 2018-19 (ಜೂನ್ ಅಂತ್ಯದವರೆಗೆ) ಎಲ್.ಟಿ
1.	ವಿದ್ಯುತ್ ಕಂಬಗಳು	ಸಂಖ್ಯೆ	23	87	27	11
2.	ವಿದ್ಯುತ್ ತಂತಿಗಳು	ಕಿ.ಮೀ	20.37	104.71	-	16.04

ಸಂಖ್ಯೆ: ಇಎನ್ 86 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಟಿ.ವೆಂಕಟರಮಣಯ್ಯ (ದೊಡ್ಡಬಳ್ಳಾಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	254
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ	:	10.07.2018

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ದೊಡ್ಡಬಳ್ಳಾಪುರ ಮತ ಕ್ಷೇತ್ರದ ಜವಳಿ ಪಾರ್ಕ್ ನಲ್ಲಿ ಸಣ್ಣ ನೇಕಾರರ 90 ಮಾಲೀಕರಿದ್ದು, ಇವರಿಗೆ ಲೀಸ್ ಡೀಡ್ ಆಧಾರ ತೆರವುಗೊಳಿಸಿ ಶಾಶ್ವತ ನೋಂದಣಿ ಮಾಡಿ ಕೊಡಲು ವಿಳಂಬ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,	ದೊಡ್ಡಬಳ್ಳಾಪುರ ಅಪೆರೆಲ್ ಪಾರ್ಕ್‌ನ 48 ಎಕರೆ ಪ್ರದೇಶದಲ್ಲಿ ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಲಿ., ಎಂಬ ಎಸ್.ಪಿ.ವಿ ಕಂಪನಿಯು ಕೇಂದ್ರ ಪುರಸ್ಕೃತ ಯೋಜನೆಯಾದ ಸ್ಕೀಂ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (ಎಸ್‌ಐಟಿಪಿ) ಅಡಿಯಲ್ಲಿ ಜವಳಿ ಪಾರ್ಕ್ ಅನ್ನು 2006ರಲ್ಲಿ ಸ್ಥಾಪಿಸಲಾಗಿದ್ದು, ಇದು ಕಾರ್ಯ ನಿರ್ವಹಿಸುತ್ತಿದೆ. ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಎಂಬ ಎಸ್‌ಪಿವಿ ಕಂಪನಿಯವರು ಕೆಐಎಡಿಬಿ ವತಿಯಿಂದ ಲೀಸ್ ಆಧಾರದ ಮೇಲೆ ಭೂಮಿಯನ್ನು ಖರೀದಿಸಿ, 90 ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಿ, ಪಾರ್ಕಿನ ಸದಸ್ಯರಿಗೆ ಜವಳಿ ಕೈಗಾರಿಕೆ ಸ್ಥಾಪನೆಯ ಉದ್ದೇಶಕ್ಕಾಗಿ
ಆ.	ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಹಂಚಿಕೆ ಮಾಡಿರುತ್ತಾರೆ. ಇವುಗಳ ಪೈಕಿ 73 ಕೈಗಾರಿಕಾ ಶೆಡ್ಡುಗಳನ್ನು ಪಾರ್ಕಿನ ವತಿಯಿಂದಲೇ ನಿರ್ಮಿಸಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಶೆಡ್ಡುಗಳ ಪೈಕಿ 65 ಶೆಡ್ಡುಗಳಲ್ಲಿ ಜವಳಿ ಕೈಗಾರಿಕೆಗಳು ಸ್ಥಾಪನೆಯಾಗಿದ್ದು, ಉಳಿದ 08 ಶೆಡ್ಡುಗಳಲ್ಲಿ ಇನ್ನೂ ಕೈಗಾರಿಕೆಗಳು ಸ್ಥಾಪನೆಯಾಗಿರುವುದಿಲ್ಲ. ಕೆ.ಐ.ಎ.ಡಿ.ಬಿ. ಯಿಂದ ಎಸ್.ಪಿ.ವಿ ಕಂಪನಿಗೆ 2012ರಲ್ಲಿ ಭೂಮಿಯನ್ನು ಲೀಸ್ ಮುಖಾಂತರ ಹಸ್ತಾಂತರಿಸಲಾಗಿದೆ. ಕೆ.ಐ.ಎ.ಡಿ.ಬಿಯ ಮಾರ್ಗಸೂಚಿಯಂತೆ ಭೂಮಿ ಹಸ್ತಾಂತರಗೊಂಡ 6 ವರ್ಷಗಳ ನಂತರ ಹಾಗೂ ಪಾರ್ಕ್‌ಗೆ ಮಂಜೂರಾದ ಜಾಗದಲ್ಲಿ ಶೇ.50ರಷ್ಟು ಅಭಿವೃದ್ಧಿಗೊಂಡ ನಂತರ ಶಾಶ್ವತ ಸೇಲ್ ಡೀಡ್ ಮಾಡಿಸಿಕೊಳ್ಳಲು ಅವಕಾಶವಿರುತ್ತದೆ. ಅದರಂತೆ ಎಸ್.ಪಿ.ವಿ ಕಂಪನಿಯ ಸದಸ್ಯರಿಗೆ ಶಾಶ್ವತ ಸೇಲ್ ಡೀಡ್ ಪತ್ರವನ್ನು ನೋಂದಣಿ ಮಾಡಿಕೊಡಲು ಕೆ.ಐ.ಎ.ಡಿ.ಬಿ.ಯವರಿಗೆ ವಿನಂತಿಸಿಕೊಂಡಿರುತ್ತಾರೆ. ಅದರಂತೆ, ಬಾಕಿ ರೂ. 3.55 ಕೋಟಿ ಮೊತ್ತವನ್ನು ಕೆ.ಐ.ಎ.ಡಿ.ಬಿ.ಗೆ ಪಾವತಿಸಿದ್ದಲ್ಲಿ ಮಾತ್ರ ಶಾಶ್ವತ ಸೇಲ್ ಡೀಡ್ ಪತ್ರಗಳನ್ನು ನೋಂದಣಿ ಮಾಡಿಕೊಡಲಾಗುವುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಪಾರ್ಕ್‌ನ ಎಸ್.ಪಿ.ವಿ ಕಂಪನಿಯು ತಮ್ಮ ಸದಸ್ಯರುಗಳ ಸಭೆ ನಡೆಸಿ, ಪ್ರತಿ ಸದಸ್ಯರು ರೂ.4.00 ಲಕ್ಷದಂತೆ ಪಾವತಿಸಲು ತಿಳಿಸಿರುತ್ತಾರೆ. ಸದಸ್ಯರುಗಳು ಈ ಬಗ್ಗೆ ಕಾಲಾವಕಾಶ ಕೋರಿದ್ದು ತ್ವರಿತವಾಗಿ ಸದಸ್ಯರಿಂದ ಹಣ ಪಡೆದು, ಶಾಶ್ವತ ಸೇಲ್ ಡೀಡ್ ಮಾಡಿಕೊಡಲು ಕ್ರಮ ವಹಿಸಲಾಗುವುದೆಂದು ಎಸ್.ಪಿ.ವಿ ಕಂಪನಿಯ ಅಧ್ಯಕ್ಷರು ತಿಳಿಸಿರುತ್ತಾರೆ. ಈ ಬಗ್ಗೆ ಇಲಾಖೆಯು ಎಸ್.ಪಿ.ವಿ ಕಂಪನಿಗೆ ಶೀಘ್ರದಲ್ಲಿ ಕೆ.ಐ.ಎ.ಡಿ.ಬಿ ಗೆ ಹಣ ಪಾವತಿಸಲು ಸೂಚಿಸಿದೆ.

ಸಂಖ್ಯೆ: ವಾಕೈ 60 ಜಕೈಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 234
ಸದಸ್ಯರ ಹೆಸರು	: ಶ್ರೀ ಬಿ ಶ್ರೀರಾಮುಲು (ಮೊಳಕಾಲ್ಮೂರು)
ಉತ್ತರಿಸಬೇಕಾದ ದಿನಾಂಕ	: 10.07.2018
ಉತ್ತರಿಸುವವರು	: ಮುಖ್ಯಮಂತ್ರಿಯವರು

*****

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ಜಿಲ್ಲೆ, ಪಾವಗಡದಲ್ಲಿ ನಿರ್ಮಾಣವಾಗುತ್ತಿರುವ ಯೋಜನೆಗೆ ರೈತರ ಎಷ್ಟು ಜಮೀನನ್ನು ಭೋಗ್ಯಕ್ಕೆ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು)</td><td>ತುಮಕೂರು ಜಿಲ್ಲೆ, ಪಾವಗಡದಲ್ಲಿ ನಿರ್ಮಾಣವಾಗುತ್ತಿರುವ ಯೋಜನೆಗೆ ಸುಮಾರು 2000 ರೈತರಿಂದ ಅಂದಾಜು 12726 ಎಕರೆ ಜಮೀನನ್ನು 28 ವರ್ಷಗಳ ಅವಧಿಯವರೆಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. ರೈತರಿಗೆ ಪ್ರತಿ ಎಕರೆಗೆ ವರ್ಷಕ್ಕೆ ರೂ. 21,000/- ಗುತ್ತಿಗೆ ಹಣವನ್ನು ಪಾವತಿ ಮಾಡಲಾಗುವುದು. ಇದು ಪ್ರತಿ 2 ವರ್ಷಕ್ಕೆ ಮೂಲ ದರದಲ್ಲಿ ಶೇ. 5 ಏರಿಕೆ ಮಾಡಲಾಗುವುದು.</td></tr>
<tr><td>ಆ)</td><td>ಈ ಯೋಜನೆಯಿಂದ ಎಷ್ಟು ಪ್ರಮಾಣದ ವಿದ್ಯುತ್ ಶಕ್ತಿಯನ್ನು ಪಡೆಯಲಾಗುವುದು; ಈ ಯೋಜನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)</td><td>ಪಾವಗಡ ತಾಲ್ಲೂಕಿನಲ್ಲಿ 2000 ಮೆ.ವ್ಯಾ. ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಿ ಇದರಲ್ಲಿ 90% (1800ಮೆ.ವ್ಯಾ. ಸಾಮರ್ಥ್ಯದ) ವಿದ್ಯುತ್‌ನ್ನು ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಖರೀದಿಸಬೇಕಿರುತ್ತದೆ.</td></tr>
<tr><td></td><td></td><td>➢ ಮೆ॥ ಎನ್.ಟಿ.ಪಿ.ಸಿ. ವತಿಯಿಂದ 600 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿದೆ.
➢ ಕ್ರೆಡಲ್ ವತಿಯಿಂದ ಟೆಂಡರ್ ಕರೆಯಲಾಗಿದ್ದ 1200 ಮೆ.ವ್ಯಾ. ಸಾಮರ್ಥ್ಯದಲ್ಲಿ 550 ಮೆ.ವ್ಯಾ. ಸಾಮರ್ಥ್ಯವು ಏಪ್ರಿಲ್-2019ಕ್ಕೆ, 500ಮೆ.ವ್ಯಾ. ಸಾಮರ್ಥ್ಯವು ಜೂನ್-2019 ಕ್ಕೆ ಅನುಷ್ಠಾನಗೊಳ್ಳುವ ನಿರೀಕ್ಷೆಯಿದ್ದು, ಉಳಿದ 150 ಮೆ.ವ್ಯಾ. ಸಾಮರ್ಥ್ಯಕ್ಕೆ ಹಂಚಿಕೆ ನೀಡಬೇಕಿದೆ.
➢ ಮೆ॥ ಎಸ್.ಇ.ಸಿ.ಐ. ವತಿಯಿಂದ 200 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಹೊರ ರಾಜ್ಯಗಳಿಗೆ ಮಾರಾಟ ಮಾಡುವ ನಿರೀಕ್ಷೆಯಿದೆ.</td></tr>
<tr><td>ಇ)</td><td>ಈ ಯೋಜನೆಯನ್ನು ಯಾರಿಗೆ ಟೆಂಡರ್ ನೀಡಲಾಗಿದೆ; ಈ ಯೋಜನೆಯಿಂದ ರೈತರಿಗೆ ಯಾವ ರೀತಿಯಲ್ಲಿ ಅನುಕೂಲವಾಗಿದೆ;</td><td>ಖಾಸಗಿ ಸಂಸ್ಥೆಗಳಿಗೆ ನೇರವಾಗಿ ಪವರ್ ಪ್ಲಾಂಟ್‌ಗಳನ್ನು ಅಳವಡಿಸಲು ಅವಕಾಶ ಇರುವುದಿಲ್ಲ. ಆದರೆ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಎನ್.ಟಿ.ಪಿ.ಸಿ. ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ ಮತ್ತು ಕೆ.ಆರ್.ಇ.ಡಿ.ಎಲ್ ಆಹ್ವಾನಿಸಿದ ಟೆಂಡರುಗಳಲ್ಲಿ ಕನಿಷ್ಟ ಜಕಾತಿಯನ್ನು (Tariff) ನಮೂದಿಸಿದ ಖಾಸಗಿ ಸಂಸ್ಥೆಗಳಿಗೆ ಸೌರ ಘಟಕಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಡಲಾಗಿದೆ.

ಮೆ॥ ಎನ್.ಟಿ.ಪಿ.ಸಿ. ಸಂಸ್ಥೆಯು ಸ್ಪರ್ಧಾತ್ಮಕ ಟೆಂಡರ್ ಮುಖಾಂತರ ಕೆಳಕಂಡ ಖಾಸಗಿ ಸಂಸ್ಥೆಗಳನ್ನು 600 ಮೆ.ವ್ಯಾ. ಸಾಮರ್ಥ್ಯದ ಸೌರ ಘಟಕಗಳನ್ನು ಅನುಷ್ಠಾನಗೊಳಿಸಲು ಆಯ್ಕೆ ಮಾಡಲಾಗಿದ್ದು, ಜನವರಿ-2018ರ ಅಂತ್ಯಕ್ಕೆ ಎಲ್ಲಾ ಯೋಜನೆಗಳು ಅನುಷ್ಠಾನಗೊಂಡಿವೆ:

<table><tr><th>ಖಾಸಗಿ ಸಂಸ್ಥೆ</th><th>ಸಾಮರ್ಥ್ಯ ಮೆ.ವ್ಯಾ.</th></tr><tr><td>M/s. Parampujya Solar Energy Pvt Ltd.</td><td>150</td></tr><tr><td>M/s. Tata Power Renewable Energy Ltd</td><td>150</td></tr><tr><td>M/s. ACME Rewari Solar Power Pvt Ltd, &
M/s. ACME Kurukshetra Solar Energy Pvt Ltd</td><td>100</td></tr></table></td></tr>
</table>

M/s. FortumFinnSurya Energy Private Ltd	100
M/s. ReNew Wind Energy (TN2) Pvt Ltd,	50
M/s. Yarrow Infrastructure Ltd	50

ಕೆ.ಆರ್.ಇ.ಡಿ.ಎಲ್. ಸಂಸ್ಥೆಯು ಟೆಂಡರ್ ಮುಖಾಂತರ 1200 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದ್ದು, ಇದರಲ್ಲಿ 550 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಏಪ್ರಿಲ್ 2019 ರಿಂದ ಹಾಗೂ 500 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಜೂನ್-2019ಕ್ಕೆ ಅನುಷ್ಠಾನಗೊಳ್ಳುವ ನಿರೀಕ್ಷೆಯಿದೆ. ಉಳಿದ 150 ಮೆ.ವ್ಯಾ. ಸಾಮರ್ಥ್ಯಕ್ಕೆ ಹಂಚಿಕೆ ನೀಡಬೇಕಿದೆ.

ಖಾಸಗಿ ಸಂಸ್ಥೆ	ಸಾಮರ್ಥ್ಯ ಮೆ.ವ್ಯಾ. ನಲ್ಲಿ	ನಿರೀಕ್ಷಿತ ಚಾಲನಾ ದಿನಾಂಕ
M/s. ReNew Solar Power Pvt Ltd	300	ಏಪ್ರಿಲ್ 2019
M/s. Giriraj Renewables Pvt Ltd	150	ಏಪ್ರಿಲ್ 2019
M/s. Azure Power India Pvt Ltd	100	ಏಪ್ರಿಲ್ 2019
M/s. Tata Power Renewable Energy Pvt Ltd	250	ಜೂನ್-2019
M/s. Fortum Solar India Pvt Ltd	250	ಜೂನ್-2019

ಹಿಂದಿನ ವರ್ಷಗಳಲ್ಲಿ ಮಳೆಯ ಕೊರತೆಯಿಂದ ಈ ಭಾಗದ ರೈತರು ಬೆಳೆ ಕೈ ಸೇರದೆ ತೊಂದರೆ ಅನುಭವಿಸಿದರು. ಈ ಹಿನ್ನೆಲೆಯಲ್ಲಿ ರೈತರ ಹಿತದೃಷ್ಟಿಯಿಂದ ಜಮೀನನ್ನು ಗುತ್ತಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲು ಪರಿಗಣಿಸಲಾಗಿದೆ. ಇದರಿಂದ ಅನಾವೃಷ್ಟಿಯ ಬರಡು ಭೂಮಿಯಲ್ಲೂ ರೈತರಿಗೆ ಲಾಭ ಬರುವಂತಾಗಿದ್ದು, ಜೀವನ ನಿರ್ವಹಣೆ ಸುಗಮವಾಗಲಿದೆ.

ಈ)	ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ; (ವಿವರ ನೀಡುವುದು)	ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (MNRE), GOI ಪ್ರತಿ ಮೆ.ವ್ಯಾ.ಗೆ ರೂ. 12 ಲಕ್ಷ ಅಥವಾ ಡಿಪಿಆರ್‌ನ ವೆಚ್ಚದ ಶೇಕಡಾ 30 ಇವೆರಡರಲ್ಲಿ ಯಾವುದು ಕಡಿಮೆಯೋ ಆ ಅನುದಾನವನ್ನು ಪಾರ್ಕಿನ ಮೂಲಭೂತ ಸೌಕರ್ಯವನ್ನು ನಿರ್ಮಿಸಲು ನೀಡಲಾಗುವುದು. ಒಟ್ಟಾರೆ 240 ಕೋಟಿ ರೂಗಳ ಅನುದಾನವನ್ನು MNRE, GOI ಕೆ.ಎಸ್.ಪಿ.ಡಿ.ಸಿ.ಎಲ್. ಸಂಸ್ಥೆಗೆ ನೀಡಬೇಕಿರುತ್ತದೆ. ಇದರಲ್ಲಿ ಇದುವರೆಗೂ, MNRE, GOI ರೂ. 180 ಕೋಟಿಗಳನ್ನು ಕೆ.ಎಸ್.ಪಿ.ಡಿ.ಸಿ.ಎಲ್. ಸಂಸ್ಥೆಗೆ ಅನುದಾನವಾಗಿ ಬಿಡುಗಡೆ ಮಾಡಿದೆ.
ಉ)	ರಾಜ್ಯದಲ್ಲಿ ಸದರಿ ಯೋಜನೆಯನ್ನು ಬೇರೆಯಲ್ಲಾದರೂ ಆರಂಭಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ:	ಸದ್ಯಕ್ಕೆ ಇಂತಹ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.

ಸಂಖ್ಯೆ: ಇಎನ್ 75 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 662

ಸದಸ್ಯರ ಹೆಸರು : ಶ್ರೀ ರಾಜೇಶ್ ನಾಯಕ್ .ಯು (ಬಂಟ್ವಾಳ)

ಉತ್ತರಿಸಬೇಕಾದ ದಿನಾಂಕ : 10-07-2018

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆ, ಬಂಟವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಂಗಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಕಟ್ಟೆ ಪ್ರದೇಶದಲ್ಲಿ ವಿದ್ಯುತ್ ತಂತಿಗಳು ತುಂಬಾ ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಳೆಯ ವಿದ್ಯುತ್ ತಂತಿಗಳು ಕಡಿದು ಬಿದ್ದಿರುವುದರಿಂದ ಸಾರ್ವಜನಿಕರ ಜೀವಕ್ಕೆ ಹಾನಿಯಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2017-18 ಮತ್ತು 2018-19ನೇ ಸಾಲಿನ ಜೂನ್-18ರ ಅಂತ್ಯದವರೆಗೆ ಬಂಟ್ವಾಳ ವಿಭಾಗ ವ್ಯಾಪ್ತಿಯಲ್ಲಿ ಹಳೆಯ ವಿದ್ಯುತ್ ತಂತಿಗಳು ಕಡಿದು ಬಿದ್ದು, ಜೀವ ಹಾನಿಯಾದ ಪ್ರಕರಣಗಳು ದಾಖಲಾಗಿರುವುದಿಲ್ಲ.
ಇ)	ಇದಕ್ಕಾಗಿ, ಸರ್ಕಾರ ನೀಡಿದ ಪರಿಹಾರದ ಮೊತ್ತವೆಷ್ಟು; (ವಿವರ ನೀಡುವುದು)	
ಈ)	ಹಳೆಯ ವಿದ್ಯುತ್ ತಂತಿಗಳನ್ನು ಬದಲಾವಣೆ ಮಾಡುವ ಬಗ್ಗೆ ಸರ್ಕಾರದ ಕ್ರಮವೇನು? (ವಿವರ ನೀಡುವುದು)	ಕಾಲಕಾಲಕ್ಕೆ ಹಳೆಯದಾದ ವಿದ್ಯುತ್ ತಂತಿಗಳನ್ನು ಹೊಸ ವಿದ್ಯುತ್ ತಂತಿಗಳಿಂದ ಬದಲಾಯಿಸಲು ಆದ್ಯತೆಯ ಮೇರೆಗೆ ಕ್ರಮಕೈಗೊಳ್ಳಲಾಗುತ್ತಿದ್ದು, ಅದರಂತೆ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಸಂಗಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಕಟ್ಟೆ ಪ್ರದೇಶದಲ್ಲಿ ಹಾಲಿ ಇರುವ ಹಳೆಯದಾದ ವಿದ್ಯುತ್ ತಂತಿಗಳನ್ನು ಹೊಸ ತಂತಿಗಳಿಂದ ಬದಲಾಯಿಸಲು ರೂ.1465.72 ಲಕ್ಷಗಳಿಗೆ ತಯಾರಿಸಿದ್ದ ಅಂದಾಜುಪಟ್ಟಿಗೆ ಮಂಜೂರಾತಿ ದೊರೆತು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ತಂತಿ ಬದಲಾಯಿಸುವ ಕಾಮಗಾರಿಯನ್ನು ನಿರ್ವಹಿಸಲಾಗುವುದು. 2017-18ನೇ ಸಾಲಿನಲ್ಲಿ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಸಂಗಬೆಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯ ಸಿದ್ದಕಟ್ಟೆ ಪ್ರದೇಶದಲ್ಲಿ ಹಳೆಯದಾದ 9 ಎಲ್.ಟಿ. ವಿದ್ಯುತ್ ಕಂಬಗಳು ಮತ್ತು 6 ಕಿ.ಮೀ. ಉದ್ದದ ಎಲ್.ಟಿ. ವಿದ್ಯುತ್ ವಾಹಕಗಳನ್ನು ಬದಲಾಯಿಸಲಾಗಿರುತ್ತದೆ.

ಸಂಖ್ಯೆ: ಇಎನ್ 88 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ. ಸಿದ್ದು ಸವದಿ (ತೇರದಾಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	649
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ	:	10.07.2018

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬಾಗಲಕೋಟೆಯಲ್ಲಿ ಕೈಮಗ್ಗ (ಕೆ.ಹೆಚ್.ಡಿ.ಸಿ) ಮತ್ತು ಪವರ್‌ಲೂಂ ನೇಕಾರರ ಉದ್ಯೋಗ ಅವನತಿ ಅಂಚಿನಲ್ಲಿದ್ದು ಅದನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು, (ಸಂಪೂರ್ಣ ಮಾಹಿತಿ ಒದಗಿಸುವುದು)	ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ಕೈಮಗ ಅಭಿವೃದ್ಧಿ ನಿಗಮದಡಿ 2120 ಕಾರ್ಯನಿರತ ನೇಕಾರರಿದ್ದು, ಅವರುಗಳಿಗೆ ಕಚ್ಚಾ ನೂಲು ಮತ್ತು ಪರಿವರ್ತನಾ ದರಗಳನ್ನು ನೀಡುವುದರೊಂದಿಗೆ ನಿರಂತರ ಉದ್ಯೋಗವನ್ನು ನೀಡಲಾಗುತ್ತಿದೆ. ಅಲ್ಲದೇ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಪ್ರತಿ ವರ್ಷ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ನೇಕಾರರಿಗೆ ಉತ್ಪಾದನಾ ಪ್ರೋತ್ಸಾಹಧನ ನೀಡುವುದಕ್ಕಾಗಿ ಅನುದಾನವನ್ನು ನೀಡುತ್ತಿದೆ. ಕೈಮಗ್ಗ ಮತ್ತು ಜವಳ ಇಲಾಖೆಯಿಂದ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಅನುಷ್ಠಾನಗೊಳಸುತ್ತಿರುವ ವಿವಿಧ ಯೋಜನಾ ಸೌಲಭ್ಯಗಳು ಈ ಕೆಳಗಿನಂತಿವೆ.

ಕ್ರ ಸ	ಯೋಜನೆಗಳ ವಿವರ	ಕ್ರ. ಸ.	ಯೋಜನೆಗಳ ವಿವರ
	ಕೈಮಗ್ಗ ನೇಕಾರರಿಗೆ		
1	ಮಹಾತ್ಮಾ ಗಾಂಧಿ ಬುನಕರ ಬೀಮಾ ಯೋಜನೆ	9	ನೇಕಾರರ ವಿಶೇಷ ಪ್ಯಾಕೇಜ್ (KHDC)
2	ನೇಕಾರ ಕಲ್ಯಾಣ ಯೋಜನೆ	10	ಕಚ್ಚಾ ಮಾಲು ಖರೀದಿಗಾಗಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ
3	ಶಿಕ್ಷಾ ಸಹಯೋಗ ಯೋಜನೆ	11	ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ
4	ಮಿತವ್ಯಯ ನಿಧಿ ಯೋಜನೆ	12	ವಸತಿ ಕಾರ್ಯಗಾರ ಯೋಜನೆ
5	ನೇಕಾರರ ಅಧ್ಯಯನ ಪ್ರವಾಸ	13	ಉಣ್ಣೆ ವಲಯ ಯೋಜನೆ
6	ಶೇ.20ರಷ್ಟು ರಿಬೇಟ್ ಯೋಜನೆ	14	ಕೈಮಗ್ಗ ವಿಕಾಸ ಯೋಜನೆ
7	ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆ	15	ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ
8	ಶೇ.1 ಮತ್ತು 3ರ ಬಡ್ಡಿ ದರದಲ್ಲಿ ಸಾಲ		

ವಿದ್ಯುತ್ ಮಗ್ಗ ನೇಕಾರರಿಗೆ

ಕ್ರ. ಸಂ.	ಯೋಜನೆಗಳ ವಿವರ	ಕ್ರ. ಸಂ.	ಯೋಜನೆಗಳ ವಿವರ
1	ಗುಂಪು ವಿಮಾ ಯೋಜನೆ	8	ಶಿಕ್ಷಾ ಸಹಯೋಗ ಯೋಜನೆ
2	ನಾಟಿಂಗ್ ಮಿಷಿನ್ ಅಳವಡಿಕೆಗೆ ಸಹಾಯಧನ	9	ನೂತನ ಜವಳ ನೀತಿಯಡಿ ತರಬೇತಿ
3	ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ	10	ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಕೆಗೆ ಸಹಾಯಧನ
4	02 ವಿದ್ಯುತ್ ಮಗ್ಗ ಪೂರೈಸುವ ಯೋಜನೆ	11	ವಿದ್ಯುತ್‌ಮಗ್ಗಳಿಗೆ ಶೇರು ಬಂಡವಾಳ ಸಹಾಯ
5	ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ	12	ಗ್ರಾಮೀಣ ಪ್ರದೇಶದ ವಿದ್ಯುತ್ ಮಗ್ಗಗಳಿಗೆ ಸೌರಶಕ್ತಿ ಉಪಕರಣ ಗಳಿಗೆ ಶೇ.50 ರಷ್ಟು ಸಹಾಯಧನ.
6	ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಎಕ್ಸ್‌ಪ್ರೆಸ್ ಫೀಡರ್ ಸಹಾಯಧನ	13	ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣಕ್ಕಾಗಿ ಸಹಾಯಧನ
7	ವಸತಿ ವ ಕಾರ್ಯಾಗಾರ		

ಶೇ.20ರಷ್ಟು ರಿಬೇಟ್ ಯೋಜನೆಯಡಿ ಬಾಗಲಕೋಟೆ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ. 500.79 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ

ವಿದ್ಯುತ್ ಸಹಾಯಧನ ಯೋಜನೆಯಡಿ 5530 ಘಟಕಗಳಿಗೆ ವಿದ್ಯುತ್ ಸಹಾಯಧನ ನೀಡಲಾಗುತ್ತಿದೆ.

ಆ)	ತೇರದಾಳದಲ್ಲಿ ನೇಕಾರರ ಸಾಂದ್ರತೆ ಅತೀ ಹೆಚ್ಚಾಗಿದ್ದು, ಸಾಕಷ್ಟು ನೇಕಾರ ಯುವಕರು ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ತೇರದಾಳದಲ್ಲಿ ಹೆಚ್ಚಿನ ನೇಕಾರರು ಇರುವುದು ಗಮನಕ್ಕೆ ಬಂದಿದ್ದು, 2015-16, 2016-17 ಮತ್ತು 2017-18ನೇ ಸಾಲಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಮುಖಾಂತರ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.
ಇ)	ಸುಮಾರು 500 ಎಕರೆಯಲ್ಲಿ ಪವರ್‌ಲೂಂ ಪಾರ್ಕನ್ನು ಯಾವಾಗ ನಿರ್ಮಾಣ ಮಾಡಲಾಗುವುದು: (ಸಂಪೂರ್ಣ ಮಾಹಿತಿ ಒದಗಿಸುವುದು)	ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ರಬಕವಿಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪವರ್‌ಲೂಮ್ ಅಭಿವೃದ್ಧಿ ಪಡಿಸಲು ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ರಬಕವಿಯಲ್ಲಿ ಒಟ್ಟು 314-35 ಎಕರೆ ಜಮೀನನ್ನು ಭೂಸ್ವಾಧೀನಕ್ಕೆ ಒಳಪಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 109 ಎಸ್‌ಪಿಕ್ಯೂ 2011, ದಿ: 08-07-2011 ಕರ್ನಾಟಕ ರಾಜ್ಯ ಪತ್ರ ಪ್ರಕಟಿತ ದಿನಾಂಕ: 11-07-2011 ರಂತೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ದಿನಾಂಕ: 11-05-2016 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಜಮಖಂಡಿ ತಾಲ್ಲೂಕಿನ ರಬಕವಿ ಗ್ರಾಮದಲ್ಲಿ 314.35 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ಣಯಿಸಲಾಗಿದೆ. ಈ ಹಿನ್ನೆಲೆಯಲ್ಲಿ, ದಿನಾಂಕ: 13-03-2018 ರಂದು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಬಾಗಲಕೋಟ, ಅಭಿವೃದ್ಧಿ ಅಧಿಕಾರಿಗಳು, ಕೆ.ಐ.ಎ.ಡಿ.ಬಿ. ಬೆಳಗಾವಿ ಮತ್ತು ಉಪ ಅಭಿವೃದ್ಧಿ ಅಧಿಕಾರಿಗಳು, ಕೆ.ಐ.ಎ.ಡಿ.ಬಿ., ಬೆಳಗಾವಿ ಇವರೊಂದಿಗೆ ಜಂಟಿ ಸ್ಥಳ ತನಿಖೆ ಮಾಡಲಾಗಿದ್ದು, ಸ್ಥಳದಲ್ಲಿ ಕಂಡುಬಂದಂತೆ ಖಾತೆದಾರರಲ್ಲಿ ತಕರಾರು ಇರುತ್ತದೆ. ಈ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದ (ಪ್ರಕರಣ ಸಂಖ್ಯೆ 5017-2018/2008) ವಿಚಾರಣೆಯಲ್ಲಿ ಬಾಕಿ ಇರುವುದಾಗಿ ಪ್ರತಿ ಹಾಜರಪಡಿಸಿರುತ್ತಾರೆ.
ಈ)	ನೇಕಾರರಿಗೂ ಸಾಲಮನ್ನಾ ಮಾಡುವ ವ್ಯವಸ್ಥೆ ಮಾಡಲಾಗುವುದೇ: ಇಲ್ಲದಿದ್ದಲ್ಲಿ ಕಾರಣಗಳೇನು:	ಸರ್ಕಾರದ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ದಿನಾಂಕ: 13-12-2017ರ ಆದೇಶದ ಮೇರೆಗೆ ನೇಕಾರರು ಪಡೆದಂತಹ ಸಾಲದಲ್ಲಿ ದಿನಾಂಕ: 30.06.2017 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ.50,000/- (ಅಸಲು ಮತ್ತು ಬಡ್ಡಿ ಸೇರಿ) ನೇಕಾರರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿದೆ.
ಉ)	ನೇಕಾರರಿಗೂ ನಿವೇಶನ ಮತ್ತು ಮನೆಗಳನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು?	ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ನೇಕಾರರಿಗೆ ನಿವೇಶನ ಹಾಗೂ ಮನೆಗಳನ್ನು ನೀಡುವ ಯೋಜನೆ ಇರುವುದಿಲ್ಲ. ಆದರೆ ಸ್ವಂತ ನಿವೇಶನ ಹೊಂದಿರುವ ಅರ್ಹ ನೇಕಾರರಿಗೆ ಇಲಾಖೆಯ ವಸತಿ ಕಾರ್ಯಾಗಾರ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮದ ಸಹಯೋಗದೊಂದಿಗೆ ವಸತಿ ಕಾರ್ಯಾಗಾರ ನಿರ್ಮಾಣಕ್ಕಾಗಿ ಸಹಾಯಧನವನ್ನು ನೀಡಲಾಗುತ್ತಿದೆ.

ಸಂಖ್ಯೆ: ವಾಕೈ 58 ಜಕೈಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 649 ಕ್ಕೆ ಅನುಬಂಧ

2015-16 ನೇ ಸಾಲಿನಿಂದ 2017-18 ನೇ ಸಾಲಿನ ವರೆಗೆ ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ತೇರದಾಳ ಮತಕ್ಷೇತ್ರದಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳ ವಿವರ

ಕ್ರ. ಸಂ	ಯೋಜನೆಯ ಹೆಸರು	ಸಾಧನೆ	
		ಭೌತಿಕ	ಆರ್ಥಿಕ
ನೇಕಾರರ ವಸತಿ ಕಾರ್ಯಾಗಾರ ಯೋಜನೆಯಲ್ಲಿ ಸಹಾಯಧನ ಮಂಜೂರಾತಿ ನೀಡಿದ ವಿವರ			
2015-16 ಮತ್ತು 2016-17			
1	ತೇರದಾಳ	3	6.60
2	ಮಹಾಲಿಂಗಪೂರ	3	6.60
3	ರಬಕವಿ-ಬನಹಟ್ಟಿ	5	11.00
	ಒಟ್ಟು	11	24.20
2017-18			
1	ಆಸಂಗಿ	1	2.20
2	ಮಹಾಲಿಂಗಪೂರ	1	2.20
3	ರಬಕವಿ-ಬನಹಟ್ಟಿ	3	6.60
	ಒಟ್ಟು	5	11.00
ನೇಕಾರರ ವಿಶೇಷ ಪ್ಯಾಕೇಜ ಯೋಜನೆಯಲ್ಲಿ ಕೈಮಗ್ಗ/ಕೂಲಿ ವಿದ್ಯುತ್ ಮಗ್ಗ ನೇಕಾರರಿಗೆ ಶೇ 50 ರಷ್ಟು ಸಹಾಯಧನದಲ್ಲಿ 2 ವಿದ್ಯುತ್ ಮಗ್ಗ ನೀಡುವ ಯೋಜನೆ			
2015-16			
1	ಮಹಾಲಿಂಗಪೂರ	4	4.00
2	ಬನಹಟ್ಟಿ	10	10.00
3	ರಬಕವಿ	4	4.00
4	ರಾಮಪೂರ	5	5.00
6	ತೇರದಾಳ	3	3.00
7	ಆಸಂಗಿ	2	2.00
8	ನಾವಗಲಿ	2	2.00
	ಒಟ್ಟು	30	30.00
2016-17			
1	ಮಹಾಲಿಂಗಪೂರ	3	3.00
2	ಬನಹಟ್ಟಿ	6	6.00
3	ರಬಕವಿ	2	2.00
4	ರಾಮಪೂರ	2	2.00
8	ನಾವಗಲಿ	2	2.00
	ಒಟ್ಟು	15	15.00
2017-18			
1	ಮಹಾಲಿಂಗಪೂರ	1	1.00
2	ಬನಹಟ್ಟಿ	2	2.00
3	ತೇರದಾಳ	1	1.00
4	ರಾಮಪೂರ	1	1.00
	ಒಟ್ಟು	5	5.00
ವಿದ್ಯುತ್ ಮಗ್ಗ ನೇಕಾರರ ಪುರಸ್ಕೃತ ಗುಂಪು ವಿಮಾ ಯೋಜನೆಯಲ್ಲಿ ಭಾಗವಹಿಸಿದ ನೇಕಾರರ ಮಕ್ಕಳಿಗೆ ತಲಾ ರೂ. 1200-00 ಶಿಷ್ಯ ವೇತನ ವಿತರಿಸುವ ಯೋಜನೆ			
2015-16			
1	ಬನಹಟ್ಟಿ	1074	1288800.00

ಕ್ರ. ಸಂ	ಯೋಜನೆಯ ಹೆಸರು	ಸಾಧನೆ	
		ಭೌತಿಕ	ಆರ್ಥಿಕ
2	ರಬಕವಿ	361	433200.00
3	ಮಹಾಲಿಂಗಪೂರ	151	181200.00
4	ರಾಮಪೂರ	129	154800.00
5	ಹೊಸುರ	94	112800.00
6	ತೇರದಾಳ	141	169200.00
7	ಆಸಂಗಿ	46	55200.00
8	ನಾವಲಗಿ	30	36000.00
9	ಚಿಮ್ಮಡ	50	60000.00
	ಒಟ್ಟು	2076	2491200.00
2016-17			
1	ಬನಹಟ್ಟಿ	941	1129200.00
2	ರಬಕವಿ	293	351600.00
3	ಮಹಾಲಿಂಗಪೂರ	109	130800.00
4	ರಾಮಪೂರ	122	146400.00
5	ಹೊಸುರ	85	102000.00
6	ತೇರದಾಳ	106	127200.00
7	ಆಸಂಗಿ	55	66000.00
8	ನಾವಲಗಿ	22	26400.00
9	ಚಿಮ್ಮಡ	33	39600.00
	ಒಟ್ಟು	1766	2119200.00
ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋನೆಯಲ್ಲಿ ಸಹಾಯಧನ ಮಂಜೂರಾತಿ ನೀಡಿದ ವಿವರ 02 ವಿದ್ಯುತ್ ಮಗ್ಗ ಯೋಜನೆ			
2015-16			
1	ಬನಹಟ್ಟಿ	6	1350000.00
2	ರಬಕವಿ	1	225000.00
3	ರಾಮಪೂರ	1	225000.00
4	ನಾವಲಗಿ	1	225000.00
5	ಮಹಾಲಿಂಗಪೂರ	1	225000.00
	ಒಟ್ಟು	10	2025000.00
2016-17			
1	ಹೊಸುರ	8	1440000.00
2	ರಬಕವಿ	4	720000.00
3	ಮಹಾಲಿಂಗಪೂರ	2	360000.00
4	ಬನಹಟ್ಟಿ	5	900000.00
	ಒಟ್ಟು	19	3420000.00
2017-18			
1	ಬನಹಟ್ಟಿ	19	3420000.00
2	ರಬಕವಿ	5	900000.00
3	ಹೊಸುರ	2	360000.00
4	ಆಸಂಗಿ	2	360000.00
	ಒಟ್ಟು	28	5040000.00

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 116

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಉತ್ತರಿಸಬೇಕಾದ ದಿನಾಂಕ : 10-07-2018

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಬಬಲಾದಿ ಮಠದ ಆವರಣದಲ್ಲಿ ಘಟಪ್ರಭಾ ಪಿ.ಜಿ.ಹುಣಶ್ಯಾಳ ಮಾರ್ಗದಲ್ಲಿ 10 ಕೆ.ವಿ. ವಿದ್ಯುತ್ ಮಾರ್ಗದ 2 ಗೋಪುರಗಳು ಹಾಯ್ದು ಹೋಗಿರುವುದರಿಂದ ಧಾರ್ಮಿಕ ಕೇಂದ್ರದಲ್ಲಿ ಸಾರ್ವಜನಿಕರಿಗೆ ತೀವ್ರ ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ಮಠದ ಆವರಣದಲ್ಲಿರುವ ಗೋಪುರಗಳನ್ನು ಸ್ಥಳಾಂತರಿಸಲು ಸರ್ವೆಕಾರ್ಯವನ್ನು ನಡೆಸಿ, ಮಠದ ವತಿಯಿಂದ ಸ್ವಯಂ-ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ (Self Execution) ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪತ್ರಿಕೆಯನ್ನು ತಯಾರಿಸಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಗೆ ರೂ. 3,45,111 ಸೂಪರ್‌ವಿಷನ್ ಚಾರ್ಜಸ್ ಹಾಗೂ ರೂ.59,000 ಪ್ರೊಸೆಸ್ಸಿಂಗ್ ಚಾರ್ಜಸ್ ಮೊತ್ತವನ್ನು ಸಂದಾಯ ಮಾಡಿ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ 02-01-2018 ರಂದು ತಿಳಿಸಲಾಗಿರುತ್ತದೆ. ಆದರೆ, ಇದುವರೆಗೂ ಸದರಿ ಮೊತ್ತವನ್ನು ಸಂದಾಯ ಮಾಡಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಇದುವರೆಗೂ ಸ್ಥಳಾಂತರ ಮಾಡದಿರಲು ಕಾರಣಗಳೇನು;	
ಇ)	ಸದರಿ ಮಠದ ಆವರಣದಲ್ಲಿ ಅಮಾವಾಸ್ಯೆ, ಹುಣ್ಣಿಮೆ ಹಾಗೂ ಜಾತ್ರೆಗಳು ಪದೇ ಪದೇ ನಡೆಯುತ್ತಿರುತ್ತದೆ. ಅಲ್ಲದೇ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಜಂಗೀ ನಿಕಾಲಿ ಕುಸ್ತಿಗಳು ನಡೆಯುತ್ತಿರುವುದರಿಂದ ಈ ಜಾಗದಲ್ಲಿ ಸಾವಿರಾರು ಸಾರ್ವಜನಿಕರು ಸೇರುವ ಸಂದರ್ಭದಲ್ಲಿ ಸಾವುನೋವುಗಳು, ಅವಘಡಗಳು ಸಂಭವಿಸುವ ಸಾಧ್ಯತೆ ಇರುವುದಿಲ್ಲವೇ;	ಸಧ್ಯ ಚಾಲ್ತಿಯಲ್ಲಿರುವ ಸದರಿ ಮಾರ್ಗವು ನೆಲದಿಂದ ನಿಗದಿತ ಸುರಕ್ಷಿತ ಅಂತರದಲ್ಲಿರುತ್ತದೆ. ಆದ್ದರಿಂದ ಯಾವುದೇ ಸಾವು ನೋವುಗಳು, ಅವಘಡಗಳು ಸಂಭವಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಈ ಸ್ಥಳದಲ್ಲಿ ಧಾರ್ಮಿಕ ಆಚರಣೆಗಳು ಹಾಗೂ ಕ್ರೀಡೆಗಳು ನಡೆಯುವುದರಿಂದ ಆ ಸಂದರ್ಭದಲ್ಲಿ ಅವಘಡಗಳು, ಸಾವುನೋವುಗಳು ಉಂಟಾಗುವ ಮುನ್ನಾ ಸರ್ಕಾರವು ಸಾರ್ವಜನಿಕರ ಹಿತದೃಷ್ಟಿಯಿಂದ ಮಠವನ್ನು ಸ್ಥಳಾಂತರ ಬಗ್ಗೆ ಸರ್ಕಾರದ ನಿಲುವೇನು;	
ಉ)	ಸದರಿ ಮಠವು ಐತಿಹಾಸಿಕ ಹಿನ್ನಲೆಯುಳ್ಳ ಧಾರ್ಮಿಕ ಕೇಂದ್ರವಾಗಿದ್ದು, ಆರ್ಥಿಕವಾಗಿ ತೀರಾ ಹಿಂದುಳಿದಿರುವುದರಿಂದ, ನಿಗಮವು ಸೂಚಿಸಿರುವಂತೆ ಭಾರೀ ಮೊತ್ತದ ಹಣವನ್ನು ಪಾವತಿಸಿ ಸ್ಥಳಾಂತರಿಸಿಕೊಳ್ಳಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ, ಚಾಲ್ತಿಯಲ್ಲಿರುವ ನಿಗಮದ ನಿಯಮಗಳ ಪ್ರಕಾರ, ಸದರಿ ಕಾಮಗಾರಿಯನ್ನು ಸ್ವಯಂ-ಕಾರ್ಯನಿರ್ವಹಣೆ (Self Execution) ಅಡಿಯಲ್ಲಿ ಅಥವಾ ಡಿ.ಸಿ.ಡಬ್ಲು (Deposit Contribution work) ಅಡಿಯಲ್ಲಿ ಕೈಗೊಳ್ಳಲಾಗುವುದು.
ಊ)	ಹಾಗಿದ್ದಲ್ಲಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕೆ.ಪಿ.ಟಿ.ಸಿ.ಎಲ್. ನಿಗಮದ ವತಿಯಿಂದ ಸ್ಥಳಾಂತರ ವೆಚ್ಚವನ್ನು ಭರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	

ಸಂಖ್ಯೆ: ಇಎನ್ 64 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	288
ಸದಸ್ಯರ ಹೆಸರು	:	ಶ್ರೀ ಅಂಗಾರ ಎಸ್. (ಸುಳ್ಯ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಪುತ್ತೂರು ತಾಲ್ಲೂಕಿನ ನೆಟ್ಲಮಡ್ನೂರುವಿನಿಂದ ಸುಳ್ಯಕ್ಕೆ ಮಂಜೂರು ಮಾಡಿರುವ 110 ಕೆ.ವಿ. ಲೈನ್‌ನ ಕಾಮಗಾರಿಯನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ; ಯಾವಾಗ ನೀಡಲಾಗಿದೆ; ಇದರ ಅಂದಾಜು ವೆಚ್ಚವೆಷ್ಟು; ಯಾವ ಕಾಲಮಿತಿಯಲ್ಲಿ ಪೂರ್ತಿಗೊಳಿಸಬೇಕಿತ್ತು; ಯಾವ ಕಾಲಮಿತಿಯೊಳಗೆ ಪೂರ್ತಿಗೊಳಿಸಲಾಗುವುದು; (ಪೂರ್ಣ ವಿವರ ನೀಡುವುದು)	ಅನುಮೋದಿತ ವಿಸ್ತೃತ ಯೋಜನೆಯಂತೆ ನೆಟ್ಲಮಡ್ನೂರಿನಿಂದ ಸುಳ್ಯಕ್ಕೆ ಪ್ರಸರಣಾ ಮಾರ್ಗವನ್ನು ನಿರ್ಮಿಸಲು ಮೊದಲು ನೆಟ್ಲಮಡ್ನೂರಿನಿಂದ ಮಡಾವು ವಿದ್ಯುತ್ ಉಪಕೇಂದ್ರಕ್ಕೆ, ನಂತರ ಮಡಾವು ವಿದ್ಯುತ್ ಉಪಕೇಂದ್ರದಿಂದ ಸುಳ್ಯ ವಿದ್ಯುತ್ ಉಪಕೇಂದ್ರಕ್ಕೆ ಪ್ರಸರಣ ಮಾರ್ಗವನ್ನು ನಿರ್ಮಿಸಬೇಕಿದ್ದು, ಪ್ರಸ್ತುತ ನೆಟ್ಲಮಡ್ನೂರಿನಿಂದ ಮಡಾವು ವಿದ್ಯುತ್ ಉಪಕೇಂದ್ರಕ್ಕೆ 110 ಕೆವಿ ಪ್ರಸರಣ ಮಾರ್ಗದ ಕಾಮಗಾರಿಗಳು ಪ್ರಗತಿಯಲ್ಲಿದೆ. ಮಡಾವಿನಿಂದ ಸುಳ್ಯಕ್ಕೆ 110 ಕೆ.ವಿ ಲೈನ್‌ನ ನಿರ್ಮಾಣದ ಸರ್ವೇಕಾರ್ಯಕ್ಕಾಗಿ ಭೂಮಾಲೀಕರು ಆಕ್ಷೇಪಿಸಿದ್ದರಿಂದ ಟೆಂಡರ್ ಕರೆಯಲಾಗಿಲ್ಲ. ಆದ್ದರಿಂದ ಕಾಮಗಾರಿಯನ್ನು ಯಾರಿಗೂ ಗುತ್ತಿಗೆ ನೀಡಲಾಗಿಲ್ಲ. ಸದರಿ ಮಾರ್ಗದ ಸರ್ವೆ ಕಾರ್ಯವನ್ನು ನಡೆಸಲು ಭೂಮಾಲೀಕರು ಆಕ್ಷೇಪಿಸಿದ್ದರಿಂದ, ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಸಭೆಗಳು ನಡೆದು ಈಗ ಮಾರ್ಗವನ್ನು ಇತ್ಯರ್ಥಪಡಿಸಲಾಗಿದ್ದು, ಸದರಿ ಮಾರ್ಗದ ಯೋಜಣೆಯನ್ನು ಪೂರ್ಣಗೊಳಿಸಲಾಗಿದ್ದು, ಅಂದಾಜುಪಟ್ಟಿಯ ತಯಾರಿಕೆಯ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಸುಳ್ಯದಲ್ಲಿ ಹಾಲಿ ಇರುವ 2*5 ಎಂ.ವಿ.ಎ. 33/11 ಕೆವಿ ವಿದ್ಯುತ್ ಕೇಂದ್ರವನ್ನು 1*10 ಎಂ.ವಿ.ಎ. 110/33 ಕೆವಿ ಮತ್ತು 1*10 ಎಂ.ವಿ.ಎ. 110/11 ಕೆವಿ ಗೆ ಉನ್ನತೀಕರಿಸುವುದು ಹಾಗೂ ನೆಟ್ಲಮಡ್ನೂರುವಿನಿಂದ ಸುಳ್ಯಕ್ಕೆ 110 ಕೆವಿ ಪ್ರಸರಣ ಮಾರ್ಗದ ನಿರ್ಮಾಣಕ್ಕಾಗಿ 2010ರಲ್ಲಿ ಪರಿಷ್ಕೃತ ಯೋಜನಾ ವರದಿಗೆ ಮಂಜೂರಾತಿ ದೊರಕಿದ್ದು ಅಂದಾಜು ವೆಚ್ಚವು ರೂ. 1492.02 ಲಕ್ಷ ವಿಸ್ತೃತ ಯೋಜನಾ ವರದಿಯು 2010ರಲ್ಲಿ ಮಂಜೂರಾಗಿದ್ದರಿಂದ 2012-13 ರೊಳಗಾಗಿ ಸದರಿ ಯೋಜನೆಯು ಪೂರ್ಣಗೊಳ್ಳಬೇಕಾಗಿತ್ತು. ಸದರಿ ಪ್ರಸರಣಾ ಮಾರ್ಗದಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಾದ ದಾವೆಗಳು ಇತ್ಯರ್ಥಗೊಂಡಲ್ಲಿ ಹಾಗೂ ಸಾರ್ವಜನಿಕರಿಂದ ಬೇರೆ ಆಕ್ಷೇಪಣೆಗಳು ಬಾರದಿದ್ದಲ್ಲಿ ಹಾಗೂ ಸದರಿ ಪ್ರಸರಣಾ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುವುದರಿಂದ,-ಅರಣ್ಯ ಇಲಾಖೆಯು ಒಪ್ಪಿಗೆ ನೀಡಿದ್ದಲ್ಲಿ 2020 ರೊಳಗಾಗಿ ಪೂರ್ಣಗೊಳಿಸಬಹುದಾಗಿರುತ್ತದೆ.

ಆ)	110 ಕೆ.ವಿ. ಲೈನ್ ಕಾಮಗಾರಿಯನ್ನು ಪ್ರಾರಂಭ ಮಾಡಲಾಗಿದೆಯೇ; ಯಾವುದಾದರೂ ಸಮಸ್ಯೆಗಳಿವೆಯೇ; ಇದ್ದಲ್ಲಿ, ಯಾವ ಸಮಸ್ಯೆಗಳಿವೆ; ಸದರಿ ಕಾಮಗಾರಿ ಯಾವ ಹಂತದಲ್ಲಿದೆ? (ಪೂರ್ಣ ವಿವರ ನೀಡುವುದು)	ಹೌದು ನೆಟ್ಲಮುಡ್ನೂರಿನಿಂದ ಮಡಾವು ವಿದ್ಯುತ್ ಕೇಂದ್ರಕ್ಕೆ 110 ಕೆವಿ ಪ್ರಸರಣ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಮಡಾವಿನಿಂದ ಸುಳ್ಯಕ್ಕೆ ಉದ್ದೇಶಿತ ಪ್ರಸರಣಾ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುತ್ತಿದ್ದು 7.73 ಹೆಕ್ಟೆರ್ ಅರಣ್ಯ ಭೂಮಿಯ (ಸಾಮಾಜಿಕ ಅರಣ್ಯ, ರಕ್ಷಿತಾರಣ್ಯ) ಬಿಡುಗಡೆಗಾಗಿ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅರಣ್ಯ ಇಲಾಖೆಯಿಂದ ಮಂಜೂರಾತಿ ನೀಡಬೇಕಾಗಿರುತ್ತದೆ. ಸುಳ್ಯ 110 ಕೆವಿ ಮಾರ್ಗವನ್ನು ವಿರೋಧಿಸಿ ಪುತ್ತೂರು ನ್ಯಾಯಾಲಯದಲ್ಲಿ 02 ವ್ಯಾಜ್ಯಗಳು ಹಾಗೂ ಮಂಗಳೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ 02 ವ್ಯಾಜ್ಯಗಳು ದಾಖಲಾಗಿದ್ದು ಇತ್ಯರ್ಥವಾಗಿರುವುದಿಲ್ಲ. ಸದರಿ ಸಮಸ್ಯೆಗಳು ಬಗೆಹರಿದ ನಂತರ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಸಂಖ್ಯೆ: ಇಎನ್ 83 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	275
ಸದಸ್ಯರ ಹೆಸರು	:	ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸಬೇಕಾದ ದಿನಾಂಕ	:	10–07–2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಎಷ್ಟು ಮನೆಗಳನ್ನು ಗುರುತಿಸಲಾಗಿದೆ;</td><td>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಉಡುಪಿ ಜಿಲ್ಲೆಯಲ್ಲಿ 6612 ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3170 ವಿದ್ಯುತ್ ಸಂಪರ್ಕವಿಲ್ಲದ ಮನೆಗಳನ್ನು ಗುರುತಿಸಲಾಗಿದೆ.</td></tr>
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ

ಪ್ರಶ್ನೆ:

ಅ) ಬೆಂಗಳೂರು ಮಹಾನಗರ ಪ್ರದೇಶವೂ ಸೇರಿದಂತೆ ರಾಜ್ಯಾದ್ಯಂತ ತಮ್ಮದೇ ರೀತಿನೀತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಿ ಸ್ಕೂಲ್‌ಗಳು ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿನ ಪ್ರಿ ಸ್ಕೂಲ್‌ಗಳ ಸಂಖ್ಯೆಯೆಷ್ಟು; ಜಿಲ್ಲಾವಾರು ವಿವರ ಒದಗಿಸುವುದು;

ಆ) ನೋಂದಣಿಗೊಂಡ ಮತ್ತು ನೋಂದಣಿಯಾಗದ ಪ್ರಿ ಸ್ಕೂಲ್‌ಗಳ ಸಂಖ್ಯೆಯೆಷ್ಟು;(ವಿವರ ನೀಡುವುದು)

ಉತ್ತರ:

ಕ್ರೋಢಿಕೃತ ವಿವರ

	ನೋಂದಾಯಿತ ಶಾಲೆಗಳು	ನೋಂದಾಯಿಸದಿರುವ ಶಾಲೆಗಳು
ಬಿಬಿಎಂಪಿ ವ್ಯಾಪ್ತಿಯಲ್ಲಿನ ಪೂರ್ವ ಪ್ರಾಥಮಿಕ ಶಾಲೆಗಳು	3054	72
ಬಿ.ಬಿ.ಎಂ.ಪಿ ಹೊರತುಪಡಿಸಿ ರಾಜ್ಯದಲ್ಲಿರುವ ಪೂರ್ವ ಪ್ರಾಥಮಿಕ ಶಾಲೆಗಳು	9617	03
ಒಟ್ಟು =	12671	75

ಜಿಲ್ಲಾವಾರು ವಿವರವನ್ನು **ಅನುಬಂಧ**ದಲ್ಲಿರಿಸಿದೆ.

ಪ್ರಶ್ನೆ:

ಇ) ನೋಂದಣಿಗೊಳಗಾಗಲು ಶಿಕ್ಷಣ ಇಲಾಖೆಯವರು ವಿಧಿಸಿರುವ ಕಾನೂನು ನೀತಿನಿಯಮಗಳೇನು; ಅವುಗಳ ನಿಯಂತ್ರಣಕ್ಕಾಗಿ ಇಲಾಖೆಯು ಅನುಸರಿಸುತ್ತಿರುವ ಕ್ರಮಗಳೇನು;

ಈ) ನೋಂದಣಿಯನ್ನು ಕಡ್ಡಾಯಗೊಳಿಸುವುದರೊಂದಿಗೆ ಅತೀ ಚಿಕ್ಕಮಕ್ಕಳು ಇರುವ ಪ್ರಿ ಸ್ಕೂಲ್‌ಗಳಲ್ಲಿನ ಸುರಕ್ಷತೆ ಮತ್ತು ಸುವ್ಯವಸ್ಥೆ ಕುರಿತು ಕಟ್ಟುನಿಟ್ಟಾದ ಕ್ರಮ ನಿಯಮಗಳನ್ನು ಜಾರಿಗೊಳಿಸುವ ಕುರಿತಾದ ಇಲಾಖೆಯ ಪ್ರಸ್ತಾವನೆಗಳೇನು;

ಉತ್ತರ:

ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.709.ಪಿಜಿಸಿ.2017, ದಿನಾಂಕ:8-3-2018 ರಲ್ಲಿ ಶಾಲಾ ನೋಂದಣಿಗೆ ಸಂಬಂಧಿಸಿದಂತೆ ಪರಿಷ್ಕೃತ ನಿಯಮಗಳನ್ನು ರಚಿಸಲಾಗಿದೆ. ನಿಯಂತ್ರಣಕ್ಕಾಗಿ ನೋಂದಣಿ ಅಧಿಕಾರಿಯು ಮಕ್ಕಳ ಸುರಕ್ಷತಾ ಮಾನದಂಡಗಳನ್ನು ಹೊಂದಿರುವ ಸಂಸ್ಥೆಗಳಿಗೆ ಮಾತ್ರ ನೋಂದಾಯಿಸಲು ಕ್ರಮವಹಿಸಲಾಗುತ್ತಿದೆ.

ಈ ನಿಯಮಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳು ಸಹಾ ಒಳಗೊಂಡಿದ್ದು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿಯೂ ಸಹಾ ಮಕ್ಕಳ ಸುರಕ್ಷತೆ ಒದಗಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಪ್ರಶ್ನೆ:

ಉ) ಮಕ್ಕಳ ವಯೋ ಸಹಜ ಬೆಳವಣಿಗೆಗೆ ಪೂರಕ ಮತ್ತು ಪೋಷಕವಾದ ಶೈಕ್ಷಣಿಕ ಚಟುವಟಿಕೆಗಳು, ಸುರಕ್ಷತೆ ಮತ್ತು ಪೋಷಕರು ಹಾಗೂ ಪ್ರಿ ಸ್ಕೂಲ್‌ಗಳ ವ್ಯವಸ್ಥಾಪಕರುಗಳ ಹೊಣೆಗಾರಿಕೆ ಮತ್ತು ಜವಾಬ್ದಾರಿಗಳ ಕುರಿತು ಇಲಾಖೆಯು ಕಾನೂನು ರೀತ್ಯಾ ನೀತಿನಿಯಮಗಳನ್ನು ರೂಪಿಸಿದೆಯೇ?(ವಿವರ ಒದಗಿಸುವುದು)

ಉತ್ತರ:

ಹೌದು,

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016, ದಿನಾಂಕ:30-04-2016 ರಿಂದ ಜಾರಿಗೆ ಬಂದಿದ್ದು ಶಾಲೆ ಮತ್ತು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಶಾಲೆಯ ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡಬೇಕೆಂದು ನೀತಿಯನ್ನು ರೂಪಿಸಲಾಗಿದೆ. ಇದರಲ್ಲಿ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಅಳವಡಿಸಲಾಗಿದೆ.

ಇಡಿ 362 ಪಿಜಿಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಎನ್.ಎ.ಹ್ಯಾರೀಸ್ (ಶಾಂತಿನಗರ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 265ಕ್ಕೆ ಸಂಬಂಧಿಸಿದ ಅನುಬಂಧ [ರಾಜ್ಯದಲ್ಲಿ ನೋಂದಣಿಯಾದ/ನೋಂದಣಿಯಾಗದ ಪ್ರಿ ಸ್ಕೂಲ್‌ಗಳ ಅಂಕಿ-ಅಂಶಗಳ ವಿವರ]

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನೋಂದಣಿಯಾಗಿರುವ ಪ್ರಿ ಸ್ಕೂಲ್ ಶಾಲೆಗಳ ಸಂಖ್ಯೆ	ನೋಂದಣೀ ಅನುಮತಿಯನ್ನು ಪಡೆಯದೇ ನಡೆಸಲಾಗುತ್ತಿರುವ ಪ್ರಿ ಸ್ಕೂಲ್ ಶಾಲೆಗಳ ಸಂಖ್ಯೆ
1	ಬೆಂಗಳೂರು ಉತ್ತರ	76	0
2	ಬೆಂಗಳೂರು ದಕ್ಷಿಣ	339	3
3	ಬೆಂಗಳೂರು ಗ್ರಾಮಾಂತರ	246	0
4	ರಾಮನಗರ	224	0
5	ಕೋಲಾರ	324	0
6	ಚಿಕ್ಕಬಳ್ಳಾಪುರ	198	0
7	ತುಮಕೂರು	234	0
8	ಮಧುಗಿರಿ	114	0
9	ಚಿತ್ರದುರ್ಗ	315	0
10	ದಾವಣಗೆರೆ	621	0
11	ಶಿವಮೊಗ್ಗ	401	0
12	ಮೈಸೂರು	632	0
13	ಮಂಡ್ಯ	334	0
14	ಹಾಸನ	288	0
15	ಚಿಕ್ಕಮಗಳೂರು	203	0
16	ಕೊಡಗು	93	0
17	ದಕ್ಷಿಣ ಕನ್ನಡ	323	0
18	ಉಡುಪಿ	128	0
19	ಚಾಮರಾಜ ನಗರ	125	0
20	ಬೆಳಗಾವಿ	374	0
21	ಚಿಕ್ಕೋಡಿ	514	0
22	ಬಾಗಲಕೋಟೆ	792	0
23	ವಿಜಯಪುರ	518	0
24	ಧಾರವಾಡ	315	0

25	ಗದಗ	169	0
26	ಹಾವೇರಿ	231	0
27	ಉತ್ತರ ಕನ್ನಡ	88	0
28	ಶಿರಸಿ	82	0
29	ಕಲಬುರಗಿ	152	0
30	ಬೀದರ್	120	0
31	ಯಾದಗಿರಿ	112	0
32	ರಾಯಚೂರು	339	0
33	ಬಳ್ಳಾರಿ	291	0
34	ಕೊಪ್ಪಳ	302	0
	ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ನೋಂದಣಿಗೊಂಡಿರುವ/ನೋಂದಣಿ ಆಗದಿರುವ ಪ್ರಿ ಸ್ಕೂಲ್‌ಗಳ ವಿವರ		
35	ಬೆಂಗಳೂರು ಉತ್ತರ	1089	32
36	ಬೆಂಗಳೂರು ದಕ್ಷಿಣ	1965	40

ಕರ್ನಾಟಕ ವಿಧಾನ ಸಭೆ ಸದಸ್ಯರು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 681

ಸದಸ್ಯರ ಹೆಸರು : ಶ್ರೀ. ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ)

ಉತ್ತರಿಸಬೇಕಾದ ದಿನಾಂಕ : 10.07.2018

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಬೈಲಹೊಂಗಲ ಮತ ಕ್ಷೇತ್ರದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಹುದ್ದೆಗಳು ಮಂಜೂರಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಯಾವ ಯಾವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹುದ್ದೆಗಳು ಮಂಜೂರಾಗಿರುವುದಿಲ್ಲ:	ಒಟ್ಟು 29 ಶಾಲೆಗಳಲ್ಲಿ ಆಂಗ್ಲ ಭಾಷಾ ಹುದ್ದೆಗಳು ಮಂಜೂರಾಗಿರುವುದಿಲ್ಲ (ಅನುಬಂಧ-1 ಲಗತ್ತಿಸಿದೆ.)
ಇ.	ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ರಾಜ್ಯದ ಪ್ರೌಢ ಶಾಲೆಗಳಲ್ಲಿ ಆಂಗ್ಲ ಭಾಷಾ ಹುದ್ದೆ ಮಂಜೂರಾಗದೇ ಇರುವ ಪ್ರೌಢ ಶಾಲೆಗಳಿಗೆ . ಜಿಲ್ಲೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿರುವ ಪ್ರೌಢ ಶಾಲಾ ಸಹಶಿಕ್ಷಕರ ಹುದ್ದೆಗಳನ್ನು ಅಗತ್ಯಕ್ಕನುಗುಣವಾಗಿ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರು ಮಾಡಿ ಸದರಿ ಹುದ್ದೆಗಳನ್ನು ಬಡ್ತಿ, ವರ್ಗಾವಣೆ ಅಥವಾ ನೇರನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗಿದೆ.

ಸಂಖ್ಯೆ: ಇಡಿ 117 ಎಸ್‌ಓಹೆಚ್ 2018

(ಎನ್.ಮಹೇಶ್)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಅನುಬಂಧ-1

ಬೆಳಗಾವಿ ಜಿಲ್ಲೆಗೆ ಅಗತ್ಯವಿರುವ ಆಂಗ್ಲ ಶಿಕ್ಷಕ ಹುದ್ದೆಗಳ ವಿವರ (ಹುದ್ದೆ ಮಂಜೂರಾಗಿರುವುದಿಲ್ಲ)

ಕ್ರ.ಸಂ	ತಾಲೂಕ	ಆಂಗ್ಲ ಶಿಕ್ಷಕರ ಹುದ್ದೆ ಇಲ್ಲದಿರುವ ಶಾಲೆಗಳ ಹೆಸರು ಮತ್ತು ವಿಳಾಸ
1	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ತುಕರಶೀಗಿಹಳ್ಳಿ ತಾ: ಬೈಲಹೊಂಗಲ
2	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ತುರಮುರಿ ತಾ: ಬೈಲಹೊಂಗಲ
3	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಚಿಕ್ಕಬೆಳ್ಳಿಕಟ್ಟಿ ತಾ: ಬೈಲಹೊಂಗಲ
4	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಚಿಕ್ಕ ಬಾಗೇವಾಡಿ ತಾ: ಬೈಲಹೊಂಗಲ
5	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಅಮಟೂರ ತಾ: ಬೈಲಹೊಂಗಲ
6	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಹಣ್ಣಿಕೇರಿ ತಾ: ಬೈಲಹೊಂಗಲ
7	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಮೇಕಲಮರಡಿ ತಾ: ಬೈಲಹೊಂಗಲ
8	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಮಾಸ್ತಮರಡಿ ತಾ: ಬೈಲಹೊಂಗಲ
9	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಮಲ್ಲಾಪೂರ ಕೆ. ಎನ್ ತಾ: ಬೈಲಹೊಂಗಲ
10	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಲಕ್ಕುಂಡಿ ತಾ: ಬೈಲಹೊಂಗಲ
11	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಅನಿಗೋಳ ತಾ: ಬೈಲಹೊಂಗಲ
12	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಬೂದಿಹಾಳ ತಾ: ಬೈಲಹೊಂಗಲ
13	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಉರ್ದು ಕಿತ್ತೂರ ತಾ: ಬೈಲಹೊಂಗಲ
14	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಕನ್ನಡ ಬೈಲಹೊಂಗಲ ತಾ: ಬೈಲಹೊಂಗಲ
15	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಸಾಣಿಕೊಪ್ಪ ತಾ: ಬೈಲಹೊಂಗಲ
16	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಹೊಳಿಹೊಸೂರ ತಾ: ಬೈಲಹೊಂಗಲ
17	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಕತ್ರಿದಡ್ಡಿ ತಾ: ಬೈಲಹೊಂಗಲ
18	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಹೂಲಿಕಟ್ಟಿ ತಾ: ಬೈಲಹೊಂಗಲ
19	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಮರಿಕಟ್ಟಿ ತಾ: ಬೈಲಹೊಂಗಲ
20	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಹಣಬರಟ್ಟಿ ತಾ: ಬೈಲಹೊಂಗಲ
21	ಬೈಲಹೊಂಗಲ	ಸರ್ಕಾರಿ ಪ್ರೌಢ ಶಾಲೆ ಬೆಳವಡಿ ತಾ: ಬೈಲಹೊಂಗಲ
22	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಮಲ್ಲೂರ ತಾ: ಸವದತ್ತಿ
23	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಹೂಲಿ ತಾ: ಸವದತ್ತಿ
24	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಮುನವಳ್ಳಿ ತಾ: ಸವದತ್ತಿ
25	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಮದ್ಲೂರ ತಾ: ಸವದತ್ತಿ
26	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಅರ್ಟಿಗಲ್ ತಾ: ಸವದತ್ತಿ
27	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಚಿಕ್ಕುಂಬಿ ತಾ: ಸವದತ್ತಿ
28	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಶಿಂದೋಗಿ ತಾ: ಸವದತ್ತಿ
29	ಸವದತ್ತಿ	ಸರ್ಕಾರಿ ಪ್ರೌಢ ಶಾಲೆ ಕಗದಾಳ ತಾ: ಸವದತ್ತಿ

ಜಂಟಿ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	237
ಸದಸ್ಯರ ಹೆಸರು	ಶ್ರೀ ಎಂ.ಕೃಷ್ಣಾರೆಡ್ಡಿ(ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಚಿಂತಾಮಣಿ ನಗರದ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಅನಧಿಕೃತವಾಗಿ ಸ್ಥಾಪನೆ ಮಾಡಿರುವ ಶ್ರೀ ವಿದ್ಯಾ ಗಣಪತಿ ಟ್ರಸ್ಟ್‌ನ್ನು ರದ್ದು ಮಾಡಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು;	ಚಿಂತಾಮಣಿ ನಗರದ ಬಾಲಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ 3.10 [ಮೂರು ಎಕರೆ ಹತ್ತು ಗುಂಟೆ] ಜಾಗದ ಪೈಕಿ ವಾಣಿಜ್ಯ ಸಂಕೀರ್ಣಗಳ ನಿರ್ಮಾಣದ ಬಗ್ಗೆ ಪ.ಸಂ:ನಸಚಿ/ ಸಿಬ್ಬಂದಿ/ ಸಿಆರ್/ 501/2016-17 ದಿನಾಂಕ: 18-10-2016ರಲ್ಲಿ ನಗರಸಭೆ ಚಿಂತಾಮಣಿ ರವರು ನೀಡಿರುವ ಮಾಹಿತಿಯಲ್ಲಿ ಸದರಿ ಖಾತೆಗಳು 1974-75ನೇ ಸಾಲಿನಲ್ಲಿ ಅಸೆಸ್‌ಮೆಂಟ್ ರಿಜಿಸ್ಟರ್ ಪುಸ್ತಕದಲ್ಲಿ ಶ್ರೀ ವಿದ್ಯಾಗಣಪತಿ ಟ್ರಸ್ಟ್ ಹೆಸರಿಗೆ ಖಾತೆ ದಾಖಲಾಗಿದ್ದು, ಈ ಸಂಬಂಧ ಪರಿಶೀಲಿಸಲಾಗಿ ಪ್ರಸ್ತಾಪಿತ ವಾಣಿಜ್ಯ ಮಳಿಗೆಗಳ ಪರವಾನಗಿ, ನೀಲಿನಕ್ಷೆ ಹಾಗೂ ಇನ್ನಿತರ ಸಂಬಂಧಿತ ದಾಖಲೆಗಳು ಲಭ್ಯವಿರುವುದಿಲ್ಲ. ಶ್ರೀ ವಿದ್ಯಾಗಣಪತಿ ಟ್ರಸ್ಟ್ ಹಾಗೂ ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕುರಿತು ಮೂಲ ದಾಖಲೆಗಳು ಲಭ್ಯವಿಲ್ಲದಿರುವುದರಿಂದ ಸದರಿ ಕಟ್ಟಡ ನಿರ್ಮಾಣ ಮಾಡಿರುವುದು ಅನಧಿಕೃತ ಎಂದು ಪರಿಗಣಿಸಬಹುದಾಗಿದ್ದು, ಕ್ರಯ ಪತ್ರದಲ್ಲಿರುವಂತೆ ಈ ಸರ್ಕಾರಿ ಶಾಲೆಗೆ ಸೇರಿದ 3 ಎಕರೆ 10 ಗುಂಟೆ ಜಮೀನನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾದ್ಯಾಯರ ಹೆಸರಿಗೆ ಖಾತೆ ಮಾಡಿಕೊಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಂತಾಮಣಿ ಇವರು ದಿನಾಂಕ: 03-11-2016 ರಲ್ಲಿ ಪೌರಾಯುಕ್ತರು, ಚಿಂತಾಮಣಿ ನಗರಸಭೆ ಹಾಗೂ ದಿನಾಂಕ: 08-12-2016ರಲ್ಲಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಮನವಿ ಮಾಡಿದ್ದಾರೆ. ಉಪನಿರ್ದೇಶಕರ ಕಛೇರಿಯಿಂದ ದಿನಾಂಕ: 31-12-2016ರಂದು ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ 3.10ಎಕರೆ ಜಮೀನನ್ನು ಶಾಲೆಯ ಹೆಸರಿಗೆ ಖಾತೆ ಮಾಡಿಕೊಡಲು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಹಾಗೂ ಪೌರಾಯುಕ್ತರು, ನಗರಸಭೆ ಚಿಂತಾಮಣಿ ರವರನ್ನು ಕೋರಲಾಗಿದೆ. ಸದರಿ ಪ್ರಕರಣದ ಬಗ್ಗೆ ಕ್ರಮವಹಿಸಲು ತಹಶೀಲ್ದಾರ್ ಚಿಂತಾಮಣಿ, ಪೌರಾಯುಕ್ತರು, ನಗರಸಭೆ ಚಿಂತಾಮಣಿ ರವರಿಗೆ ನಿರ್ದೇಶನ ನೀಡಲು ಜಿಲ್ಲಾಧಿಕಾರಿಗಳಿಗೆ ದಿನಾಂಕ:13-11-2017 ರಂದು ಪತ್ರ ಬರೆದು ಕೋರಲಾಗಿರುತ್ತದೆ. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ದಿನಾಂಕ: 06-02-2018ರ ಪತ್ರದಲ್ಲಿ ಸದರಿ ವಿಚಾರದ ಬಗ್ಗೆ ಪರಿಶೀಲಿಸಿ, ತನಿಖೆ ನಡೆಸಿ, ಸರ್ಕಾರಿ ಶಾಲೆಗೆ ಸೇರಿದ ಜಾಗವನ್ನು ಸಂರಕ್ಷಿಸುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ ಹಾಗೂ ತಹಶೀಲ್ದಾರ್ ಚಿಂತಾಮಣಿ ರವರಿಗೆ ನಿರ್ದೇಶನ ನೀಡಿರುತ್ತಾರೆ. ಉಪನಿರ್ದೇಶಕರ ಕಛೇರಿಯಿಂದ ದಿನಾಂಕ: 09-03-2018 ರಂದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ದಿನಾಂಕ: 15-06-2018 ರಂದು

	ಪತ್ರ ಬರೆದು, ಒತ್ತುವರಿ ತೆರವುಗೊಳಿಸಿ, ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರ ಹೆಸರಿಗೆ ಖಾತಾ ಮಾಡಿಕೊಡಲು ಕೋರಲಾಗಿದೆ. ಪ್ರಸ್ತಾಪಿತ ಶಾಲೆಯ ಆವರಣದಲ್ಲಿ ಅನಧಿಕೃತವಾಗಿ ಸ್ಥಾಪನೆ ಮಾಡಿರುವ ಶ್ರೀ ವಿದ್ಯಾಗಣಪತಿ ಟ್ರಸ್ಟ್‌ನ್ನು ರದ್ದು ಮಾಡಲು ಉಪವಿಭಾಗಾಧಿಕಾರಿಗಳು ಚಿಕ್ಕಬಳ್ಳಾಪುರ ಮತ್ತು ತಹಶೀಲ್ದಾರ್, ಚಿಂತಾಮಣಿ ಹಾಗೂ ಪೌರಾಯುಕ್ತರು, ಚಿಂತಾಮಣಿ ನಗರಸಭೆ ರವರ ಮುಂದಿನ ಕ್ರಮ ನಿರೀಕ್ಷಿಸುತ್ತಿದ್ದು, ಅದರಂತೆ ಮುಂದಿನ ಕ್ರಮವಹಿಸಲಾಗುವುದು.
ಆ) ಶ್ರೀ ವಿದ್ಯಾ ಗಣಪತಿ ಟ್ರಸ್ಟ್ ವತಿಯಿಂದ ಅನಧಿಕೃತವಾಗಿ ನಿರ್ಮಾಣ ಮಾಡಿರುವ ವಾಣಿಜ್ಯ ಮಳಿಗೆಗಳನ್ನು ತೆರವುಗೊಳಿಸಲು ಅಥವಾ ಸರ್ಕಾರದ ವಶಕ್ಕೆ ಪಡೆಯಲು ಕೈಗೊಂಡ ಕ್ರಮಗಳೇನು; (ಪ್ರಸ್ತುತ ವಾಣಿಜ್ಯ ಮಳಿಗೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ವಿವರ ನೀಡುವುದು)	ಉಪನಿರ್ದೇಶಕರ ಕಛೇರಿಯಿಂದ ದಿನಾಂಕ: 09-03-2018 ರಂದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ದಿನಾಂಕ:15-06-2018 ರಂದು ಪತ್ರ ಬರೆದು, ಒತ್ತುವರಿ ತೆರವುಗೊಳಿಸಿ. ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರ ಹೆಸರಿಗೆ ಖಾತಾ ಮಾಡಿಕೊಡಲು ಕೋರಾಗಿದೆ. ಪ್ರಸ್ತಾಪಿತ ಶಾಲೆಯ ಆವರಣದಲ್ಲಿ ಅನಧೀಕೃತವಾಗಿ ಸ್ಥಾಪನೆ ಮಾಡಿರುವ ಶ್ರೀ ವಿದ್ಯಾಗಣಪತಿ ಟ್ರಸ್ಟ್‌ನ್ನು ರದ್ದು ಮಾಡಲು ಉಪವಿಭಾಗಾಧಿಕಾರಿಗಳು ಚಿಕ್ಕಬಳ್ಳಾಪುರ ಮತ್ತು ತಹಶೀಲ್ದಾರ್, ಚಿಂತಾಮಣಿ ಹಾಗೂ ಪೌರಾಯುಕ್ತರು, ಚಿಂತಾಮಣಿ ನಗರಸಭೆ ರವರ ಮುಂದಿನ ಕ್ರಮ ನಿರೀಕ್ಷಿಸುತ್ತಿದ್ದು, ಅದರಂತೆ ಮುಂದಿನ ಕ್ರಮವಹಿಸಲಾಗುವುದು ಪ್ರಸ್ತುತ ವಾಣಿಜ್ಯ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ವಿವರಗಳು ಲಭ್ಯವಿರುವುದಿಲ್ಲ.
ಇ) ವಾಣಿಜ್ಯ ಮಳಿಗೆಗಳಿಂದ ಪ್ರತಿ ಮಾಹೆಯಾನ ವಸೂಲಿ ಮಾಡಲಾಗುತ್ತಿರುವ ಬಾಡಿಗೆ ಎಷ್ಟು; (ಅಂಗಡಿವಾರು ಪೂರ್ಣ ವಿವರ ನೀಡುವುದು)	ವಾಣಿಜ್ಯ ಮಳಿಗೆಗಳನ್ನು ವಿದ್ಯಾಗಣಪತಿ ಟ್ರಸ್ಟ್ ವತಿಯಿಂದ ನಿರ್ಮಿಸಿ, ಬಾಡಿಗೆಗೆ ನೀಡಿರುವುದರಿಂದ ಸದರಿ ವಾಣಿಜ್ಯ ಮಳಿಗೆಗಳಿಂದ ಪ್ರತಿ ಮಾಹೆ ವಸೂಲಿ ಮಾಡುತ್ತಿರುವ ಬಾಡಿಗೆ ವಿವರಗಳು ಲಭ್ಯವಿರುವಿದ್ದಿಲ್ಲ ಮುಂದುವರೆದು, ಇದುವರೆಗೂ ಸರ್ಕಾರಕ್ಕೆ ಯಾವುದೇ ರೀತಿಯಾದ ಬಾಡಿಗೆ ಜಮಾ ಆಗಿರುವುದಿಲ್ಲ.
ಈ) ಯಾವ ಕಾಲಮಿತಿಯೊಳಗೆ ಶ್ರೀ ವಿದ್ಯಾ ಗಣಪತಿ ಟ್ರಸ್ಟ್‌ನ್ನು ತೆರವುಗೊಳಿಸಲಾಗುವುದು?(ವಿವರ ನೀಡುವುದು).	ಉಪವಿಭಾಗಾಧಿಕಾರಿಗಳು ಹಾಗೂ ಪೌರಾಯುಕ್ತರು, ಚಿಂತಾಮಣಿ ಇವರಿಂದ ಬಾಲಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಂತಾಮಣಿ ಈ ಶಾಲೆಯ ಹೆಸರಿಗೆ ಖಾತೆ ಮಾಡಿ ಕೊಟ್ಟ ತಕ್ಷಣ ಶ್ರೀ ವಿದ್ಯಾಗಣಪತಿ ಟ್ರಸ್ಟ್‌ನ್ನು ನಿಯಮಾನುಸಾರ ತೆರವುಗೊಳಿಸಲು ಕ್ರಮ ವಹಿಸಲಾಗುವುದು.

ಇಡಿ 234 ಪಿಎಂಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 44
ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ (ಮಡಿಕೇರಿ)
ಉತ್ತರಿಸಬೇಕಾದ ದಿನಾಂಕ : 10.07.2018
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಈವರೆವಿಗೂ ಸಮವಸ್ತ್ರ ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಗುಲ್ಬರ್ಗ, ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳ ಹಾಗೂ ಬೆಳಗಾವಿ ವಿಭಗದ ಬೆಳಗಾವಿ, ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳ 01 ರಿಂದ 10 ತರಗತಿಯ ಗಂಡು ಮಕ್ಕಳಿಗೆ ಹಾಗೂ 01 ರಿಂದ 07ನೇ ತರಗತಿಯ ಹೆಣ್ಣು ಮಕ್ಕಳಿಗೆ ಸಮವಸ್ತ್ರ ವಿತರಣೆಯನ್ನು ಪೂರ್ಣಗೊಳಿಸಲಾಗಿದೆ. ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಮತ್ತು ಬೆಳಗಾವಿ ವಿಭಾಗದ 06 ಜಿಲ್ಲೆಗಳಿಗೆ ಸಮವಸ್ತ್ರ ವಿತರಣೆಯಾಗಿರುವುದಿಲ್ಲ. 08 ರಿಂದ 10ನೇ ತರಗತಿಯ ರಾಜ್ಯದ ಎಲ್ಲಾ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸಮವಸ್ತ್ರ ಪೂರೈಕೆಯಾಗಿರುವುದಿಲ್ಲ.
(ಆ) ಹಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು;	ಉಳಿದ ಸಮವಸ್ತ್ರ ವಿತರಣೆಯನ್ನು 2018ನೇ ಸಾಲಿನ ಆಗಸ್ಟ್-15ರೊಳಗಾಗಿ ಪೂರ್ಣಗೊಳಿಸಲಾಗುವುದು.
(ಇ)ಹಾಗಿಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು? (ಸಂಪೂರ್ಣ ವಿವರ ನೀಡುವುದು)	ವಿಧಾನ ಸಭಾ ಚುನಾವಣೆ-2018ರ ನೀತಿಸಂಹಿತೆ ಜಾರಿಯಲ್ಲಿದ್ದರಿಂದ ಟೆಂಡರ್ ಪ್ರಕ್ರಿಯೆ ನಡೆಸಲು ವಿಳಂಬವಾಗಿರುತ್ತದೆ.

ಇಡಿ 88 ಯೋಯೋಕ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚು[illegible]ಂಖ್ಯೆ	:	266
ಸ[illegible]	:	ಶ್ರೀ ಎನ್.ಎ. ಹ್ಯಾರಿಸ್ (ಶಾಂತಿನಗರ)
ಉ[illegible]	:	10-07-2018
ಉ[illegible]	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ವಿದ್ಯಾರ್ಥಿಗಳ ಕೊರತೆಯನ್ನಾಧರಿಸಿ ಮುಚ್ಚಲ್ಪಟ್ಟ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆಯೆಷ್ಟು; (ಜಿಲ್ಲಾ ವಿವರ ಒದಗಿಸುವುದು)	ರಾಜ್ಯದಲ್ಲಿ ವಿದ್ಯಾರ್ಥಿಗಳ ಕೊರತೆಯನ್ನಾಧರಿಸಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಲ್ಪಟ್ಟಿರುವುದಿಲ್ಲ. ಆದರೆ ಈ ಕೆಳಕಂಡ 02 ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಆದೇಶಿಸಿರುತ್ತದೆ. 1. ಸರ್ಕಾರಿ ಆದೇಶ ಸಂಖ್ಯೆ ಇಡಿ 271 ಯೋಸಾಕಾ 2014 ದಿನಾಂಕ:-18-11-2015 ರಂತೆ 2015-16ನೇ ಸಾಲಿನಲ್ಲಿ ಸರ್ಕಾರಿ ಶಕುಂತಲಾ ಮರಾಠಿ ಮಾದರಿ ಶಾಲೆ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಶಾಲೆಯ ಕಟ್ಟಡ ಹಳೆಯದಾಗಿದ್ದು, ವಾಣಿಜ್ಯ ವ್ಯವಹಾರದ ಸ್ಥಳವಾಗಿದ್ದು, ಶಬ್ದ ಮಾಲಿನ್ಯದಿಂದ ಕೂಡಿರುವುದರಿಂದ ಈ ಶಾಲೆಯನ್ನು ಮುಚ್ಚಲಾಗಿದೆ. 2. ಸರ್ಕಾರಿ ಆದೇಶ ಸಂಖ್ಯೆ ಇಡಿ 536 ಪಿಬಿಎಸ್ 2015 ದಿನಾಂಕ: 20-05-2016 ರಂತೆ 2016-17ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ವಸಂತನಗರ, ರಾಜಭವನ, ಬೆಂಗಳೂರು ಉತ್ತರ ಜಿಲ್ಲೆ ಈ ಶಾಲೆಯನ್ನು ಭದ್ರತಾ ದೃಷ್ಟಿಯಿಂದ ಮುಚ್ಚಲಾಗಿರುತ್ತದೆ. ಈ ಎರಡೂ ಶಾಲೆಗಳ ಮಕ್ಕಳನ್ನು ಸಮೀಪದ ಶಾಲೆಗೆ ದಾಖಲು ಮಾಡಲಾಗಿದೆ.
ಆ.	[illegible] ಮಾಧ್ಯಮ ಶಾಲೆಗಳನ್ನು ಸಮಕಾಲೀನ [illegible] ಸುಧಾರಿಸುವ ಮತ್ತು ಅಲ್ಲಿ [illegible]ಗಳ ಅಭಿಪ್ರಾಯ ಮತ್ತು [illegible] ಮೇರೆಗೆ ಇಂಗ್ಲೀಷ್ ಭಾಷಾ ಶಿಕ್ಷಣವನ್ನು ನೀಡುವ ಕುರಿತು ಸರ್ಕಾರದ ನಿಲುವೇನು;	1. ಗ್ರಾಮಾಂತರ ಪ್ರದೇಶಗಳಲ್ಲಿ 74 ಆದರ್ಶ ವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ. 2. ಆರ್.ಐ.ಇ, ಬೆಂಗಳೂರು ವತಿಯಿಂದ ಶಿಕ್ಷಕರಿಗೆ 1 ತಿಂಗಳ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗುತ್ತಿದೆ. ಇದರಿಂದ ಸರ್ಕಾರಿ ಶಾಲೆಗಳ ಆಂಗ್ಲ ಭಾಷಾ ಬೋಧನೆ ಉತ್ತಮಗೊಳ್ಳುತ್ತಿದೆ. 3. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ

--

		ತರಗತಿಯಿಂದಲೇ ಆಂಗ್ಲ ಭಾಷೆಯನ್ನು ಚಟುವಟಿಕೆ ಆಧಾರಿತವಾಗಿ ಕಲಿಸಲಾಗುತ್ತಿದೆ. 4. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 6ನೇ ತರಗತಿಯಿಂದ ಆಂಗ್ಲ ಮಾಧ್ಯಮ ವಿಭಾಗ ತೆರೆಯಲು ಅವಕಾಶ ಕಲ್ಪಿಸಲಾಗುತ್ತಿದೆ.
೬.	ಬಹಳಷ್ಟು ಶಾಲೆಗಳಲ್ಲಿ ಜಮೀನು, ಕಟ್ಟಡ, ಮತ್ತಿತರ ಮೂಲಸೌಲಭ್ಯಗಳು ಮತ್ತು ಸರ್ಕಾರದ ಬಿಸಿಯೂಟ/ಹಾಲು/ ಸಮವಸ್ತ್ರ ಮತ್ತಿತರ ಯೋಜನಾ ಸೌಲಭ್ಯಗಳ ನೀಡಿಕೆಯೊಂದಿಗೆ ಪ್ರಸ್ತುತ ಬೇಡಿಕೆಯಾದ ಇಂಗ್ಲೀಷ್ ಬೋಧನೆಯನ್ನು ಕಲ್ಪಿಸಿಕೊಡುವ ಕುರಿತಾದ ನಿರ್ಧಿಷ್ಟ ಕ್ರಿಯಾಯೋಜನೆಗಳು ಯಾವುವು?	1. 1ನೇ ತರಗತಿಯಿಂದ ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷ್‌ನ್ನು ಒಂದು ಭಾಷೆಯಾಗಿ ಕಲಿಸಲು ಕ್ರಮ ಕೈಗೊಳ್ಳಲಾಗಿದೆ. 2. 6ನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಒಂದು ವಿಭಾಗವನ್ನು ತೆರೆಯಲು ಅವಕಾಶ ಮಾಡಲಾಗಿದೆ. 3. 6ನೇತರಗತಿಯಿಂದ ಇಂಗ್ಲೀಷ್ ಕಲಿಸಲು ಆಂಗ್ಲ ಭಾಷಾ ಶಿಕ್ಷಕರನ್ನು ನೇಮಕಮಾಡಿಕೊಳ್ಳಲಾಗುತ್ತಿದೆ. 4. ಸೇವಾ ನಿರತ ಶಿಕ್ಷಕರಿಗೆ ಇಂಗ್ಲೀಷ್ ತರಬೇತಿಯನ್ನು ಡಯಟ್ ಮತ್ತು ಡಿ.ಎಸ್.ಇ.ಆರ್.ಟಿ ಮೂಲಕ ನೀಡಲಾಗುತ್ತಿದೆ. ಶಿಕ್ಷಕರಿಗೆ ಧೀರ್ಘಕಾಲಿಕ ಆಂಗ್ಲ ಭಾಷಾ ತರಬೇತಿಯನ್ನು ಆರ್.ಐ.ಇ ಮೂಲಕ ನೀಡಲಾಗುತ್ತಿದೆ.

ಇಡಿ 37 ಪಿಎಂಎ 2018

(ಎಸ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	258
ಸದಸ್ಯರ ಹೆಸರು	ಶ್ರೀ ಉಮಾನಾಥ ಎಂ.ಕೋಟಿಯನ್(ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	10–07–2018
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು:	ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಿ ಗುಣಾತ್ಮಕ ಶಿಕ್ಷಣವನ್ನು ನೀಡಲು ಸರ್ಕಾರ ಕೆಳಕಂಡಂತೆ ಕ್ರಮ ಕೈಗೊಂಡಿದೆ. 1. ಕನ್ನಡ ಹಾಗೂ ಇತರೆ ಅಲ್ಪಸಂಖ್ಯಾತ ಭಾಷಾ ಮಾಧ್ಯಮ ಶಾಲೆಗಳಲ್ಲಿ ಆಂಗ್ಲ ಭಾಷೆಯನ್ನು ಒಂದು ವಿಷಯವನ್ನಾಗಿ ಕಲಿಸಲು ಅವಕಾಶ ಕಲ್ಪಿಸಲಾಗಿದೆ. 2. 1ನೇ ತರಗತಿಯಿಂದ 3ನೇ ತರಗತಿಗೆ ನಲಿಕಲಿ ಪದ್ಧತಿಯನ್ನು ಅಳವಡಿಸಲಾಗಿದೆ. ಹಾಗೂ ಸಂತಸದಾಯಕ ಕಲಿಕೆಗೆ ಒತ್ತು ನೀಡಲಾಗಿದೆ. 3. ಗಣಿತ ಕಲಿಕೆ ಬಲವರ್ಧನೆಗಾಗಿ 4 ಮತ್ತು 5ನೇ ತರಗತಿಗಳಿಗೆ ಗಣಿತ ಕಲಿಕಾ ಆಂದೋಲನಾ ಕಾರ್ಯಕ್ರಮ ಅನುಷ್ಠಾನಗೊಳಿಸಿದ್ದು ಶಾಲೆಗಳಿಗೆ ಗಣಿತ ಕಿಟ್‌ಗಳನ್ನು ವಿತರಿಸಿದೆ. 4. ಆರ್.ಐ.ಇ, ಬೆಂಗಳೂರು ವತಿಯಿಂದ ಶಿಕ್ಷಕರಿಗೆ 1 ತಿಂಗಳ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗುತ್ತಿದೆ. 5. ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲಾಗುತ್ತಿರುವ ಮೂಲಕ ದಾಖಲಾತಿಯನ್ನು ಉತ್ತಮಪಡಿಸಲಾಗುತ್ತಿದೆ. 6. ಉಚಿತ ಸಮವಸ್ತ್ರ: ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಎರಡು ಸೆಟ್ ಉಚಿತ ಸಮವಸ್ತ್ರವನ್ನು ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಒಂದು ಸೆಟ್ ಉಚಿತ ಸಮವಸ್ತ್ರವನ್ನು ವಿತರಿಸಲಾಗುತ್ತಿದೆ. 7. ಉಚಿತ ಪಠ್ಯ ಪುಸ್ತಕ : 1 ರಿಂದ 10 ತರಗತಿಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸಲಾಗುತ್ತಿದೆ. 8. ಉಚಿತ ಬೈಸಿಕಲ್: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ ಮಾಡಲಾಗುತ್ತಿದೆ. 9. ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ : ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕ್ಷೀರಭಾಗ್ಯ ಹಾಗೂ ಮಧ್ಯಾಹ್ನ ಬಿಸಿ ಊಟ ಯೋಜನೆಯನ್ನು ಜಾರಿಗೊಳಿಸಲಾಗಿದೆ.

	10. ಶೂಭಾಗ್ಯ ಯೋಜನೆ : ಸರ್ಕಾರಿ ಶಾಲೆಗಳ ಎಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ವಿತರಿಸಲಾಗುತ್ತಿದೆ. 11. ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಿ ಖಾತ್ರಿಪಡಿಸಿಕೊಳ್ಳಲು ಸರ್ಕಾರಿ ಶಾಲೆಗಳ 4 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳನ್ನು ವಿತರಿಸಲಾಗುತ್ತಿದೆ. 12. ವಿಶ್ವಾಸ ಕಿರಣ ಕಾರ್ಯಕ್ರಮದ ಮೂಲಕ ಕಲಿಕೆಯಲ್ಲಿ ಹಿಂದುಳಿದ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 13. ರಾಜ್ಯಾದ್ಯಂತ 4 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ CSAS(Census State Achivement Survey) & NAS (National Achievement Survey)ಆಯ್ದ ಶಾಲೆಗಳಿಗೆ ನಡೆಸುವ ಮೂಲಕ ಮಕ್ಕಳ ಕಲಿಕೆಯನ್ನು ವಿಶ್ಲೇಷಿಸಿ ಸುಧಾರಿಸಲು ಕ್ರಮ ಕೈಗೊಳ್ಳಲಾಗಿದೆ. 14. ಶಾಲಾ ತರಗತಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಡಿ.ಎಸ್.ಇ.ಆರ್.ಟಿ ಹಾಗೂ ಡಯಟ್‌ಗಳ ಮೂಲಕ ಗುರುಚೇತನಾ ಕಾರ್ಯಕ್ರಮದನ್ವಯ ಶಿಕ್ಷಕರಿಗೆ ವಿವಿಧ ರೀತಿಯ ಅಗತ್ಯ ತರಬೇತಿಗಳನ್ನು ನೀಡಲಾಗುತ್ತಿದೆ. 15. ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಕಾರ್ಯಕ್ರಮ (ಸಿ.ಎ.ಎಲ್.ಸಿ) ದಡಿಯಲ್ಲಿ ಶಿಕ್ಷಕರಿಗೆ ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ತರಬೇತಿ ನೀಡಲಾಗುತ್ತಿದೆ. 16. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡು ಹಿಡಿಯಲಾಗುತ್ತಿದೆ. 17. ಪ್ರೌಢಶಾಲಾ ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುತ್ತಿದೆ. 18. ಶಾಲೆಗಳ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸುತ್ತಿದ್ದು ಶಾಲಾ ಅನುದಾನ ಹಾಗೂ ನಿರ್ವಹಣಾ ಅನುದಾನ ನೀಡಲಾಗುತ್ತಿದೆ ಹಾಗೂ ಆಯ್ದ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. 19. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ಓದು ಕರ್ನಾಟಕ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. 20. ಗ್ರಾಮಾಂತರ ಪ್ರದೇಶಗಳಲ್ಲಿ 74 ಆದರ್ಶ ವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ. 21. ಶಿಕ್ಷಕರ ಖಾಲಿ ಹುದ್ದೆಗಳಿಗೆ 25,000 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. 22. 6 ರಿಂದ 8ನೇ ತರಗತಿಗೆ ಬೋಧಿಸಲು 10,000 ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚುತ್ತಿರುವ ಅನಾದಾರ ಮನೋಭಾವನೆಯನ್ನು ಕಡಿಮೆ ಮಾಡಲು ಹಾಗೂ ಆಂಗ್ಲಭಾಷಾ ಕಲಿಕೆಗಾಗಿ ಖಾಸಗಿ ಶಾಲೆಗಳ ಮೊರೆಹೋಗುತ್ತಿರುವುದನ್ನು ತಪ್ಪಿಸಲು ಭಾಷಾ ಕಲಿಕೆಗಾಗಿ ಸರ್ಕಾರ ಅನುಸರಿಸುತ್ತಿರುವ ಕ್ರಮಗಳು ಯಾವುವು;	ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚುತ್ತಿರುವ ಅನಾದಾರ ಮನೋಭಾವನೆಯನ್ನು ಕಡಿಮೆ ಮಾಡಲು ಹಾಗೂ ಆಂಗ್ಲ ಭಾಷಾ ಕಲಿಕೆಗಾಗಿ ಖಾಸಗಿ ಶಾಲೆಗಳ ಮೊರೆಹೋಗುತ್ತಿರುವುದನ್ನು ತಪ್ಪಿಸಲು ಮುಂದಿನ ಸಾಲಿನಲ್ಲಿ ಆಯ್ದ 1000 ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದ ತರಗತಿಗಳನ್ನು ಕೂಡ ಪ್ರಾರಂಭಿಸಲು ಸರ್ಕಾರ 2018–19ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ ಹಾಗೂ ಪ್ರಸ್ತುತ; 1. ಗ್ರಾಮಾಂತರ ಪ್ರದೇಶಗಳಲ್ಲಿ 74 ಆದರ್ಶ ವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ. 2. ಆರ್.ಐ.ಇ, ಬೆಂಗಳೂರು ವತಿಯಿಂದ ಶಿಕ್ಷಕರಿಗೆ 1 ತಿಂಗಳ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗುತ್ತಿದೆ. 3. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲ ಭಾಷೆಯನ್ನು ಚಟುವಟಿಕೆ ಆಧಾರಿತವಾಗಿ ಕಲಿಸಲಾಗುತ್ತಿದೆ. 4. 176 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಿ ಒಂದು ವಿಭಾಗದಲ್ಲಿ ಆಂಗ್ಲ ಭಾಷಾ ಬೋಧನೆಗೆ ಒತ್ತು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ಕಾರಣವನ್ನು ಆಧರಿಸಿ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;	2017–18ನೇ ಸಾಲಿನವರೆಗೆ ಅಧಿಕೃತವಾಗಿ ಯಾವುದೇ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿರುವುದಿಲ್ಲ ಹಾಗೂ ಮುಚ್ಚಿರುವುದಿಲ್ಲ. ಶೂನ್ಯ ದಾಖಲಾತಿಯಿರುವ 1 ಕಿ.ಮೀ ಸುತ್ತಳತೆಯಲ್ಲಿ ಶಾಲೆಗಳನ್ನು ಸ್ಥಳೀಯ ಶಾಲೆಗಳಿಗೆ ವಿಲೀನಗೊಳಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು 2018–19ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.
ಈ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ;	ರಾಜ್ಯದಲ್ಲಿ ವಿದ್ಯಾರ್ಥಿಗಳ ಕೊರತೆಯನ್ನಾಧರಿಸಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಲ್ಪಟ್ಟಿರುವುದಿಲ್ಲ. ಆದರೆ ಈ ಕೆಳಕಂಡ 02 ಸರ್ಕಾರಿ ಶಾಲೆಗಳನ್ನು ಮಾತ್ರ ಮುಚ್ಚಲು ಸರ್ಕಾರ ಆದೇಶಿಸಿರುತ್ತದೆ. 1. ಸರ್ಕಾರಿ ಆದೇಶ ಸಂಖ್ಯೆ ಇಡಿ 271 ಯೋಸಾಕಾ 2014 ದಿನಾಂಕ:–18-11-2015 ರಂತೆ 2015–16ನೇ ಸಾಲಿನಲ್ಲಿ ಸರ್ಕಾರಿ ಶಕುಂತಲಾ ಮರಾಠಿ ಮಾದರಿ ಶಾಲೆ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಶಾಲೆಯ ಕಟ್ಟಡ ಹಳೆದಾಗಿದ್ದು, ವಾಣಿಜ್ಯ ವ್ಯವಹಾರದ ಸ್ಥಳವಾಗಿದ್ದು, ಶಬ್ದ ಮಾಲಿನ್ಯದಿಂದ ಕೂಡಿರುವುದರಿಂದ ಈ ಶಾಲೆಯನ್ನು ಮುಚ್ಚಲಾಗಿದೆ. 2. ಸರ್ಕಾರಿ ಆದೇಶ ಸಂಖ್ಯೆ ಇಡಿ 536 ಪಿಬಿಎಸ್ 2015 ದಿನಾಂಕ: 20–05–2016 ರಂತೆ 2016–17ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ವಸಂತನಗರ, ರಾಜಭವನ, ಬೆಂಗಳೂರು ಉತ್ತರ ಜಿಲ್ಲೆ ಈ ಶಾಲೆಯನ್ನು ಭದ್ರತಾ ದೃಷ್ಟಿಯಿಂದ ಮುಚ್ಚಲಾಗಿರುತ್ತದೆ. ಈ ಎರಡೂ ಶಾಲೆಗಳ ಮಕ್ಕಳನ್ನು ಸಮೀಪದ ಶಾಲೆಗೆ ದಾಖಲು ಮಾಡಲಾಗಿದೆ.

ಉ) ಎಷ್ಟು ಶಾಲೆಗಳನ್ನು ವಿಲೀನಗೊಳಿಸಲಾಗಿದೆ? (ಜಿಲ್ಲಾವಾರು ಹಾಗೂ ಸಂಖ್ಯಾವಾರು ಮಾಹಿತಿ ಒದಗಿಸುವುದು)	2017–18ನೇ ಸಾಲಿನವರೆಗೆ ಅಧಿಕೃತವಾಗಿ ಯಾವುದೇ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿರುವುದಿಲ್ಲ.

ಇಡಿ 363 ಪಿಜಿಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	260
ಸದಸ್ಯರ ಹೆಸರು	:	ಶ್ರೀ ಉಮಾನಾಥ ಎಂ. ಕೋಟಿಯನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ರಾಜ್ಯದಲ್ಲಿ 3 ವರ್ಷಗಳ ಹಿಂದೆ ಇದ್ದ ಸರ್ಕಾರಿ ಶಾಲೆಗಳು ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಇರುವ ಶಾಲೆಗಳು ಎದುರಿಸುತ್ತಿರುವ ಮೂಲಸೌಲಭ್ಯಗಳು ಮತ್ತು ಅವುಗಳನ್ನು ಪರಿಪೂರ್ಣವಾಗಿ ಒದಗಿಸಿಕೊಡುವತ್ತ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲೆಗಳಿಗೆ ಕೊಠಡಿಗಳ ನಿರ್ಮಾಣ, ಹೆಚ್ಚುವರಿ ಕೊಠಡಿ, ಕೊಠಡಿಗಳ ದುರಸ್ಥಿ, ಹಾಗೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶೌಚಾಲಯ ನಿರ್ಮಾಣ, ಶೌಚಾಲಯ ನಿರ್ವಹಣೆ, ಈ ರೀತಿಯಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.
(ಆ) ಕಳೆದ 3 ವರ್ಷಗಳ ಅವಧಿಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವ ಶಾಲೆಗಳಲ್ಲಿ ಪ್ರಮುಖವಾಗಿರುವ ಶೌಚಾಲಯಗಳು, ಕುಡಿಯುವ ನೀರು, ಆಟದ ಮೈದಾನ, ಕ್ರೀಡಾ ಸಾಮಾಗ್ರಿಗಳು, ಸುವ್ಯವಸ್ಥಿತ ಕಟ್ಟಡಗಳು ಮುಂತಾದ ಅತ್ಯಾವಶ್ಯಕ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿರುವ ಶಾಲೆಗಳನ್ನು ಸುವ್ಯವಸ್ಥೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	(see table and text below)

ವರ್ಷ	ಕೊಠಡಿ ನಿರ್ಮಾಣ/ದುರಸ್ಥಿ (ರೂ.ಲಕ್ಷಗಳಲ್ಲಿ)	ಶೌಚಾಲಯ (ರೂ.ಲಕ್ಷಗಳಲ್ಲಿ)	ಕಾಂಪೌಂಡ್ & ಆಟದ ಮೈದಾನ (ರೂ.ಲಕ್ಷಗಳಲ್ಲಿ)
2015-16	9960.28	400.00	148.84
2016-17	7836.46	---	998.50
2017-18	21608.65	2000.00	---

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಆಟದ ಮೈದಾನ ಸೌಲಭ್ಯವಿಲ್ಲದ ಶಾಲೆಗಳಲ್ಲಿ ಒಳಾಂಗಣ ಕ್ರೀಡೆಗಳನ್ನು ಆಡಿಸುವುದು ಮತ್ತು ಯೋಗ ರೂಡಿಸುವುದು, ಸಾಮೂಹಿಕ ವ್ಯಾಯಾಮ ಮಾಡಿಸುವುದು. ಸಾರ್ವಜನಿಕ ಆಟದ ಮೈದಾನವನ್ನು ಬಳಸಿಕೊಳ್ಳುವುದು. ಯುವ ಜನ ಸೇವಾ ಇಲಾಖೆಯಡಿ ನಿರ್ಮಿಸುವ ಆಟದ ಮೈದಾನವನ್ನು ಬಳಸಿಕೊಳ್ಳುವಂತೆ ಶಾಲೆಗಳಿಗೆ ಸೂಚಿಸುವುದರೊಂದಿಗೆ ಕ್ರಮ ವಹಿಸಿದೆ. ಕ್ರೀಡಾ ಸಾಮಾಗ್ರಿಗಳ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿರುವ ಶಾಲೆಗಳಲ್ಲಿ ಸುವ್ಯವಸ್ಥೆಗೊಳಿಸಲು ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಕ್ರೀಡಾ ಶುಲ್ಕದಿಂದ 65% ಕ್ರೀಡೋಪರಕಣಗಳ ಖರೀದಿಗೆ. (ಶಾಲಾ ಹಂತದಲ್ಲಿ) ಮತ್ತು 5% ಇತರೆ ಕ್ರೀಡೋಪಕರಣಗಳ ದುರಸ್ಥಿಗೆ ಉಪಯೋಗಿಸಲು ಕ್ರಮ ವಹಿಸಿದೆ. (ಶಾಲಾ ಹಂತದಲ್ಲಿ)

(ಇ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾನ್ವೆಂಟ್‌ಗಳನ್ನು ಸಕ್ರಮಗೊಳಿಸಲಾಗಿದೆ; (ಜಿಲ್ಲಾವಾರು ಸಂಖ್ಯಾವಾರು ವಿವರ ಒದಗಿಸುವುದು)	ರಾಜ್ಯದಲ್ಲಿ ಯಾವುದೇ ನೋಂದಾಯಿತ ಸಂಸ್ಥೆಗಳು ಖಾಸಗಿ ಶಾಲೆಗಳನ್ನು ತೆರೆಯಲು ಕರ್ನಾಟಕ ಶಿಕ್ಷಣ ಕಾಯ್ದೆ-1983 ಸೆಕ್ಷನ್-30&31 ಹಾಗೂ ಶಿಕ್ಷಣ ಕಾಯ್ದೆಯಡಿ ರಚಿತವಾದ ನಿಯಮಗಳನ್ವಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಶಾಲೆಗಳನ್ನು ಪ್ರಾರಂಭಿಸಬೇಕಾಗಿದೆ. ಇಲಾಖೆಯ ಪೂರ್ವಾನುಮತಿ ಪಡೆದು ಖಾಸಗಿ ಶಾಲೆಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ಸಕ್ರಮಗೊಳಿಸುವ ಪ್ರಮೇಯ ಉದ್ಭವವಾಗುವುದಿಲ್ಲ.
(ಈ) ಸರ್ಕಾರಿ ಶಾಲೆಗಳನ್ನು ಸಮಗ್ರ ರೀತ್ಯಾ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಗುರಿ-ಸಾಧನೆಗಳೇನು?	ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಆಗುತ್ತಿರುವುದನ್ನು ಗಮನಿಸಿ, ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಿ ಗುಣಾತ್ಮಕ ಶಿಕ್ಷಣವನ್ನು ನೀಡಲು ಸರ್ಕಾರ ಕೆಳಕಂಡಂತೆ ಕ್ರಮ ಕೈಗೊಂಡಿದೆ. 1. ಕನ್ನಡ ಹಾಗೂ ಇತರೆ ಅಲ್ಪಸಂಖ್ಯಾತ ಭಾಷಾ ಮಾಧ್ಯಮ ಶಾಲೆಗಳಲ್ಲಿ ಆಂಗ್ಲ ಭಾಷೆಯನ್ನು ಒಂದು ವಿಷಯವನ್ನಾಗಿ ಕಲಿಸಲು ಅವಕಾಶ ಕಲ್ಪಿಸಲಾಗಿದೆ. 2. 1ನೇ ತರಗತಿಯಿಂದ 3ನೇ ತರಗತಿಗೆ ನಲಿಕಲಿ ಪದ್ಧತಿಯನ್ನು ಅಳವಡಿಸಲಾಗಿದೆ ಹಾಗೂ ಸಂತಸದಾಯಕ ಕಲಿಕೆಗೆ ಒತ್ತು ನೀಡಲಾಗಿದೆ. 3. ಗಣಿತ ಕಲಿಕೆ ಬಲವರ್ಧನೆಗಾಗಿ 4 ಮತ್ತು 5ನೇ ತರಗತಿಗಳಿಗೆ ಗಣಿತ ಕಲಿಕಾ ಆಂದೋಲನಾ ಕಾರ್ಯಕ್ರಮ ಅನುಷ್ಠಾನಗೊಳಿಸಿದ್ದು ಶಾಲೆಗಳಿಗೆ ಗಣಿತ ಕಿಟ್‌ಗಳನ್ನು ವಿತರಿಸಿದೆ. 4. ಆರ್.ಐ.ಇ, ಬೆಂಗಳೂರು ವತಿಯಿಂದ ಶಿಕ್ಷಕರಿಗೆ 1 ತಿಂಗಳ ಆಂಗ್ಲ ಭಾಷೆ ಬೋಧನಾ ತರಬೇತಿ ನೀಡಲಾಗುತ್ತಿದೆ. 5. ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳನ್ನು ಪರಿಣಾಮಕಾರಿಯಗಿ ಅನುಷ್ಠಾನಗೊಳಿಸಲಾಗುತ್ತಿರುವ ಮೂಲಕ ದಾಖಲಾತಿಯನ್ನು ಉತ್ತಮಪಡಿಸಲಾಗುತ್ತಿದೆ. 6. ಉಚಿತ ಸಮವಸ್ತ್ರ: ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಎರಡು ಸೆಟ್ ಉಚಿತ ಸಮವಸ್ತ್ರವನ್ನು ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಒಂದು ಸೆಟ್ ಉಚಿತ ಸಮವಸ್ತ್ರವನ್ನು ವಿತರಿಸಲಾಗುತ್ತಿದೆ. 7. ಉಚಿತ ಪಠ್ಯ ಪುಸ್ತಕ: 1 ರಿಂದ 10 ತರಗತಿಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸಲಾಗುತ್ತಿದೆ. 8. ಉಚಿತ ಬೈಸಿಕಲ್: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ ಮಾಡಲಾಗುತ್ತಿದೆ. 9. ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ವಿತರಿಸಲಾಗುತ್ತಿದೆ.

	10. ಶೂಭಾಗ್ಯ ಯೋಜನೆ: ಸರ್ಕಾರಿ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ವಿತರಿಸಲಾಗುತ್ತಿದೆ. 11. ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಿ ಖಾತ್ರ ಪಡಿಸಿಕೊಳ್ಳಲು ಸರ್ಕಾರಿ ಶಾಲೆಗಳ 4 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳನ್ನು ವಿತರಿಲಾಗುತ್ತಿದೆ. 12. ವಿಶ್ವಾಸ ಕಿರಣ ಕಾರ್ಯಕ್ರಮದ ಮೂಲಕ ಕಲಿಕೆಯಲ್ಲಿ ಹಿಂದುಳಿದ ಸರ್ಕಾರಿ ಪ್ರೌಢಾಶಾಲಾ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 13. ರಾಜ್ಯಾದ್ಯಂತ 4 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ CSAS(Census State Achivement Survey) & NAS (National Achievement Survey)(ಆಯ್ದ ಶಾಲೆಗಳಿಗೆ ನಡೆಸುವ ಮೂಲಕ ಮಕ್ಕಳ ಕಲಿಕೆಯನ್ನು ವಿಶ್ಲೇಷಿಸಿ ಸುಧಾರಿಸಲು ಕ್ರಮ ಕೈಗೊಳ್ಳಲಾಗಿದೆ. 14. ಶಾಲಾ ತರಗತಿಗಳನ್ನು ಪರಿಣಾಮಕಾರಿಯಗಿ ನಿರ್ವಹಿಸಲು ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಡಿ.ಎಸ್.ಇ.ಆರ್.ಟಿ ಹಾಗೂ ಡಯಟ್‌ಗಳ ಮೂಲಕ ಗುರುಚೇತನಾ ಕಾರ್ಯಕ್ರಮದನ್ವಯ ಶಿಕ್ಷಕರಿಗೆ ವಿವಿಧ ರೀತಿಯ ಅಗತ್ಯ ತರಬೇತಿಗಳನ್ನು ನೀಡಲಾಗುತ್ತಿದೆ. 15. ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಕಾರ್ಯಕ್ರಮ (ಸಿ.ಎ.ಎಲ್.ಸಿ) ದಡಿಯಲ್ಲಿ ಶಿಕ್ಷಕರಿಗೆ ತರಗತಿ ಬೋಧನೆಯಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ತರಬೇತಿ ನೀಡಲಾಗುತ್ತಿದೆ. 16. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡು ಹಿಡಿಯಲಾಗುತ್ತಿದೆ. 17. ಪ್ರೌಢಶಾಲಾ ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುತ್ತಿದೆ. 18. ಶಾಲೆಗಳ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸುತ್ತಿದ್ದು ಶಾಲಾ ಅನುದಾನ ಹಾಗೂ ನಿರ್ವಹಣಾ ಅನುದಾನ ನೀಡಲಾಗುತ್ತಿದೆ ಹಾಗೂ ಆಯ್ದ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. 19. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ಓದು ಕರ್ನಾಟಕ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.] 20. ಗ್ರಾಮಾಂತರ ಪ್ರದೇಶಗಳಲ್ಲಿ 74 ಆದರ್ಶ ವಿದ್ಯಾಲಯಗಳ ಸ್ಥಾಪನೆ ಮೂಲಕ ಗ್ರಾಮೀಣ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ.

ಇಡಿ 196 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	225
ಸದಸ್ಯರ ಹೆಸರು	ಶ್ರೀ ಬಸವರಾಜ್ ಮಟ್ಟಿಮುಡ್ (ಗುಲ್ಬರ್ಗಾ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಕಲಬುರ್ಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಒಟು ಸಂಖ್ಯೆ ಎಷ್ಟು;	ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ-160 ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ-26
ಆ) ಸದರಿ ಶಾಲೆಗಳು ಯಾವ ಯಾವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ; ಒಟ್ಟು ಮಕ್ಕಳ ಸಂಖ್ಯೆ ಎಷ್ಟು;	ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ಮಕ್ಕಳ ಸಂಖ್ಯೆ-15663 ಸರ್ಕಾರಿ ಪ್ರೌಢಶಾಲೆಗಳಲ್ಲಿ ಇರುವ ಮಕ್ಕಳ ಸಂಖ್ಯೆ-6565
ಇ) ಎಷ್ಟು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ;	ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ-752 ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ-337
ಈ) ಶಿಕ್ಷಕರ ಹುದ್ದೆಗಳ ಮಂಜೂರಾದ ಹಾಗೂ ಭರ್ತಿಯಾಗದೆ ಖಾಲಿಯಿರುವ ಹುದ್ದೆಗಳು ಎಷ್ಟು;	<table><tr><th>ವಿವರ</th><th>ಪ್ರಾಥಮಿಕ</th><th>ಪ್ರೌಢ</th></tr><tr><td>ಮಂಜೂರಾದ ಹುದ್ದೆಗಳ ಸಂಖ್ಯೆ</td><td>799</td><td>377</td></tr><tr><td>ಖಾಲಿ ಇರುವ ಹುದ್ದೆಗಳ ಸಂಖ್ಯೆ</td><td>47</td><td>40</td></tr></table>
ಉ) ಕಲಬುರ್ಗಿ ಗ್ರಾಮೀಣ ಮತಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಊ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಶಾಲೆಗಳಿಗೆ ಯಾವ ಕಾಲಮಿತಿಯೊಳಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು;	ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಪೂರೈಸುವ ಕ್ರಿಯಾ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಋ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?	2018-19ನೇ ಸಾಲಿನಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಸಂಪೂರ್ಣವಾಗಿ ಮುಗಿಯುವವರೆಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 228 ಪಿಬಿಎಸ್ 2018 ದಿನಾಂಕ:14-06-2018ರಲ್ಲಿ 2018-19ನೇ ಸಾಲಿಗೆ ಒಟ್ಟು 25600 ಹುದ್ದೆಗಳನ್ನು ಅತಿಥಿ ಶಿಕ್ಷಕರಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 12500 ಹುದ್ದೆಗಳಿಗೆ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 3100 ಹುದ್ದೆಗಳು ಸೇರಿದಂತೆ ಒಟ್ಟು 15600 ಹುದ್ದೆಗಳಿಗೆ

	ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 10000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8)ಹುದ್ದೆಗಳ ನೇರ ನೇಮಕಾತಿ ಹುದ್ದೆಗಳಿಗೆ ಆಯ್ಕೆಗೊಂಡ ಶಿಕ್ಷಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅತಿಥಿ ಶಿಕ್ಷಕರ ನೇಮಕಾತಿ ತಂತಾನೆ ರದ್ದಾಗುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಅನುಮತಿ ನೀಡಲಾಗಿದೆ.

ಇಡಿ 237 ಪಿಎಂಸಿ 2018

[ಎನ್. ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	555
ಸದಸ್ಯರ ಹೆಸರು	ಶ್ರೀ ನರಸಿಂಹನಾಯಕ್ (ರಾಜುಗೌಡ)(ಸುರಪುರ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಸುರಪುರ ತಾಲ್ಲೂಕಿನಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳೆಷ್ಟು;	ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು -2088 ಮಂಜೂರಾದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು -476
ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ-1245 ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ-371
ಇ) ಈ ತಾಲ್ಲೂಕಿನಲ್ಲಿ ಹಾಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ-843 ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ-105
ಈ) ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	2018-19ನೇ ಸಾಲಿನಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಸಂಪೂರ್ಣವಾಗಿ ಮುಗಿಯುವವರೆಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 228 ಪಿಬಿಎಸ್ 2018 ದಿನಾಂಕ:14-06-2018ರಲ್ಲಿ 2018-19ನೇ ಸಾಲಿಗೆ ಒಟ್ಟು 25600 ಹುದ್ದೆಗಳನ್ನು ಅತಿಥಿ ಶಿಕ್ಷಕರಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 12500 ಹುದ್ದೆಗಳಿಗೆ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 3100 ಹುದ್ದೆಗಳು ಸೇರಿದಂತೆ ಒಟ್ಟು 15600 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 10000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8)ಹುದ್ದೆಗಳ ನೇರ ನೇಮಕಾತಿ ಹುದ್ದೆಗಳಿಗೆ ಆಯ್ಕೆಗೊಂಡ ಶಿಕ್ಷಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅತಿಥಿ ಶಿಕ್ಷಕರ ನೇಮಕಾತಿ ತಂತಾನೆ ರದ್ದಾಗುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಅನುಮತಿ ನೀಡಲಾಗಿದೆ.

ಇಡಿ 239 ಪಿಎಂಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	274
ಸದಸ್ಯರ ಹೆಸರು	ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸಬೇಕಾದ ದಿನಾಂಕ	10–07–2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಕಡ್ಡಾಯ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಇಲ್ಲ.
ಆ) 2018ನೇ ಸಾಲಿನಲ್ಲಿ ಕಡ್ಡಾಯ ಶಿಕ್ಷಣದ ಅಧಿನಿಯಮದಡಿ ಎಷ್ಟು ವಿದ್ಯಾರ್ಥಿಗಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಾತಿ ನೀಡಲಾಗಿದೆ:	ದಿನಾಂಕ:07.07.2018ರಲ್ಲಿದ್ದಂತೆ, 2018ನೇ ಸಾಲಿಗೆ ಕಡ್ಡಾಯ ಶಿಕ್ಷಣದ ಅಧಿನಿಯಮದಡಿ 1,19,662 ಮಕ್ಕಳಿಗೆ ಖಾಸಗಿ/ಅನುದಾನಿತ ಶಾಲೆಗಳಲ್ಲಿ ಪ್ರವೇಶಾತಿ ನೀಡಲಾಗಿದೆ.
ಇ) ಸದರಿ ಅಧಿನಿಯಮದಡಿ ಆಯ್ಕೆಗೊಂಡ ಬಡ ವಿದ್ಯಾರ್ಥಿಗಳ ಪ್ರವೇಶಾತಿಗೆ ಶಾಲೆಗಳಲ್ಲಿ ವಿಳಂಬ ಧೋರಣೆ ತೋರಿಸುತ್ತಿರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;	ನ್ಯಾಯಾಲಯದ ತಡೆಯಾಜ್ಞೆ ನೀಡಿರುವ ಶಾಲೆಗಳನ್ನು ಹೊರತು ಪಡಿಸಿ ಯಾವುದೇ ಶಾಲೆ ಪ್ರವೇಶಾತಿಗೆ ವಿಳಂಬ ಧೋರಣೆ ಮಾಡಿರುವುದಿಲ್ಲ.
ಈ) ಇಲ್ಲಿಯತನಕ ಯಾವ ಯಾವ ಶಿಕ್ಷಣ ಸಂಸ್ಥೆಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿದೆ?	ಉದ್ಭವಿಸುವುದಿಲ್ಲ.

ಇಡಿ 359 ಪಿಜಿಸಿ 2018

[ಎನ್.ಮಹೇಶ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: : 182
ಸದಸ್ಯರ ಹೆಸರು : ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ).
ಉತ್ತರಿಸುವ ದಿನಾಂಕ : 10.07.2018.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಹಲವು ಅನಧಿಕೃತ ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಶಾಲೆಗಳನ್ನು ನಿಯಮಾವಳಿಗಳ ವ್ಯಾಪ್ತಿಗೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಇಲ್ಲ. ಹಾಗಾಗಿ ಅನಧಿಕೃತ ಶಾಲೆಗಳನ್ನು ನಿಯಮಾವಳಿಗಳ ವ್ಯಾಪ್ತಿಗೆ ತರುವ ಸಂದರ್ಭ ಉದ್ಭವಿಸುವುದಿಲ್ಲ.
ಆ)	ಹೊಸದಾಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)	ಕರ್ನಾಟಕ ಶಿಕ್ಷಣ ಅಧಿನಿಯಮ 1983, ಕಲಂ 30 ಮತ್ತು 31ರನ್ವಯ ಹಾಗೂ Karnataka Pre-University Education (Academic, Registration, Administration and Grant-in-aid etc) Rules, 2006ರ ನಿಯಮ 3 ಮತ್ತು 4 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 634 ಎಸ್‌ಹೆಚ್‌ಹೆಚ್ 2017, ದಿನಾಂಕ: 24.01.218ರಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಈ ನಿಯಮಗಳನ್ನು www.pue.kar.nic.in ಇಲ್ಲಿ ಸಾರ್ವಜನಿಕವಾಗಿ ಲಭ್ಯಪಡಿಸಲಾಗಿದೆ.
ಇ)	ಹಲವು ಶಿಕ್ಷಣ ಸಂಸ್ಥೆಗಳು ಮೂಲಭೂತ ಸೌಕರ್ಯಗಳು ಇಲ್ಲದೆಯೇ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಮೂಲಭೂತ ಸೌಲಭ್ಯಗಳನ್ನು ಹೊಂದಿರದ ಶಿಕ್ಷಣ ಸಂಸ್ಥೆಗಳಿಗೆ ನಿಯಮಾನುಸಾರ ನೋಟೀಸ್ ಜಾರಿ ಮಾಡಿ, ಸದರಿ ನೋಟೀಸಿಗೆ ಆಡಳಿತ ಮಂಡಳಿಯವರ ನೀಡುವ ಹೇಳಿಕೆಯನ್ನು ಪರಿಶೀಲಿಸಿ ಅಂತಹ ಶಾಲಾ/ಕಾಲೇಜುಗಳ ಮಾನ್ಯತೆಯನ್ನು ಹಿಂಪಡೆಯಲಾಗುತ್ತಿದೆ.

(ಸಂಖ್ಯೆ: ಇಡಿ 371 ಎಸ್‌ಇಎಸ್ 2018)

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	264
ಸದಸ್ಯರ ಹೆಸರು	ಶ್ರೀ ಎನ್.ಎ.ಹ್ಯಾರಿಸ್ (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಶಾಲಾ ಮಕ್ಕಳ ಸುರಕ್ಷತೆ ಕುರಿತಾದ ಪ್ರಸ್ತುತ ಇರುವ ನ್ಯಾಯಾಲಯಗಳ ಆದೇಶಗಳು, ಸರ್ಕಾರದ ಆದೇಶಗಳು ಹಾಗೂ ತಜ್ಞರುಗಳ ಸಲಹೆ ಸೂಚನೆಗಳನ್ವಯ ಸರ್ಕಾರ ಪರಿಶೀಲಿಸುತ್ತಿರುವ ಕಟ್ಟುನಿಟ್ಟಿನ ಕ್ರಮಗಳೇನು;	ರಾಜ್ಯದ ಶಾಲಾ ಮಕ್ಕಳ ಸುರಕ್ಷತಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016 ನ್ನು ಸರ್ಕಾರದ ಆದೇಶ ಸಂಖ್ಯೆ: ಮಮಇ 259 ಮಭಾಬ 2014 ದಿನಾಂಕ: 30-04-2016 ರಂದು ಜಾರಿಗೆ ತಂದಿರುತ್ತದೆ. ಸದರಿ ನೀತಿಯನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸಮಗ್ರವಾಗಿ ಅನುಷ್ಠಾನ ಮಾಡುವಂತೆ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದಿನಾಂಕ: 28-07-2016 ಮತ್ತು 12-04-2017 ರಂದು ಸುತ್ತೋಲೆಗಳನ್ನು ಹೊರಡಿಸಿ ನಿರ್ದೇಶನ ನೀಡಲಾಗಿದೆ. ಮಕ್ಕಳ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರೂಪಿಸಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ – 2016 ನ್ನು ಕಟ್ಟುನಿಟ್ಟಾಗಿ ಪಾಲಿಸುವ ಸಂಬಂಧ ಸರ್ಕಾರವು ಕರ್ನಾಟಕ ಶಿಕ್ಷಣ ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ತರಲಾಗಿದ್ದು ದಿನಾಂಕ: 22-04-2017 ರಂದು ಅಧಿಸೂಚನೆಯನ್ನು ಹೊರಡಿಸಿದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 21 ಶಾಸನ: 2017 ದಿನಾಂಕ: 22-04-2017ರಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ-1983 ಕ್ಕೆ ತಿದ್ದುಪಡಿ ತರಲಾಗಿದ್ದು ಸೆಕ್ಷನ್-5ಎ ಪ್ರಕಾರ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಯನ್ನು ಎಲ್ಲಾ ಶಾಲೆಗಳಲ್ಲೂ ಒದಗಿಸುವುದು ಕಡ್ಡಾಯ. ಸೆಕ್ಷನ್-5ಎ ಉಲ್ಲಂಘಿಸಿದಲ್ಲಿ ಸೆಕ್ಷನ್ 112-ಎ ಪ್ರಕಾರ ರೂ.10.00 ಲಕ್ಷಗಳ ವರೆಗೆ ದಂಡ ವಿಧಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ.
ಆ) ಸುತ್ತೋಲೆಗಳ ಮೂಲಕ ಸರ್ಕಾರ ವಿಶೇಷತ: ಖಾಸಗಿ ಶಾಲೆಗಳಿಗೆ ಸುರಕ್ಷತಾ ನಿಯಮಗಳ ಕುರಿತು ತಿಳಿವಳಿಕೆ ನೀಡುತ್ತಿದ್ದರೂ, ಅಲ್ಲಲ್ಲಿ ಉಲ್ಲಂಘನೆಯ ಹಾಗೂ ಅಸುರಕ್ಷತೆಯ ಪರಿಣಾಮವಾಗಿ ಆಗುತ್ತಿರುವ ಅನಾಹುತಗಳನ್ನು ಲಕ್ಷಿಸಿ ಶಾಲೆಗಳಲ್ಲಿನ ಸುರಕ್ಷತಾ ವ್ಯವಸ್ಥೆಗಳ ಪಾಲನೆಯನ್ನು ಪರಿಪೂರ್ಣವಾಗಿ ಅನುಸರಿಸಲು ಇಲಾಖೆಯವರು ಕೈಗೊಂಡ ಪರಿಣಾಮಕಾರಿ ಕ್ರಮಗಳೇನು;	ಕರ್ನಾಟಕ ಶಿಕ್ಷಣ ಕಾಯ್ದೆ-1983 ಕ್ಕೆ ತಿದ್ದುಪಡಿ ತರಲಾಗಿದ್ದು ಸೆಕ್ಷನ್-5ಎ ಪ್ರಕಾರ ವಿದ್ಯಾರ್ಥಿಗಳ ಸುಕರ್ಷತೆ ಮತ್ತು ಭದ್ರತೆಯನ್ನು ಎಲ್ಲಾ ಶಾಲೆಗಳಲ್ಲೂ ಒದಗಿಸುವುದು ಕಡ್ಡಾಯ. ಸೆಕ್ಷನ್-5ಎ ಉಲ್ಲಂಘಿಸಿದಲ್ಲಿ ಸೆಕ್ಷನ್ 112-ಎ ಪ್ರಕಾರ ರೂ.10.00 ಲಕ್ಷಗಳ ವರೆಗೆ ದಂಡ ವಿಧಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ.

<table>
<tr><td></td><td>ಮಕ್ಕಳ ಸುರಕ್ಷತೆಯನ್ನು ಕಾಪಾಡುವಂತೆ ಇಲಾಖೆಯಲ್ಲಿ ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದಿನಾಂಕ:23-7-2014, ದಿನಾಂಕ:28-7-2016 ಮತ್ತು ದಿನಾಂಕ:16-8-2017ರಲ್ಲಿ ಸುತ್ತೋಲೆಗಳನ್ನು ಹೊರಡಿಸಿ ನಿರ್ದೇಶನ ನೀಡಲಾಗಿದೆ.</td></tr>
<tr><td>ಇ) ಮಕ್ಕಳ ಪಾಲಕರು ತಮ್ಮದೇ ವ್ಯಾಪ್ತಿಯಲ್ಲಿ ಖಾಸಗಿ ತ್ರಿಚಕ್ರ ವಾಹನ, ಮತ್ತಿತರ ವಾಹನಗಳನ್ನು ಅವಲಂಬನೆ ಮಾಡುತ್ತಿರುವುದು ಅಂಥ ವಾಹನಗಳಲ್ಲಿ ಯಾವುದೇ ನಿರ್ಘಂದನೆಗಳಿಲ್ಲದಂತೆ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತುಂಬಿಕೊಂಡು ಶಾಲೆಗಳಿಗೆ ಕೊಂಡೊಯ್ಯುವುದನ್ನು ನಿರ್ಬಂದಿಸಲು ಸರ್ಕಾರದ ಕ್ರಮಗಳೇನು;</td><td>ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.709.ಪಿಜಿಸಿ.2017, ದಿನಾಂಕ:8-3-2018ರಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಸದರಿ ನಿಯಮಗಳನ್ನು ನೂತನ ಶಾಲೆಗಳ ನೋಂದಣಿ ಪ್ರಕ್ರಿಯೆಯಲ್ಲಿ ಕಟ್ಟುನಿಟ್ಟಿನ ಅನುಪಾಲನೆ ಮಾಡಲಾಗುತ್ತಿದೆ.</td></tr>
<tr><td>ಈ) ಮಕ್ಕಳ ಸುರಕ್ಷತೆಯು ಪರಿಪೂರ್ಣ ರೀತ್ಯಾ ವ್ಯವಸ್ಥೆಗೊಳಿಸಿ ಅನುಸರಿಸುವ ದಿಶೆಯಲ್ಲಿ ಇಲಾಖೆಯ ಸಕಾಲಿಕ ಕ್ರಮಗಳು ಯಾವುವು;</td><td rowspan="2">ಮಕ್ಕಳ ಸುರಕ್ಷತೆಯನ್ನು ಕಾಪಾಡುವಂತೆ ಇಲಾಖೆಯಲ್ಲಿ ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದಿನಾಂಕ:23-7-2014, ದಿನಾಂಕ: 28-7-2016 ಮತ್ತು ದಿನಾಂಕ: 16-8-2017 ಸುತ್ತೋಲೆಗಳನ್ನು ಹೊರಡಿಸಿ ನಿರ್ದೇಶನ ನೀಡಲಾಗಿದೆ. ಜಿಲ್ಲಾ ಹಂತದಲ್ಲೂ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳು ಆಡಳಿತ ಮಂಡಳಿ ಹಾಗೂ ಶಾಲಾ ಮುಖ್ಯಸ್ಥರ ಸಭೆ ನಡೆಸಿ ಸೂಕ್ತ ಸೂಚನೆ ನೀಡುತ್ತಿರುವರು.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಶಾಲಾ ಮಕ್ಕಳ ಭದ್ರತೆ ಮತ್ತು ಸುರಕ್ಷತೆಯ ಕೈಪಿಡಿಯನ್ನು ಪರಿಚಯಿಸಿದ್ದು, ಈ ಸಂಬಂಧ ಕೈಪಿಡಿಯಲ್ಲಿನ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ದಿನಾಂಕ:17-5-2018 ರಂದು ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದೆ. ಮಕ್ಕಳ ಸಹಾಯವಾಣಿ 1098 ಎಲ್ಲಾ ಶಾಲೆಗಳಲ್ಲೂ ಪ್ರಕಟಿಸಲಾಗಿದ್ದು ಸಿಸಿಟಿವಿ ಅಳವಡಿಸಲಾಗುತ್ತಿದೆ.</td></tr>
<tr><td>ಉ) ಅವುಗಳ ಅನುಷ್ಠಾನದ ಕುರಿತು ಖಚಿತಪಡಿಸುವಲ್ಲಿನ ಕ್ರಮಗಳು ಯಾವುವು?</td></tr>
</table>

ಇಡಿ 358 ಪಿಜಿಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 273
ಸದಸ್ಯರ ಹೆಸರು : ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸಬೇಕಾದ ದಿನಾಂಕ : 10.07.2018
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡುವಲ್ಲಿ ಇಲಾಖೆ ವಿಳಂಬ ದೋರಣೆ ತೋರಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು;	ವಿಧಾನ ಸಭಾ ಚುನಾವಣೆ-2018ರ ನೀತಿಸಂಹಿತೆ ಜಾರಿಯಲ್ಲಿದ್ದರಿಂದ ಸಮವಸ್ತ್ರ ವಿತರಣೆಯ ಟೆಂಡರ್ ಪ್ರಕ್ರಿಯೆ ನಡೆಸಲು ವಿಳಂಬವಾಗಿರುತ್ತದೆ.
(ಆ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇಲ್ಲಿಯತನಕ ಎಷ್ಟು ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಒಟ್ಟಾರೆ ರಾಜ್ಯದ 44.57 ಲಕ್ಷ ವಿದ್ಯಾರ್ಥಿಗಳಲ್ಲಿ ಒಟ್ಟು 25.57 ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆಯಾಗಿದೆ. ಉಳಿದ ಎಲ್ಲಾ ವಿದ್ಯಾರ್ಥಿಗಳಿಗೆ ಆಗಸ್ಟ್-15ರೊಳಗಾಗಿ ವಿತರಣೆ ಮಾಡಲಾಗುವುದು. ಜಿಲ್ಲಾವಾರು ವಿತರಣೆ ಮಾಡಿರುವ ಬಗ್ಗೆ ವಿವರನ್ನು ಅನುಬಂಧ-1 ರಲ್ಲಿ ಒದಗಿಸಿದೆ.
(ಇ) ಸಮವಸ್ತ್ರ ವಿತರಣೆ ಮಾಡುವಲ್ಲಿ ವಿಳಂಬವು ಪ್ರತಿವರ್ಷ ಪುನರಾವರ್ತಿತವಾಗುತ್ತಿದ್ದು, ಇದರ ಬಗ್ಗೆ ಸರ್ಕಾರದಿಂದ ಶಾಶ್ವತ ಪರಿಹಾರ ರೂಪಿಸಲಾಗಿದೆಯೇ;	ಪ್ರತಿ ವರ್ಷ ಸಮವಸ್ತ್ರ ವಿತರಣೆ ಮಾಡುವಲ್ಲಿ ವಿಳಂಬವಾಗಿರುವುದಿಲ್ಲ. ಅದರೆ ಪ್ರಸಕ್ತ ಸಾಲಿನಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಸಮವಸ್ತ್ರ ಖರೀದಿಗಾಗಿ ಟೆಂಡರ್ ಪ್ರಕ್ರಿಯೆ ನಡೆಸಲು ವಿಳಂಬವಾಗಿದೆ. ಅದಾಗ್ಯೂ ಆಗಸ್ಟ್-15ರೊಳಗಾಗಿ ಸಮವಸ್ತ್ರ ವಿತರಿಸಲು ಕ್ರಮವಹಿಸಲಾಗುತ್ತಿದೆ.
(ಈ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ವಿತರಿಸಲಾದ/ಬಾಕಿ ಇರುವ ಶಾಲೆಗಳ ವಿವರ ನೀಡುವುದು;	ಉಡುಪಿ ಸೇರಿದಂತೆ ಮೈಸೂರು ವಿಭಾಗದ ಯಾವುದೇ ಜಿಲ್ಲೆಗಳಿಗೆ ಸಮವಸ್ತ್ರ ವಿತರಣೆಯಾಗಿರುವುದಿಲ್ಲ. ಟೆಂಡರ್ ಮೂಲಕ ಸಮವಸ್ತ್ರ ವಿತರಣೆ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಆಗಸ್ಟ್-15 ರೊಳಗಾಗಿ ಉಡುಪಿ ಜಿಲ್ಲೆ ಹಾಗೂ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಸಮವಸ್ತ್ರ ವಿತರಿಸಲು ಕ್ರಮವಹಿಸಲಾಗುತ್ತಿದೆ.
(ಉ) ಬಾಕಿಯಿರುವ ವಿದ್ಯಾರ್ಥಿಗಳಿಗೆ ಯಾವಾಗ ಸಮವಸ್ತ್ರ ವಿತರಿಸಲಾಗುವುದು?	2018ನೇ ಸಾಲಿನ ಆಗಸ್ಟ್-15 ರೊಳಗಾಗಿ ಎಲ್ಲಾ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸಲು ಕ್ರಮವಹಿಸಲಾಗುತ್ತಿದೆ.

ಇಡಿ 87 ಯೋಯೋಕ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ ಸಂಖ್ಯೆ-273

UNIFORM ANNEXURE -1		
SL.NO	DISTRICT	NO.OF. STUDENTS DISTRIBUTION
	Bangalore Division	
1	BANGALORE NORTH	67,633
2	BANGALORE SOUTH	1,04,304
3	BANGALORE RURAL	52,673
4	RAMANAGARA	54,814
5	TUMKUR	90,869
6	MADHUGIRI	70,774
7	CHIKKABALLAPUR	69,449
8	KOLAR	83,088
9	CHITRADURGA	1,21,748
10	DAVANAGERE	1,27,131
11	SHIVMOGA	1,08,735
	Gulbarga Division	
12	BELLARY	2,23,473
13	BIDAR	1,17,577
14	GULBARGA	2,29,343
15	KOPPAL	1,65,094
16	RAICHUR	2,19,646
17	YADGIR	1,52,980
	Belgaum Division	
18	DHARWAD	1,26,596
19	BELGAUM	1,80,926
20	BAGALKOT	1,90,714
21	GADAG	ವಿತರಣೆ ಕಾರ್ಯ ಚಾಲ್ತಿಯಲ್ಲಿರುತ್ತದೆ
22	CHIKODI	
23	UTTARAKANNADA	
24	SIRSI	
25	VIJAYAPURA	
26	HAVERI	
	Mysore Division	
27	MYSORE	ಚುನಾವಣಾ ನೀತಿ ಸಂಹಿತೆ ಚಾಲ್ತಿಯಲ್ಲಿದ್ದರಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಿರುತ್ತದೆ. ಅದಾಗ್ಯೂ ಪ್ರಸ್ತುತ ಟೆಂಡರ್ ಮೂಲಕ ಆಗಸ್ಟ-16 ರೊಳಗಾಗಿ ಸಮವಸ್ತ್ರ ವಿತರಣೆ ಮಾಡಲು ತಿಳಿಸಿದೆ
28	MANDYA	
29	CHAMARAJNAGAR	
30	KODAGU	
31	HASSAN	
32	CHIKMAGALUR	
33	DAKSHINA KANNADA	
34	UDUPI	

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	178
ಸದಸ್ಯರ ಹೆಸರು	ಶ್ರೀ ಎಸ್.ಎನ್.ಸುಬ್ಬಾರೆಡ್ಡಿ (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಖಾಸಗಿ ಶಾಲೆ ತೆರೆಯಲು ಶಿಕ್ಷಣ ಇಲಾಖೆಯಿಂದ ನಿಗದಿಪಡಿಸಿರುವ ಮಾನದಂಡಗಳೇನು;	ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ:08.03.2018ರಲ್ಲಿ ನಿಗಧಿ ಪಡಿಸಿರುವ ಮಾನದಂಡಗಳಂತೆ ಖಾಸಗಿ ಅನುದಾನಿತ ಶಾಲೆಗಳನ್ನು ತೆರೆಯಲು ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು;	ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 59 ಶಾಲೆಗಳಿರುತ್ತವೆ.
ಇ) ಬಾಗೇಪಲ್ಲಿ ಕ್ಷೇತ್ರದಲ್ಲಿರುವ ಎಷ್ಟು ಖಾಸಗಿ ಶಾಲೆಗಳಲ್ಲಿ ಈ ಎಲ್ಲಾ ಮಾನದಂಡಗಳನ್ನು ಪಾಲಿಸಲಾಗಿದೆ.	ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಖಾಸಗಿ ಶಾಲೆಗಳಲ್ಲಿ ನಿಯಮಾನುಸಾರ ಸರ್ಕಾರದ ಆದೇಶದಂತೆ ಎಲ್ಲಾ ಮಾನದಂಡಗಳನ್ನು ಪಾಲಿಸುವ ಬಗ್ಗೆ ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳಂತೆ ಕ್ರಮ ವಹಿಸಲಾಗುತ್ತಿದೆ.
ಈ) ಮೂಲಭೂತ ಸೌಕರ್ಯಗಳಿಲ್ಲದೇ ನಡೆಸುತ್ತಿರುವ ಶಾಲೆಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;	ಬಾಗೇಪಲ್ಲಿ ತಾಲ್ಲೂಕಿನ ಎಲ್ಲಾ ಖಾಸಗಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿರುತ್ತವೆ.
ಉ) ಸರ್ಕಾರಿ ಆದೇಶದಂತೆ ನಿಯಮ ಪಾಲಿಸದ, ಮೂಲಭೂತ ಸೌಕರ್ಯ ಕಲ್ಪಿಸದ ಶಾಲೆಗಳ ವಿರುದ್ಧ ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು;?	ಎಲ್ಲಾ ಖಾಸಗಿ ಶಾಲೆಗಳಲ್ಲಿಯೂ ನಿಯಮಗಳನ್ನು ಪಾಲಿಸಲಾಗುತ್ತಿದೆ.

ಇಡಿ 361 ಪಿಜಿಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 186
2 ಸದಸ್ಯರ ಹೆಸರು : ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ)
3 ಉತ್ತರಿಸಬೇಕಾದ ದಿನಾಂಕ : 10.07.2018
4 ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆಗಳು	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಉದ್ಯಮಗಳೆಷ್ಟು;	ರಾಜ್ಯದಲ್ಲಿ ಒಟ್ಟು 60 ಸಾರ್ವಜನಿಕ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಈ ಪೈಕಿ ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯಮಗಳೆಷ್ಟು;	ಈ ಪೈಕಿ 11 ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ.
ಇ)	ಅವುಗಳು ಎಷ್ಟು ವರ್ಷಗಳಿಂದ ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ;	**ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ
ಈ)	ನಷ್ಟದ ಕಾರಣದಿಂದ ಕಳೆದ 03 ವರ್ಷಗಳಲ್ಲಿ ಎಷ್ಟು ಉದ್ಯಮಗಳನ್ನು ಸ್ಥಗಿತಗೊಳಿಸಲಾಗಿದೆ;	ನಷ್ಟದ ಕಾರಣದಿಂದ ಕಳೆದ 03 ವರ್ಷಗಳಲ್ಲಿ 01 ಉದ್ದಿಮೆಯನ್ನು ಸ್ಥಗಿತಗೊಳಿಸಲಾಗಿದೆ.
ಉ)	ಈ ಉದ್ಯಮಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಎಂ.ಪಿ.ಎಂ.ನ ನಿರುತ್ಪಾದಕ ಘಟಕ ಹಾಗೂ ಸತತ ಕ್ರೋಢೀಕೃತ ನಷ್ಟವನ್ನು ಹೊಂದುತ್ತಿರುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಎಂ.ಪಿ.ಎಂ. ಕಾರ್ಖಾನೆಯ ಕಾರ್ಯಾಚರಣೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ನಿರ್ಧರಿಸಿರುತ್ತದೆ.
ಊ)	ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕಳೆದ 03 ವರ್ಷಗಳಲ್ಲಿ ತೆಗೆದುಕೊಂಡ ಕ್ರಮಗಳೇನು;	60 ನಿಗಮ/ಮಂಡಳಿಗಳ ಪೈಕಿ 11 ನಿಗಮಗಳು ನಷ್ಟದಲ್ಲಿರುತ್ತದೆ. ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಪುನಶ್ಚೇತನಗೊಳಿಸಲು ಕೆಲವು ಪ್ರಾಯೋಜಿತ ಯೋಜನೆಗಳನ್ನು ಜಾರಿಗೊಳಿಸಿದೆ. ಗುತ್ತಿಗೆ ಆಧಾರದ ಮೇಲೆ ನವೀಕರಣಗೊಳಿಸಲು ಖಾಸಗಿಯವರಿಗೆ ನೀಡಲಾಗಿದೆ ಮತ್ತು ಈ ಉದ್ಯಮಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದಿಂದ ಆರ್ಥಿಕ ನೆರವು ನೀಡಲಾಗುತ್ತಿದೆ.

..2

ಖ)	ನಷ್ಟದ ಕಾರಣದಿಂದ ಸಂಪೂರ್ಣವಾಗಿ ನಿಲ್ಲಿಸಲಾಗಿರುವ ಉದ್ಯಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಸರ್ಕಾರ ಒದಗಿಸಿರುವ ಪರಿಹಾರ ಮಾರ್ಗಗಳು ಯಾವುವು;	ಸರ್ಕಾರವು ಎಂ.ಪಿ.ಎಂ. ಕಂಪನಿಯ ಕಾರ್ಯಾಚರಣೆಯನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಲು ನಿರ್ಧರಿಸಿದ್ದರ ಮೇರೆಗೆ ಸರ್ಕಾರವು ಕಂಪನಿಯ ಖಾಯಂ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ಮತ್ತು ಕಂಪನಿಯ ಗುತ್ತಿಗೆ ಕಾರ್ಮಿಕರಿಗೆ ಸ್ವಯಂ ಪ್ರತ್ಯೇಕೀಕರಣ ಯೋಜನೆ (ವಿಎಸ್‌ಎಸ್) ಜಾರಿಗೊಳಿಸಿರುತ್ತದೆ. ಸರ್ಕಾರವು ಕಂಪನಿಗೆ ಗುತ್ತಿಗೆ ನೀಡಲಾಗಿದ್ದ ನಿರ್ಬಂಧಿತ ಅರಣ್ಯ ಪ್ರದೇಶದಲ್ಲಿ ಬೆಳೆಸಲಾಗಿರುವ ನೆಡುತೋಪಿನ ನಿರ್ವಹಣೆ ಮತ್ತು ಕಟಾವು ಮತ್ತು ಪರಿಪಕ್ವ ಮರದ ತಿರುಳಿನ ಮಾರಾಟದ ಹೊಣೆಯನ್ನು ಯಥಾವತ್ತಾಗಿ ಮುಂದುವರಿಸಲು ತೀರ್ಮಾನಿಸಿದೆ. ಆದುದರಿಂದ ಸದರಿ ನಿರ್ಬಂಧಿತ ಅರಣ್ಯ ಪ್ರದೇಶದಲ್ಲಿ ಬೆಳೆದು ನಿಂತಿರುವ ನೆಡುತೋಪುಗಳನ್ನು ಕಾಯುವ ಹಿತದೃಷ್ಟಿಯಿಂದ ಎಂ.ಪಿ.ಎಂ.ನ ಅರಣ್ಯ ವಾಚಕರನ್ನು ಸೇವೆಯಲ್ಲಿ ಉಳಿಸಿಕೊಳ್ಳಲು ತೀರ್ಮಾನಿಸಿದೆ. ವಿ.ಆರ್.ಎಸ್. ಮತ್ತು ವಿ.ಎಸ್.ಎಸ್. ಪ್ಯಾಕೇಜ್‌ಗಾಗಿ ಕರ್ನಾಟಕ ಸರ್ಕಾರವು 345 ಕೋಟಿ ರೂಪಾಯಿಗಳನ್ನು ಎರಡು ಹಂತಗಳಲ್ಲಿ ವಿತರಿಸಲು ಜಾರಿಗೊಳಿಸಿರುತ್ತದೆ. ಒಂದನೇ ಹಂತದ ಹಣವನ್ನು ಮಾರ್ಚ್ 2018ರಲ್ಲಿ ವಿತರಿಸಲಾಗಿದ್ದು, 2ನೇ ಹಂತದ ಹಣವನ್ನು ಕರ್ನಾಟಕ ಸರ್ಕಾರದ ವತಿಯಿಂದ ಭರಿಸಬೇಕಿದೆ. 2018-19ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ 2ನೇ ಹಂತದ ಹಣವನ್ನು ಸರ್ಕಾರವು ಒದಗಿಸುವುದು.
ಎ)	ಬದಲಿ ಉದ್ಯೋಗವಕಾಶ ಒದಗಿಸಿದ ಪ್ರಕರಣಗಳು ಇದ್ದಲ್ಲಿ ಅವು ಯಾವುವು;	ಸರ್ಕಾರದ ವಿಆರ್‌ಎಸ್ / ವಿಎಸ್‌ಎಸ್ ಆದೇಶದನ್ವಯ 2ನೇ ಹಂತದಲ್ಲಿ ಕಾರ್ಖಾನೆಯ ಎಲ್ಲಾ ಖಾಯಂ ಉದ್ಯೋಗಿಗಳು / ಗುತ್ತಿಗೆ ಕಾರ್ಮಿಕರನ್ನು ಸೇವೆಯಿಂದ ವಿಮುಕ್ತಿಗೊಳಿಸಬೇಕಿದೆ. ಕೆಲ ಖಾಯಂ ಉದ್ಯೋಗಿಗಳು ಬೇರೆ ಇಲಾಖೆಗಳಿಗೆ ನಿಯೋಜನೆಯ ಮೇರೆಗೆ ಹೋಗಿದ್ದು, ಕೆಲ ಖಾಯಂ ಉದ್ಯೋಗಿಗಳನ್ನು ಕಾರ್ಖಾನೆಯ ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ಆಡಳಿತ ನಿರ್ವಹಣೆಗಾಗಿ ಉಳಿಸಿಕೊಳ್ಳಲಾಗಿದೆ. ಸರ್ಕಾರದ ನಿರ್ದೇಶನ ಹಾಗು ಸಲಹೆಯಂತೆ ಕಂಪನಿಯನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡುವ ಪ್ರಕ್ರಿಯೆಯ ಸ್ಥಿತಿಯನ್ನು ಅವಲಂಬಿಸಿ ಎಲ್ಲಾ ಖಾಯಂ ಉದ್ಯೋಗಿಗಳನ್ನು 2ನೇ ಹಂತದ ವಿಆರ್‌ಎಸ್ ಪ್ರಯೋಜನಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಸೇವೆಯಿಂದ ಬಿಡುಗಡೆಗೊಳಿಸಲಾಗುವುದು.

ಏ)	ಬಾಕಿ ಇದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?	ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. ಮೇಲಿನ 'ಎ' ರಲ್ಲಿ ವಿವರಿಸಿರುವಂತೆ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಸಾಲುಇ 05 ಎಲ್‌ಎಸಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿಯವರು

ಅನುಬಂಧ–1

ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಉದ್ದಿಮೆಗಳು

ಕ್ರ.ಸಂ	ಸಾರ್ವಜನಿಕ ಉದ್ದಿಮೆಗಳು	ಎಷ್ಟು ವರ್ಷಗಳಿಂದ ನಷ್ಟ ಅನುಭವಿಸುತ್ತಿವೆ
1	ಮೈಸೂರು ಕಾಗದ ಕಾರ್ಖಾನೆ ನಿಯಮಿತ	2010 ರಿಂದ
2	ಮೈಸೂರು ಸಕ್ಕರೆ ಕಂಪನಿ ನಿಯಮಿತ	2005–06 ರಿಂದ
3	ಎನ್‌ಜಿಇಎಫ್(ಹುಬ್ಬಳ್ಳಿ) ನಿಯಮಿತ	ಕಳೆದ 08 ವರ್ಷಗಳಿಂದ (2010–11)
4	ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮ ನಿಯಮಿತ	2014–15 ರಿಂದ
5	ಈಶಾನ್ಯ ಕನಾಟಕ ರಸ್ತೆ ಸಾರಿಗೆ ಸಂಸ್ಥೆ	2000–2001
6	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	2003–04 ರಿಂದ ಇಲ್ಲಿಯವರೆಗೆ ನಷ್ಟ (2006–07 ರಲ್ಲಿ ಲಾಭ)
7	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	2007–08 ರಿಂದ
8	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ	2001–02 ರಿಂದ
9	ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	ಒಂದು ಸೇವಾ ಕ್ಷೇತ್ರದ ಉದ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ.
10	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	ಕಳೆದ 10 ವರ್ಷದಿಂದ ಸತತವಾಗಿ
11	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ	1986–87 ರಿಂದ ಇಲ್ಲಿಯವರೆಗೂ ನಷ್ಟ (1995–96 ರಿಂದ 1999–2000ರವರೆಗೆ ಲಾಭ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	238
ಸದಸ್ಯರ ಹೆಸರು	:	ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ)
ಉತ್ತರಿಸಬೇಕಾದ ದಿನಾಂಕ	:	10-07-2018
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
(ಅ) ಅರಭಾವಿ ಮತಕ್ಷೇತ್ರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಬಂದಿದೆ.
(ಆ) ಹಾಗಿದ್ದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ದುರಸ್ತಿಗೊಳಿಸಲು ಸರ್ಕಾರ ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ;	ಅನುದಾನ ಬಿಡುಗಡೆ ಮಾಡಲಾಗಿದೆ.
(ಇ) ಹಾಗಿದ್ದಲ್ಲಿ, ಇದುವರಿವಿಗೂ ಬಿಡುಗಡೆ ಮಾಡಿರುವ ಅನುದಾನ ಮೊತ್ತವೆಷ್ಟು?	2017-18ನೇ ಸಾಲಿನಲ್ಲಿ ರೂ 17.40 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
(ಈ) ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು (ಉ) ಈಗಲಾದರೂ ಅನುದಾನವನ್ನು ಬಿಡುಗಡೆ ಮಾಡಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ದುರಸ್ತಿಗೆ ಕ್ರಮ ಕೈಗೊಳ್ಳುವುದೇ? ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಹಿರಿಯ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಅರಭಾವಿ ಈ ಶಾಲೆಗೆ ರೂ.8.70 ಲಕ್ಷ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರಭಾವಿ ತೋಟ ಈ ಶಾಲೆಗೆ ರೂ.8.70 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. 2018-19ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಕಟ್ಟಡ ನಿರ್ಮಾಣ/ದುರಸ್ಥಿಗಾಗಿ ವಿಶೇಷ ಪ್ಯಾಕೇಜ್ ಅಡಿ ರೂ.150.00 ಕೋಟಿ ಅನುದಾನ ಒದಗಿಸಲಾಗಿದ್ದು, ಅಗತ್ಯತೆಯನುಸಾರ ಅನುದಾನ ಬಿಡುಗಡೆ -ಗೊಳಿಸಲಾಗುತ್ತಿದೆ.

ಇಡಿ 191 ಯೋಸಕ 2018

(ಎನ್. ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	232
ಸದಸ್ಯರ ಹೆಸರು	ಶ್ರೀ ಪಿ.ರಾಜೀವ್ (ಕುಡಚಿ)
ಉತ್ತರಿಸಬೇಕಾದ ದಿನಾಂಕ	10-07-2018.
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಕುಡಚಿ ಮತಕ್ಷೇತ್ರದಲ್ಲಿ ಆರ್.ಟಿ.ಇ. ವ್ಯಾಪ್ತಿಗೆ ಒಳಪಡುವ ಶಾಲೆಗಳ ಸಂಖ್ಯೆ ಎಷ್ಟು; ಎಷ್ಟು ವಿದ್ಯಾರ್ಥಿಗಳಿಗೆ ಆರ್.ಟಿ.ಇ. ಸೀಟು ಒದಗಿಸಲಾಗಿದೆ; (ಶಾಲೆಗಳ ವಿವರ ನೀಡುವುದು)	1) ಶಾಲೆಗಳ ಸಂಖ್ಯೆ: 84 2) ಆರ್.ಟಿ.ಇ. ಸೀಟು : 471. ಕುಡಚಿ ಮತಕ್ಷೇತ್ರದಲ್ಲಿ ಆರ್.ಟಿ.ಇ. ವ್ಯಾಪ್ತಿಗೆ ಒಳಪಡುವ ಶಾಲೆಗಳಲ್ಲಿ ಹಂಚಿಕೆ ಆಗಿರುವ ಸೀಟುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ) ಕುಡಚಿ ಪಟ್ಟಣದ ಖಾಸಗಿ ಶಾಲೆಗಳಾದ ರಾಯಲ್ ಇಂಡಿಯನ್ ಅಕಾಡೆಮಿ ಮತ್ತು ಜಿ ಇಂಟರ್‌ನ್ಯಾಷನಲ್ ಶಾಲೆಗಳು ಆರ್.ಟಿ.ಇ. ನಿಂದ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ) ಹಾಗಿದ್ದಲ್ಲಿ, ಈ ಬಗ್ಗೆ ಶಿಕ್ಷಣಾಧಿಕಾರಿಗಳು ಮೌನವಾಗಿರಲು ಕಾರಣವೇನು;	ದಿನಾಂಕ:25-06-2018ರಂದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರು ಈ ಎರಡು ಶಾಲೆಗಳಿಗೆ ಸಂದರ್ಶನ ನೀಡಿದ್ದು, ಈ ಎರಡು ಶಾಲೆಗಳಿಗೆ ದಿನಾಂಕ:25-06-2018ರಂದು ನೋಟಿಸ್ ನೀಡಲಾಗಿರುತ್ತದೆ. ಸದರಿ ಶಾಲಾ ಮುಖ್ಯೋಪಾಧ್ಯಾಯರಿಂದ ಲಿಖಿತ ಹೇಳಿಕೆಯನ್ನು ಪಡೆದುಕೊಂಡು, ಅವರ ಹೇಳಿಕೆಯನ್ನು ನಿಯಮಾನುಸಾರ ಪರಿಶೀಲಿಸಿ, ಸದರಿ ಶಾಲಾ ಮುಖ್ಯೋಪಾಧ್ಯಾಯರು ಹೆಚ್ಚಿಗೆ ಶುಲ್ಕ ಪಡೆದಿರುವುದು ಸಾಬೀತಾದಲ್ಲಿ ಈ ಸಂಬಂಧವಾಗಿ ಡೇರಾ ಸಮಿತಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ಈ) ಇಂತಹ ಅಧಿಕಾರಿಗಳ ಮೇಲೆ ಹಾಗೂ ಶಾಲೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು.	ಕ್ಷೇತ್ರ ಶಿಕ್ಷಣಾಧಿಕಾರಿ, ರಾಯಭಾಗ ಇವರು ಈಗಾಗಲೇ ಕ್ರಮ ಕೈಗೊಂಡಿರುವುದಾಗಿ ವರದಿ ಮಾಡಿದ್ದು, ಹೆಚ್ಚಿಗೆ ಶುಲ್ಕ ಪಡೆದಿರುವುದು ಸಾಬೀತಾದಲ್ಲಿ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಇಡಿ 360 ಪಿಜಿಸಿ 2018

[ಎನ್.ಮಹೇಶ್]

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

(4) 5/5/2005

School wise seats allocation, seats allotted and admitted details RTE 2018

Kudachi Assembly

Sl. No.	Dise code	School Name	Entry Class	25 % seats Total	Total First Round	Second Round	Third Round	Total	Total Admitted First Round	Second Round	Third Round	Total
1	29301000115	Shri Saraswati Vidyalaya KLPS Alakhanur	Class 1	2	2	0	0	2	2	0	0	2
2	29301000116	SMT SUNITA S PAMADINNI K M P SCHOOL ALAKNUR	LKG	10	9	0	1	10	9	0	1	10
3	29301000117	SHRI RAJARAJESHWARI MATA KANNADA MEDIUM PRIMARY SCHOOL	Class 1	3	3	0	0	3	3	0	0	3
4	29301000206	SANGOLLI RAYANNA PRIMARY (AIDED)SCHOOL	Class 1	11	0	0	0	0	0	0	0	0
5	29301000210	S B GHATAGE PRIMARY SCHOOL ALAGWADI	Class 1	9	6	0	3	9	6	0	3	9
6	29301000408	KALPVRAKSHA PRIMARY SCHOOL BASTAWAD	Class 1	9	6	0	2	8	6	0	2	8
7	29301000605	AMAR PRIMARY SCHOOL (AIDED)	Class 1	11	2	0	0	2	2	0	0	2
8	29301001703	SWAMY VIVEKANAND PRIMARY (AIDED) YABARATTI	Class 1	5	1	0	0	1	1	0	0	1
9	29301001905	KHPS SHRI MAHALAXMI (UNAIDED)	Class 1	5	3	0	2	5	3	0	2	5
10	29301002015	Higher Primary School (UNAIDED)BHARATI Harugeri	Class 1	8	4	0	0	4	4	0	0	4
11	29301002018	VIVEKANAND PRIMARY(AIDED) HARUGERI	Class 1	7	2	0	0	2	2	0	0	2
12	29301002022	KARISIDDESHWAR PRIMARY (AIDED)	Class 1	10	0	0	0	0	0	0	0	0
13	29301002024	PRATIBHA HADAKAR HIGHER PRIMARY SCHOOL(UNAIDED) HARUGERI	Class 1	2	1	0	0	1	1	0	0	1
14	29301002026	KALIDAS PRIMARY (UNAIDED)HARUGERI	Class 1	10	5	0	0	5	5	0	0	5
15	29301002028	ADRASH PRIMARY (UNAIDED)	Class 1	12	7	0	0	7	7	0	0	7
16	29301002033	JANODAYA HARUGERI CROSS (UNAIDED)	Class 1	12	9	0	3	12	9	0	3	12
17	29301002039	CHANNAVRISHABHENDRA PRIMARY and H S	Class 1	21	9	0	0	9	9	0	0	9
18	29301002047	ST. PT. ENG H.S. (UNAIDED)	Class 1	16	12	2	4	18	10	2	4	16
19	29301002050	SHARADA K M P S HARUGERI	Class 1	4	1	0	0	1	1	0	0	1
20	29301002051	S B DARUR E M P S HARUGERI	Class 1	19	16	0	3	19	16	0	3	19
21	29301002052	LITTLE HEARTS ENGLISH MEDIUM SCHOOL HARUGERI	Class 1	6	5	1	0	6	5	1	0	6
22	29301002056	SUMADHUR PRIMARY	LKG	9	8	0	1	9	8	0	1	9
23	29301002058	NETAJI PRIMARY SCHOOL	Class 1	5	3	0	0	3	3	0	0	3

(3)

School wise seats allocation, seats allotted and admitted details RTE 2018

Kudachi Assembly

Sl. No	Dise code	School Name	Entry Class	25 % seats Total	Total First Round	Second Round	Third Round	Total	Total Admitted First Round	Second Round	Third Round	Total
1	29301000115	Shri Saraswati Vidyalaya KLPS Alakhanur	Class 1	2	2	0	0	2	2	0	0	2
2	29301000116	SMT SUNITA S PAMADINNI K M P SCHOOL ALAKNUR	LKG	10	9	0	1	10	9	0	1	10
3	29301000117	SHRI RAJARAJESHWARI MATA KANNADA MEDIUM PRIMARY SCHOOL	Class 1	3	3	0	0	3	3	0	0	3
4	29301000206	SANGOLLI RAYANNA PRIMARY (AIDED)SCHOOL	Class 1	11	0	0	0	0	0	0	0	0
5	29301000210	S B GHATAGE PRIMARY SCHOOL ALAGWADI	Class 1	9	6	0	3	9	6	0	3	9
6	29301000408	KALPVRAKSHA PRIMARY SCHOOL BASTAWAD	Class 1	9	6	0	2	8	6	0	2	8
7	29301000605	AMAR PRIMARY SCHOOL (AIDED)	Class 1	11	2	0	0	2	2	0	0	2
8	29301001703	SWAMY VIVEKANAND PRIMARY (AIDED) YABARATTI	Class 1	5	1	0	0	1	1	0	0	1
9	29301001905	KHPS SHRI MAHALAXMI (UNAIDED)	Class 1	5	3	0	2	5	3	0	2	5
10	29301002015	Higher Primary School (UNAIDED)BHARATI Harugeri	Class 1	8	4	0	0	4	4	0	0	4
